ಸಂಪುಟ: ೩೮ ಸಂಚಿಕೆ: ೦೨ | ಏಪ್ರಿಲ್ 2025
ಬೆಲೆ: ರೂ. 7/-

# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ | SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ



ಏಪ್ರಿಲ್ 24, 2025

**ಪಕ್ಷದ 78ನೇ ಸಂಸ್ಥಾಪನಾ ದಿನದಂದು ಕಾಮ್ರೇಡ್ ಶಿವದಾಸ್ ಘೋಷ್ ಅವರ ಬೋಧನೆಗಳ ಸ್ಮರಣೆ.**

ನೆನಪಿಡಿ, ಒಂದು ರಾಷ್ಟ್ರವು ಉನ್ನತ ಮಾನವ ಮೌಲ್ಯಗಳನ್ನು ಹೊಂದಿದ್ದರೆ ಹಸಿವಿನಿಂದ ಬಳಲುತ್ತಿದ್ದರೂ ಸಹ ದಿಟ್ಟವಾಗಿ ನಿಲ್ಲಬಹುದು, ಆಹಾರವಿಲ್ಲದೆಯೂ ಸಹ ಹೋರಾಟ ನಡೆಸಬಹುದು. ಆದರೆ ಫ್ಯಾಸಿಸಂ ಬೇರೂರಿದರೆ, ಮನುಷ್ಯ ಎಂದು ಕರೆಯಲು ಯೋಗ್ಯರಾದ ಕೆಲವೇ ಜನರು ದೇಶದಲ್ಲಿ ಉಳಿಯುತ್ತಾರೆ. ಏಕೆಂದರೆ ಫ್ಯಾಸಿಸಂ ಮಾನವ ನಿರ್ಮಾಣ ಪ್ರಕ್ರಿಯೆಯಲ್ಲಿ ಅಡಚಣೆಯನ್ನು ಸೃಷ್ಟಿಸುತ್ತದೆ.

ಒಳ ಪುಟಗಳಲ್ಲಿ............

ಅಮೆರಿಕದ ಜನರನ್ನು ವಿನಾಶಕ್ಕೆ ತಳ್ಳುತ್ತಿರುವ ಟ್ರಂಪ್ ನೀತಿಗಳು------4
ರಾಜ್ಯದಾದ್ಯಂತ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ---------5
ಭೂಮಿ-ಬೆಲೆ ಹಕ್ಕಿಗಾಗಿ ರೈತರ ಭಾರಿ ಪ್ರತಿಭಟನೆ-------------------6
ಮೋದಿ-ಟ್ರಂಪ್, ಮೋದಿ-ಮಸ್ಕ್ ಭೇಟಿ - ನಡೆದದ್ದೇನು? --------------7
ಸಿರಿಯಾ: ಸಾಮ್ರಾಜ್ಯಶಾಹಿಗಳ ಕುತಂತ್ರದ ಹೊಸ ತಾಣ ------8
ಗುಜಾರಾತ್: ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ರದ್ದುಗೊಳಿಸಬೇಕು---9
ವಿದ್ಯುತ್ ಖಾಸಗೀಕರಣದ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟ ರೂಪಿಸಿ!----10
ಎಐಡಿಎಸ್ಓ ಕಾರ್ಯಕರ್ತೆಯರ ಮೇಲೆ ಅಮಾನವೀಯ ಚಿತ್ರಹಿಂಸೆ-11
ಪ್ರತಿಭಟನೆಯ ಧ್ವನಿ ಎತ್ತುವ ಹಕ್ಕು ಪ್ರಜಾಪ್ರಭುತ್ವದ ಜೀವಾಳ---------12

### ಕೇಂದ್ರ ಬಿಜೆಪಿ ಆಡಳಿತ

## ಪ್ರಜಾತಂತ್ರದ ಪತನ

ಇತಿಹಾಸದ ಗತಿ ತಿಳಿಯದವರಿಗೆ ಪ್ರಜಾತಂತ್ರವೇ ಅತ್ಯಂತ ಶ್ರೇಷ್ಠ ವ್ಯವಸ್ಥೆ ಎಂದೆನಿಸಬಹುದು. ಬದಲಾವಣೆ ಅಸಾಧ್ಯ ಎಂದೂ ಅನ್ನಿಸಬಹುದು. ಆದರೆ ಇದು ಸತ್ಯವೇ? ಪ್ರಸ್ತುತ ಸಂವಿಧಾನ ಹಾಗೂ ಪ್ರಜಾತಾಂತ್ರಿಕ ಮೌಲ್ಯಗಳು ಸಮಾಜದ ಆರ್ಥಿಕ ಅಡಿಪಾಯ ಬದಲಾದಾಗ ರಚಿಸಲ್ಪಟ್ಟ ಮೇಲ್‌ರಚನೆಗಳು. ಈ ಬದಲಾವಣೆಯ ನಿಯಮ ಏನು? ಈ ಕೆಲವು ಪ್ರಶ್ನೆಗಳಿಗೆ ಉತ್ತರ ಹುಡುಕೋಣ.

#### ಪ್ರಜಾತಂತ್ರದ ಉಗಮ

ಕೈಗಾರಿಕಾ ಕ್ರಾಂತಿಯ ಕಾಲ, ಬಂಡವಾಳಶಾಹಿ ಪ್ರಜಾತಾಂತ್ರಿಕ ಕ್ರಾಂತಿಯು ಅಂದಿನ ಹಳೆಯ ಊಳಿಗಮಾನ್ಯ ವ್ಯವಸ್ಥೆಯನ್ನು ಕಿತ್ತೊಗೆದು ಹೊಸ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಿತು. ಮುಕ್ತ ಪೈಪೋಟಿಯ ಆಧಾರದ ಮೇಲೆ ರಚನೆಗೊಂಡ ಬಂಡವಾಳಶಾಹಿ ವ್ಯವಸ್ಥೆಯು ಕೈಗಾರಿಕರಣಕ್ಕೆ ಇಂಬು ನೀಡಿತು. ಈ ಆರ್ಥಿಕ ಪರಿಸ್ಥಿತಿಗೆ ಹೊಂದಿಕೊಂಡಂತೆ ರಾಜಕೀಯ, ನೈತಿಕ, ಸಾಂಸ್ಕೃತಿಕ ಹಾಗೂ ನ್ಯಾಯ ಪರಿಕಲ್ಪನೆಗಳುಳ್ಳ ಹೊಸ ಮೇಲ್‌ರಚನೆಯು ರೂಪಗೊಂಡಿತು. ಹೊಸ ವ್ಯವಸ್ಥೆಯ ಉಗಮದ ಹೊಸ್ತಿಲಲ್ಲಿದ್ದ ಈ ಕಾಲಮಾನದಲ್ಲಿ ಬಂಡವಾಳವಾದವು ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರದ ಕಲ್ಪನೆಗಳೊಂದಿಗೆ ಸಮಾಜ ಮುನ್ನಡೆಸುವ ಚುಕ್ಕಾಣಿ ಹಿಡಿದಿತ್ತು. ವ್ಯವಸ್ಥೆಯನ್ನು ಮುನ್ನಡೆಸಲು 3 ಅಂಗಗಳನ್ನು ರಚಿಸಲಾಯಿತು: (1) ಕಾನೂನುಗಳನ್ನು ರಚಿಸಲು ಶಾಸಕಾಂಗ, (2) ಕಾನೂನುಗಳ ಸರಿಯಾದ ವ್ಯಾಖ್ಯಾನ ಖಾತ್ರಿಪಡಿಸಲು ನ್ಯಾಯಾಂಗ, (3) ಕಾನೂನನ್ನು ಅನುಷ್ಠಾನಕ್ಕೆ ತರುವ ಹಾಗೂ ವ್ಯವಸ್ಥೆಯನ್ನು ನಡೆಸಲು ಪೊಲೀಸ್, ಮಿಲಿಟರಿ ಹಾಗೂ ಅಧಿಕಾರಿಗಳನ್ನೊಳಗೊಂಡ ಕಾರ್ಯಾಂಗ. ಎಲ್ಲಾ ಅಂಗಗಳ ಕರ್ತವ್ಯಗಳನ್ನು ವ್ಯಾಖ್ಯಾನಿಸಿ ಸಾಪೇಕ್ಷ ಸ್ವಾಯತ್ತತೆಯನ್ನು ನೀಡಲಾಯಿತು. ಇವೆಲ್ಲವುಗಳ ಮೇಲೆ ನಿಗಾ ವಹಿಸಲು ಪ್ರಜಾತಂತ್ರದ ನಾಲ್ಕನೇ ಅಂಗ ಮಾಧ್ಯಮದ ಉಗಮವಾಯಿತು.

ರಾಜಾಡಳಿತದ ಜಾಗದಲ್ಲಿ ಹೊಸ ಜನರಾಜ್ಯದ ಉಗಮವಾಯಿತು. ರಾಜಕೀಯ ಪಕ್ಷಗಳು, ಕಾರ್ಮಿಕ ಸಂಘಟನೆಗಳು ಜನ್ಮ ತಾಳಿದವು. ಮುಕ್ತ ಚುನಾವಣೆಯ ಮೂಲಕ ಜನರ ಧ್ವನಿ ಪ್ರತಿನಿಧಿಸುವ ಜನಪ್ರತಿನಿಧಿಗಳು ಶಾಸಕಾಂಗಕ್ಕೆ ಚುನಾಯಿತರಾಗುವರು. ಬಹುಮತ ಪಡೆದವರು ಸರ್ಕಾರ ರಚಿಸುವರು ಹಾಗೂ ಇತರರು ವಿರೋಧ ಪಕ್ಷಗಳಾಗುವರು. ಪ್ರಜಾತಂತ್ರ ಅತಂತ್ರವಾಗದಂತೆ ಪ್ರಜಾತಂತ್ರದ ಹರಿಕಾರರು ಜನರ ಬಾಧ್ಯತೆಗಳನ್ನು ಹಾಗೂ ತಮ್ಮ ಪ್ರಜ್ಞಾಮಟ್ಟ ಹೆಚ್ಚಿಸಿಕೊಳ್ಳುವ ಮಾರ್ಗಸೂಚಿಯನ್ನು ಹಾಕಿಕೊಟ್ಟರು. ಜನರ ಬದುಕಿನ ಸಮಸ್ಯೆಗಳ ಕುರಿತು ಚರ್ಚಿಸುವ ಮೂಲಕ ಕಾನೂನುಗಳು ರಚನೆಗೊಳ್ಳಬೇಕು ಹಾಗೂ ನೀತಿಗಳು ರೂಪಗೊಳ್ಳಬೇಕು. ಜನರ ಪ್ರತಿನಿಧಿಗಳಾದ ಕಾರಣ ವಿರೋಧ ಪಕ್ಷದವರಿಗೂ ಅಷ್ಟೇ ಪ್ರಾಮುಖ್ಯತೆ ನೀಡಬೇಕು. ಪ್ರತಿನಿಧಿಗಳು ಕೆಲವರೇ ಆದರೂ ಅವರು ಇಡೀ ಜನಸಮುದಾಯದ ಧ್ವನಿಯನ್ನು ಪ್ರತಿನಿಧಿಸಬೇಕು. ಜನರ ಆಶೋತ್ತರಗಳು, ಬೇಡಿಕೆಗಳಿಗೆ ಧ್ವನಿ ನೀಡುವಂತಹ, ಅಬ್ರಾಹಂ ಲಿಂಕನ್‌ರವರು ಹೇಳುವಂತೆ, 'ಜನರಿಂದ, ಜನಗಳಿಗಾಗಿ, ಜನಗಳಿಗೋಸ್ಕರ' ಸರ್ಕಾರ ನಡೆಯಬೇಕು. ಭಿನ್ನಾಭಿಪ್ರಾಯಗಳಿಗೆ ಅವಕಾಶವಿರಬೇಕು, ಅಲ್ಪಸಂಖ್ಯಾತರ ಹಕ್ಕುಗಳನ್ನು ಕಾಯ್ದುಕೊಳ್ಳಬೇಕು. ಒಟ್ಟಿನಲ್ಲಿ ಸಂಸತ್ತಿನ ಸಾರ್ವಭೌಮತ್ವ ನೈಜತೆಯಲ್ಲಿ ಜನರ ಸಾರ್ವಭೌಮವಾಗಿರಬೇಕು. 2ನೇ ಪುಟಕ್ಕೆ

## ಕರ್ನಾಟಕ ಬಜೆಟ್ 2025

## ಬಡವರ ತುತ್ತಿನಿಂದ ಕಿತ್ತು, ಧನಿಕರ ಹಣದ ಥೈಲಿ ತುಂಬಿಸುವ ಲೆಕ್ಕಾಚಾರ!

#### ಬಜೆಟ್-ಮನಿಟ್ರ್ಯಾಪ್

ಮಾರ್ಚ್ ತಿಂಗಳ ಕೊನೆಯಲ್ಲಿ 2025-26 ನೇ ಸಾಲಿನ ಕರ್ನಾಟಕ ರಾಜ್ಯ ಸರ್ಕಾರದ ಬಜೆಟ್ ಮಂಡನೆಯಾಗಿ ಅನುಮೋದನೆ ಪಡೆದುಕೊಂಡಿತು. ಮೊದಲೆಲ್ಲಾ ಬಜೆಟ್ ಮಂಡನೆಯಾಗುತ್ತದೆ ಅಂದರೆ ಜನಸಾಮಾನ್ಯರಿಗೆ ಸಡಗರದ ವಿಷಯವಾಗಿತ್ತು. ಹಳ್ಳಿಯ ಕಟ್ಟೆಯ ಮೇಲೆ ಕುಳಿತವರಿಂದ ಹಿಡಿದು ಗೂಡಂಗಡಿಯ ಮುಂದೆ ನೆರೆದವರವರೆಗೆ ಪ್ರತಿಯೊಬ್ಬರೂ ಕೂಡ 'ಇನ್ನು ಇದು ಸೋವಿ, ಅದು ತುಟ್ಟಿ' ಎಂದು ತಮ್ಮದೇ ಆರ್ಥಿಕ ವಿಶ್ಲೇಷಣೆಯನ್ನು ನೀಡುವ ಕಾಲವಿತ್ತು. ಈಗ ಜನಸಾಮಾನ್ಯರಿಗೆ ಅದೊಂದು ಕುತೂಹಲದ ವಿಷಯವಾಗಿ ಉಳಿದಿಲ್ಲ. ಬಜೆಟ್‌ನಲ್ಲಿನ ಅಂಶಗಳ ಬಗ್ಗೆ ಸರ್ಕಾರದ ಬದ್ಧತೆಯೂ ಉಳಿದಿಲ್ಲ. ಬಜೆಟ್ ಮಂಡನೆ ಒಂದು ಕ್ಲೀಷೆಯ ವಿಷಯವಾಗಿ ಹಾಗೂ ಒಂದು ಯಾಂತ್ರಿಕ ಕ್ರಿಯೆಯಾಗಿ ಉಳಿದಿದೆ. ಬಜೆಟ್ ಕಲಾಪವೂ ಜನರ ಆಶೋತ್ತರಗಳು, ನಿರೀಕ್ಷೆಗಳನ್ನು ಚರ್ಚಿಸುವ-ಸ್ಪಂದಿಸುವ ಕ್ರಿಯೆಯಾಗಿ ಉಳಿದಿಲ್ಲ. ವಿಧಾನಸಭಾ ಕಲಾಪ ಅಂದರೇನೆ ಗದ್ದಲ ಮಾಡುವ ಕ್ರಿಯೆಯಾಗಿ ಉಳಿದಿದೆ. ಈ ಸಲವಂತೂ 'ಹನಿಟ್ರ್ಯಾಪ್' ಗದ್ದಲದಲ್ಲಿ ಸರ್ಕಾರದ 'ಮನಿಟ್ರ್ಯಾಪ್' ಸದ್ದಿಲ್ಲದೇ ಪಾಸಾಯಿತು.

#### ಬಜೆಟ್ ಅಂದರೇನು?

ಸರಳ ವ್ಯಾಖ್ಯಾನದಲ್ಲಿ ಒಂದು ನಿರ್ದಿಷ್ಟ ಅವಧಿಗೆ ಅಂದರೆ ಹಣಕಾಸು ವರ್ಷಕ್ಕೆ ಸರ್ಕಾರದ ಆದಾಯ ಮತ್ತು ಖರ್ಚಿನ ಯೋಜನೆಯನ್ನು ಮಾಡುವುದಕ್ಕೆ ಬಜೆಟ್ ಎನ್ನುತ್ತಾರೆ. ಸರ್ಕಾರಿ ಆದಾಯವು ತೆರಿಗೆ, ಶುಲ್ಕ ಇತ್ಯಾದಿಗಳ ಮೂಲಕ ಸಂಗ್ರಹವಾಗುತ್ತದೆ. ವಿವಿಧ ಕ್ಷೇತ್ರಕ್ಕೆ ತೆರಿಗೆ ಹಣವನ್ನು ವಿನಿಯೋಜಿಸುವುದಕ್ಕೆ ವೆಚ್ಚಗಳು ಎನ್ನುತ್ತಾರೆ. (ಉದಾ. ಆರೋಗ್ಯ, ಶಿಕ್ಷಣ, ಮೂಲಭೂತ ಸೌಕರ್ಯ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳು ಇತ್ಯಾದಿ). ರಾಜ್ಯ ಬಜೆಟ್ ಅನ್ನು ರಾಜ್ಯ ಸರ್ಕಾರ ಸಿದ್ಧಪಡಿಸುತ್ತದೆ. ಹಾಗೂ ಈ ಬಜೆಟ್ ಅನ್ನು ಶಾಸನಸಭೆಯಲ್ಲಿ ಮಂಡಿಸಲಾಗುತ್ತದೆ ಮತ್ತು ಶಾಸಕಾಂಗದ ಅನುಮೋದನೆಯನ್ನು ಪಡೆಯಲಾಗುತ್ತದೆ. ಸರ್ಕಾರವು ಈ ಬಜೆಟ್ ಮೂಲಕ ಆರ್ಥಿಕ ನೀತಿಯನ್ನು ಕಾರ್ಯಗತಗೊಳಿಸುತ್ತದೆ ಮತ್ತು ಅದರ ಕಾರ್ಯಕ್ರಮದ ಆದ್ಯತೆಗಳನ್ನು ನಿಶ್ಚಯಿಸುತ್ತದೆ. ಬಜೆಟ್ ಒಂದು ಯೋಜನೆ ಅಷ್ಟೇ. ಅದು ಸ್ವತಃ ಸರ್ಕಾರಿ ಕಾರ್ಯಕ್ರಮಗಳಿಗೆ ಹಣವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಪ್ರತ್ಯೇಕ ಶಾಸಕಾಂಗ ಕ್ರಮಗಳ ಮೂಲಕ ಅನುಷ್ಠಾನಗೊಳಿಸಬೇಕಾಗುತ್ತದೆ.

#### ಕರ್ನಾಟಕ ರಾಜ್ಯ ಬಜೆಟ್ 2025-26: ಒಂದು ಅವಲೋಕನ

ಕರ್ನಾಟಕ ರಾಜ್ಯ ಬಜೆಟ್ 2025, ಇದರ ಒಟ್ಟು ವೆಚ್ಚ ರೂ.4.09 ಲಕ್ಷ ಕೋಟಿ. ಆರ್ಥಿಕ ಬೆಳವಣಿಗೆ ಮತ್ತು ಸಾಮಾಜಿಕ ಕಲ್ಯಾಣವನ್ನು ಸಮತೋಲನಗೊಳಿಸುವ ಗುರಿಯನ್ನು ಹೊಂದಿರುವುದಾಗಿ ಹೇಳಲಾಗಿದ್ದರೂ, ಬಜೆಟ್‌ನ ಹಲವಾರು ಅಂಶಗಳು, ಅದರ ಹಣಕಾಸಿನ ತಂತ್ರ, ಹಂಚಿಕೆ ಆದ್ಯತೆಗಳು ಮತ್ತು ಸಂಭಾವ್ಯ ದೀರ್ಘಕಾಲಿನ ಪರಿಣಾಮಗಳ ಆಧಾರದ ಮೇಲೆ ಟೀಕೆಗೆ ಗುರಿಯಾಗಿವೆ. ಬಜೆಟ್ ಕುರಿತ ಪ್ರಮುಖ ಅಂಶಗಳು ಈ ರೀತಿ ಇವೆ:

#### 1. ಆದಾಯ ಉತ್ಪಾದನೆಯಲ್ಲಿ ಪೋಲು

ಬಜೆಟ್ ರೂ.2.92 ಲಕ್ಷ ಕೋಟಿ ಆದಾಯದ ಅಂದಾಜುಗಳನ್ನು ಹೊಂದಿದೆ, ಸ್ವಂತ ತೆರಿಗೆ ಆದಾಯವು ರೂ.2.08 ಲಕ್ಷ ಕೋಟಿ (2024-25 ಕ್ಕಿಂತ 18% ಹೆಚ್ಚಾಗಿದೆ). ಆದಾಗ್ಯೂ, 2024-25ರಲ್ಲಿ ರಾಜ್ಯವು ತನ್ನ ಆದಾಯ ಗುರಿಗಿಂತ ಸುಮಾರು ರೂ.6,000 ಕೋಟಿಗಳಷ್ಟು ಕಡಿಮೆ ಸಂಗ್ರಹ ಮಾಡಿದೆ. ಆದರೆ ಜನಸಾಮಾನ್ಯರೇನು ತೆರಿಗೆ ಕೊಡುವುದನ್ನು ತಪ್ಪಿಸಿಲ್ಲ. ಹಾಗಿದ್ದರೆ ಈ ಸೋರಿಕೆ ಎಲ್ಲಿ? ಈ ಸೋರಿಕೆಯ ಮೂಲ ದೊಡ್ಡ ದೊಡ್ಡ ತಿಮಿಂಗಿಲಗಳೇ ಹೊರತು ಜನಸಾಮಾನ್ಯರಲ್ಲ. ಯಾವ ರಾಯ ಬಂದರೇನು ರಾಗಿ ಬೀಸುವುದು ತಪ್ಪಿದ್ದಲ್ಲ ಅನ್ನುವ ರೀತಿಯಲ್ಲಿ ಒಂದೆಡೆ ಜನಸಾಮಾನ್ಯರಿಂದ ಸಂಗ್ರಹಿಸುವ ತೆರಿಗೆಯು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದರೆ, ಇನ್ನೊಂದೆಡೆ ಬಂಡವಾಳಿಗರಿಗೆ ನೀಡುವ ಸವಲತ್ತು, ತೆರಿಗೆ ವಿನಾಯಿತಿಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿವೆ. ಕೊನೆಗೆ ಕೊರತೆ ನೀಗಿಸಲು ಮತ್ತೆ ಜನಸಾಮಾನ್ಯರ ಮೇಲೆಯೇ ಹೆಚ್ಚಿನ ಹೊರೆ ಬೀಳುತ್ತದೆ. ಹಾಗಾಗಿಯೇ ಜನಜೀವನ ದಿನದಿಂದ ದಿನಕ್ಕೆ ದುರ್ಭರವಾಗುತ್ತಿದೆ.

#### 2. ಸಾಲ...ಸಾಲ...ಎತ್ತ ನೋಡಿದರತ್ತ ಸಾಲ

ಬಜೆಟ್ ಪ್ರಕಾರ ಸುಮಾರು ರೂ.19,262 ಕೋಟಿ (ಜಿಎಸ್‌ಡಿಪಿ ಯ 0.63%) 3ನೇ ಪುಟಕ್ಕೆ

# ಪ್ರಜಾತಂತ್ರದ ಪತನ

1ನೇ ಪುಟದಿಂದ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಇದು ಪ್ರಜಾಪ್ರಭುತ್ವದ ರಾಜಕೀಯವಾಯಿತು.

### ಬಂಡವಾಳಶಾಹಿ ಪ್ರಜಾತಂತ್ರದ ಪತನ

ಮತ್ತೊಂದು ಶೋಷಕ ವ್ಯವಸ್ಥೆಯಾಗಿಯೇ ಹುಟ್ಟಿಕೊಂಡ ಬಂಡವಾಳಶಾಹಿ ವ್ಯವಸ್ಥೆಯ ಈ ಉತ್ಕರ್ಷ ಕಾಲ ಬಹಳ ದಿನ ಮುಂದುವರೆಯಲಿಲ್ಲ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಉತ್ಪಾದನೆಯ ಉದ್ದೇಶ ವೈಯಕ್ತಿಕ ಅವಶ್ಯಕತೆಗಳನ್ನು ಪೂರೈಸುವುದಾಗಿತ್ತು ಹಾಗೂ ಉತ್ಪಾದನೆಯು ಸ್ಥಳೀಯ ಮಾರುಕಟ್ಟೆಗೆ ಸೀಮಿತವಾಗಿತ್ತು. ಇದು ಅಂದಿನ ಸಾಮಾಜಿಕ ಉತ್ಪಾದನೆಯ ರೂಪವಾಗಿತ್ತು. ನಂತರ ಅಸ್ತಿತ್ವಕ್ಕೆ ಬಂದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನೆಯು ಸಾಮೂಹಿಕವಾಯಿತು, ಆದರೆ ಒಡೆತನ ವ್ಯಕ್ತಿಗತವಾಯಿತು. ಪ್ರತಿಯೊಂದು ಉತ್ಪಾದನೆ ರಾಷ್ಟ್ರೀಯ ಮಾರುಕಟ್ಟೆಯ ಸರಕಾಯಿತು. ಲಾಭಗಳಿಕೆಯೇ ಉತ್ಪಾದನೆಯ ಉದ್ದೇಶವಾಯಿತು. ಕಾಲಕ್ರಮೇಣ ಗರಿಷ್ಠ ಲಾಭಗಳಿಸುವುದೇ ಬಂಡವಾಳವಾದದ ಸ್ವರೂಪವಾಯಿತು, ಏಕಸ್ವಾಮ್ಯ ಬಂಡವಾಳದ ಉಗಮವಾಯಿತು! ಅತೀ ಹೆಚ್ಚು ಲಾಭಕ್ಕಾಗಿ ಬಂಡವಾಳಶಾಹಿ ವರ್ಗ ಕಾರ್ಮಿಕರನ್ನು ಶೋಷಣೆಗೊಡ್ಡಲು ಸಾಂಸ್ಥಿಕ ರೂಪುರೇಷೆಗಳನ್ನು ಸಿದ್ಧಪಡಿಸಲಾಯಿತು. ತನ್ನ ಉಗಮಕಾಲದ ಆಶಯಗಳಿಂದ ಬಂಡವಾಳವಾದವು ಬಹು ಬೇಗ ವಿರುದ್ಧ ದಿಕ್ಕಿನೆಡೆ ಸಾಗಿತು. ಏಕಸ್ವಾಮ್ಯಾಧಿಪತ್ಯ ತಲೆಯೆತ್ತುತ್ತಿದ್ದಂತೆ ರಾಜ್ಯಯಂತ್ರ ತನ್ನ ಸಾಪೇಕ್ಷ ತಟಸ್ಥ ನಿಲುವು ಕಳೆದುಕೊಂಡಿತು ಹಾಗೂ ಅದರ ಕಾರ್ಯವೈಖರಿ ಬದಲಾಗತೊಡಗಿತು. ಮಾರುಕಟ್ಟೆಯಲ್ಲಿ ಮುಕ್ತ ಪೈಪೋಟಿ ಹೋಗಿ ಬಂಡವಾಳ ಕೆಲವೇ ಏಕಸ್ವಾಮ್ಯಾಧಿಪತಿಗಳ ಕೈಲಿ ಶೇಖರಣೆಯಾಗುತ್ತಾ, ಅಧಿಕಾರ ಕೆಲವರ ನಿಯಂತ್ರಣದಲ್ಲಿದ್ದು ಸರ್ಕಾರ ಹೆಚ್ಚು ದಮನಕಾರಿಯಾಗತೊಡಗಿತು. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವದಂತಹ ಪ್ರಜಾತಾಂತ್ರಿಕ ಮೌಲ್ಯಗಳು ಮರೆಯಾಗತೊಡಗಿದವು. ಪ್ರಜಾತಂತ್ರದ ಮುಖವಾಡದಲ್ಲಿ ಫ್ಯಾಸೀವಾದಿ ನಿರಂಕುಶ ಪ್ರಭುತ್ವ ಬೆಳೆಯತೊಡಗಿತು. ಸಾಮ್ರಾಜ್ಯಶಾಹಿ – ವಸಾಹತುಶಾಹಿ ನೀತಿಗಳು ಜಾರಿಗೆ ಬರತೊಡಗಿದವು. ಸಮಾಜದಲ್ಲಿ ಧರ್ಮನಿರಪೇಕ್ಷ ಮೌಲ್ಯಗಳು ಕ್ಷೀಣಿಸುತ್ತಾ ಸರ್ಕಾರಗಳು ಜನರ ಯೋಚನಾ ಕ್ರಿಯೆಯನ್ನು ನಿಯಂತ್ರಿಸುವುದು ಹಾಗೂ ಯಾಂತ್ರೀಕರಿಸುವುದು ದಿನನಿತ್ಯದ ಸಂಗತಿಯಾಗಿದೆ. ಜೀವನದ ಕುರಿತಾಗಿ ಹೊಂದಿದ್ದ ವೈಜ್ಞಾನಿಕ, ಧರ್ಮನಿರಪೇಕ್ಷ ಧೋರಣೆಗಳು ಕ್ಷೀಣಿಸುತ್ತಾ ವಿಜ್ಞಾನದ ತಾಂತ್ರಿಕ ಅಂಶ ಹಾಗೂ ಧರ್ಮಾಂಧತೆಗಳೆರಡರ ಮಿಶ್ರಣವಾಗಿರುವ ಫ್ಯಾಸಿಸ್ಟ್ ಧೋರಣೆಗಳು ತಲೆಯೆತ್ತತೊಡಗಿವೆ.

ಅವಸಾನದ ಅಂಚಿನಲ್ಲಿರುವ ಬಂಡವಾಳವಾದ ಜಗತ್ತಿನಾದ್ಯಂತ ತನ್ನ ಕೊನೆ ಹಂತ ಸಾಮ್ರಾಜ್ಯವಾದವನ್ನು ತಲುಪಿ ಪ್ರಜಾತಂತ್ರದ ಎಲ್ಲಾ ಆಶಯಗಳು ಈಗ ಕೇವಲ ಪ್ರಹಸನವಾಗಿವೆ. ನ್ಯಾಯಾಂಗ ತನ್ನ ಪಾತ್ರ ಕಳೆದುಕೊಂಡು ಮಿಲಿಟರೀಕರಣ ಹಾಗೂ ನಿರಂಕುಶಾಧಿಕಾರದತ್ತ ವಾಲುತ್ತಿದೆ. ಸೈನ್ಯ ಈಗ ಬಂಡವಾಳಶಾಹಿ ಸಾಮ್ರಾಜ್ಯವಾದದ ಶಕ್ತಿಶಾಲಿ ಅಂಗವಾಗಿ ಮಾರ್ಪಾಡಾಗಿದೆ. ಏಕಸ್ವಾಮ್ಯಾಧಿಪತಿಗಳ ಸೇವೆಗೈಯ್ಯುವ ಕೆಲವೇ ಕೆಲವು ಸೇವಕರ ಕೈಯಲ್ಲಿ ಅಧಿಕಾರ ಕೇಂದ್ರೀಕೃತವಾಗಿದೆ. ಚುನಾಯಿತ ಪ್ರತಿನಿಧಿಗಳು ಈಗ ಬಂಡವಾಳಶಾಹಿಗಳ ಕೆಲಸ ನಿರ್ವಹಿಸುವ ಕಾರ್ಯನಿರ್ವಾಹಕರಾಗಿದ್ದಾರೆ. ಹಣ–ಹೆಂಡ–ತೋಳ್ಬಲ–ಅಧಿಕಾರಶಾಹಿಗಳ ನಿಯಂತ್ರಣದಲ್ಲಿ ಚುನಾವಣೆಯ ಪ್ರಹಸನ ಸಾಗಿದೆ. ಪ್ರಜಾತಂತ್ರದ ಆಶಯಗಳಾದ ಸಮಾನತೆ–ಸ್ವಾತಂತ್ರ್ಯ–ಭ್ರಾತೃತ್ವ ಈಗ ಮೂಲೆ ಸೇರಿವೆ.

ಸಂಸತ್ತಿನಲ್ಲಿ ಪ್ರಜಾತಾಂತ್ರಿಕ ಚರ್ಚೆಗಳ ಪ್ರಕ್ರಿಯೆಯಲ್ಲಿ ರೂಪಗೊಳ್ಳಬೇಕಿದ್ದ ಕಾನೂನುಗಳನ್ನು ಈಗ ಕೆಲವು ಅಧಿಕಾರಿಗಳು ರೂಪಿಸುವಂತಾಗಿದೆ. ನ್ಯಾಯಾಂಗವನ್ನು ತಮ್ಮ ನಿಯಂತ್ರಣಕ್ಕೆ ತಂದುಕೊಳ್ಳುವ ಪ್ರಯತ್ನ ನಿರಂತರವಾಗಿ ಸಾಗಿದೆ. ಬಂಡವಾಳವಾದದ ಉಗಮ ಕಾಲದಲ್ಲಿ ನ್ಯಾಯಾಂಗಕ್ಕೆ ಸಾಪೇಕ್ಷ ಅಧಿಕಾರವಿತ್ತು. ಸಾಮಾನ್ಯನೊಬ್ಬನು ತನ್ನ ಹಕ್ಕುಗಳಿಗಾಗಿ ಹೋರಾಡುವ ಸ್ವಾತಂತ್ರ್ಯ ನೀಡುವಷ್ಟು ನ್ಯಾಯಾಂಗ ಬಲಿಷ್ಠವಾಗಿತ್ತು. ಅಧಿಕಾರಶಾಹಿಯು ಜನಸಾಮಾನ್ಯನ ಮೇಲೆ ಹಕ್ಕು ಸಾಧಿಸದಂತಹ ಶ್ರೀರಕ್ಷೆ ಒದಗಿಸಿತ್ತು. ದಿನ ಕಳೆದಂತೆ ನ್ಯಾಯಾಂಗದ ಈ ವಿಶೇಷಣಗಳು ಕ್ಷೀಣಿಸುತ್ತಾ ಹೋದವು.

### ಬಿಜೆಪಿಯ ದುರಾಡಳಿತ

ಬಿಜೆಪಿಯ ಕಳೆದ 10 ವರ್ಷಗಳ ದುರಾಡಳಿತ ಈ ಪ್ರಕ್ರಿಯೆಯ ಭಾಗವೇ ಹೌದು. ಜಾಗತಿಕವಾಗಿ ಬಂಡವಾಳವಾದ ಪತನಾಹಂತದಲ್ಲಿದ್ದಾಗಲೇ ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿದ್ದು. ಭಾರತದ ಬಂಡವಾಳಶಾಹಿಗಳ ವಿಶ್ವಾಸಾರ್ಹ ಪ್ರತಿನಿಧಿಯಾದ ಕಾಂಗ್ರೆಸ್‌ನ ಕೈಗೆ ಅಧಿಕಾರ ಹಸ್ತಾಂತರವಾದದ್ದು, ಬಂಡವಾಳಶಾಹಿಗಳ ಕೈಗೆ ಸರ್ವ ಅಧಿಕಾರವನ್ನು ಭದ್ರಗೊಳಿಸಿ ದೇಶದ ಕ್ರಮೇಣ ಅವನತಿಗೆ ನಾಂದಿ ಹಾಡಿತ್ತು. ಅಧಿಕಾರಕ್ಕೆ ಬಂದ ಬಿಜೆಪಿ ಈ ಪ್ರಕ್ರಿಯೆಯನ್ನು ತೀವ್ರಗೊಳಿಸಿತು. ಪ್ರಜಾತಾಂತ್ರಿಕ ನೀತಿ, ಆಚರಣೆ ಮೌಲ್ಯಗಳ ಕುಸಿತದಲ್ಲಿ ಬಿಜೆಪಿಯ ಪಾತ್ರವನ್ನು ಇಲ್ಲಿ ಅವಲೋಕಿಸೋಣ.

### ಪ್ರಜಾತಾಂತ್ರಿಕ ಸಂಸ್ಥೆಗಳ ಸ್ವಾಯತ್ತತೆಯ ಮೇಲಿನ ದಾಳಿ

ಬಿಜೆಪಿಯ ಆಡಳಿತದಲ್ಲಿ ದೇಶ ದೊಡ್ಡ ಬದಲಾವಣೆಗಳನ್ನೇ ಎದುರಿಸುತ್ತಿದೆ. ಪ್ರಜಾತಂತ್ರದ ಅಂಗಗಳಾದ ಯೋಜನಾ ಆಯೋಗ, ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್, ಚುನಾವಣಾ ಆಯೋಗಗಳ ಸ್ವಾಯತ್ತತೆಯನ್ನು ಕುಂಠಿತಗೊಳಿಸಲಾಗಿದೆ. ಈ ಅಂಗಗಳ ಸ್ವಾಯತ್ತತೆ ಕಾಪಾಡಬೇಕೆಂಬ ಪ್ರಜಾತಾಂತ್ರಿಕ ಮೌಲ್ಯಗಳನ್ನೆಲ್ಲಾ ಮೂಲೆಗುಂಪಾಗಿಸಿ ಇವುಗಳನ್ನು ಸರ್ಕಾರದ ಆಜ್ಞೆಪಾಲಿಸುವ ಸಂಸ್ಥೆಗಳನ್ನಾಗಿ ಬದಲಾಯಿಸಲಾಗಿದೆ.

### ಚುನಾವಣೆ ಎಂಬ ಪ್ರಹಸನ

ಇಂದು ಚುನಾವಣೆ ಎಂಬ ಪ್ರಕ್ರಿಯೆ ಏನಾಗಿದೆ? ಚುನಾವಣೆಯಲ್ಲಿ ಇಂದು ಎಲ್ಲಾ ರೀತಿಯ ಹೀನ ಕೃತ್ಯಗಳೂ ಕಾಣುತ್ತಿವೆ. ಅದು ಪ್ರಜಾತಂತ್ರದ ದೊಡ್ಡ ಪ್ರಹಸನವಾಗಿಬಿಟ್ಟಿದೆ. ಬಂಡವಾಳಶಾಹಿ ವರ್ಗದ ಸೇವೆ ಸಲ್ಲಿಸುವ ಕೆಲವೇ ರಾಜಕಾರಣಿಗಳನ್ನು ಚುನಾವಣೆಯಲ್ಲಿ ಗೆಲ್ಲಿಸಿ ಅವರ ಕೈಗೆ ಸರ್ವಾಧಿಕಾರವನ್ನು ಒಪ್ಪಿಸಲಾಗಿದೆ. ನೀತಿ, ನೈತಿಕತೆ, ಮೌಲ್ಯಗಳಲ್ಲಿ ಭ್ರಷ್ಟರಾದವರು ಅಧಿಕಾರದ ಚುಕ್ಕಾಣಿ ಹಿಡಿದಾಗ ಪ್ರಜಾತಂತ್ರದ ಪರಿಸ್ಥಿತಿ ಏನಾಗಬೇಡ! ತಮ್ಮ ಹಿತ ಕಾಪಾಡಿಕೊಳ್ಳಲು, ಭ್ರಷ್ಟಾಚಾರದ ಚಟುವಟಿಕೆಗಳಲ್ಲಿ ಮುಳುಗಿರುವವರು, ಚುನಾವಣೆಗಳಲ್ಲಿ ಗೆಲ್ಲುತ್ತಿದ್ದಾರೆ. ಎಂತಹ ನೀಚ ಕೃತ್ಯ ಎಸಗಲು ಹಿಂಜರಿಯದವರು ಜನರ ಹಿತ ಕಾಪಾಡುವರೆ? ಬಿಜೆಪಿ ನಾಯಕರನ್ನು ಒಳಗೊಂಡಂತೆ ಎಲ್ಲಾ ಬಂಡವಾಳಶಾಹಿ ರಾಜಕಾರಣಿಗಳು ಹಸಿ ಸುಳ್ಳುಗಳನ್ನು ಹೇಳುತ್ತಾ ಜನರ ಬವಣೆಗಳನ್ನು ಕಂಡೂ ಕಾಣದಂತಿದ್ದಾರೆ. ಭ್ರಷ್ಟಾಚಾರ, ಸ್ವಪ್ರತಿಷ್ಠೆಯಲ್ಲೇ ಮುಳುಗಿರುವ ಇವರು ಜನರ ಪ್ರಜ್ಞಾಮಟ್ಟ ಎತ್ತುವರೆ? ಬದಲಾಗಿ ವೈಜ್ಞಾನಿಕ, ಧರ್ಮನಿರಪೇಕ್ಷ ಶಿಕ್ಷಣಕ್ಕೆ ತಿಲಾಂಜಲಿ ಇಟ್ಟು ಕೋಮುವಾದ, ಜಾತೀವಾದ, ಧರ್ಮಾಂಧತೆಯಂತಹ ಪ್ರತಿಗಾಮಿ ವಿಚಾರಗಳಿಗೆ ಪುಷ್ಟಿ ನೀಡಿ ಶಿಕ್ಷಣದ ಮೂಲಕ ಮನಸ್ಸುಗಳ ಮೇಲೆ ನಿಯಂತ್ರಣ ಸಾಧಿಸುವ ಫ್ಯಾಸಿಸ್ಟ್ ಧೋರಣೆ ತಳೆದಿವೆ. ಬಿಜೆಪಿ ಆಡಳಿತದಲ್ಲಿ ಈ ಪ್ರಕ್ರಿಯೆಗೆ ಮತ್ತಷ್ಟು ಇಂಬು ದೊರಕಿದೆ. ಸಮಾಜವನ್ನು ಕೋಮುದ್ವೇಷಕ್ಕೆ ತಳ್ಳಿ, ಅಲ್ಪಸಂಖ್ಯಾತರ ವಿರುದ್ಧ ದ್ವೇಷ ಹರಡಲಾಗುತ್ತಿದೆ.

### ವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ

ಬಿಜೆಪಿ ಸರ್ಕಾರದ ಆಡಳಿತದಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಮೇಲೆ ನವದಾಳಿ ಸಾಗಿದೆ. ಬಂಡವಾಳಶಾಹಿ ವಿರೋಧಿ ಕ್ರಾಂತಿಯ ಭಯದಲ್ಲಿ ಆಳುವ ವರ್ಗ ತತ್ತರಿಸುತ್ತಿದೆ. ಸಮಾಜದ ಪ್ರಗತಿಯಲ್ಲಿ ನಿರ್ಣಾಯಕವಾಗಿ ನಡೆಯಲಿರುವ ಕ್ರಾಂತಿಯ ಭಯದಲ್ಲಿ ಪ್ರಜಾತಾಂತ್ರಿಕ ಹಕ್ಕುಗಳನ್ನು ಜನರಿಗೆ ನೀಡಿದಲ್ಲಿ ಅವರು ತಮಗೆ ತಿರುಗಿ ಬೀಳುವರೆಂಬ ಭಯದಲ್ಲಿ ಬಂಡವಾಳಶಾಹಿ ವರ್ಗ ಹಕ್ಕುಗಳನ್ನು ಕಸಿಯುವ ಕಪ್ಪು ಕಾಯಿದೆಗಳನ್ನು ಜಾರಿಗೊಳಿಸುತ್ತಿದೆ. ಜನರ ಹೋರಾಟದ ಧ್ವನಿಯನ್ನು ಹಿಸುಕಿ ಹಾಕಲಾಗುತ್ತಿದೆ. ಹೋರಾಟಗಳನ್ನು ಸದೆಬಡಿಯಲಾಗುತ್ತಿದೆ. ಎನ್.ಆರ್.ಸಿ, ಸಿ.ಎ.ಎ ನಂತಹ ದಮನಕಾರಿ ನೀತಿಗಳನ್ನು ತರುವಲ್ಲಿ, ಕಾಶ್ಮೀರಕ್ಕೆ ನೀಡಲಾದ ವಿಶೇಷ ಸ್ಥಾನಮಾನವನ್ನು ಕಸಿಯುವಲ್ಲಿ ಜನಾಭಿಪ್ರಾಯಗಳಿಗೆ ಯಾವ ಮಾನ್ಯತೆಯನ್ನೂ ನೀಡಲಿಲ್ಲ. ಸಂಸತ್ತಿನ ಚರ್ಚೆಗಳನ್ನು ಕಡೆಗಣಿಸಿದ್ದಷ್ಟೇ ಅಲ್ಲ, ಸಾಂಸ್ಥಿಕ ಮೌಲ್ಯಗಳನ್ನು ಪಕ್ಕಕ್ಕೆ ಸರಿಸಿ ಸುಗ್ರೀವಾಜ್ಞೆಗಳ ಮೂಲಕ ಕಾನೂನುಗಳನ್ನು ಜಾರಿಗೆ ತರಲಾಗುತ್ತಿದೆ. ಕ್ರಿಮಿನಲ್ ಕಾನೂನುಗಳನ್ನು ಮತ್ತಷ್ಟು ಕಠೋರ ಗೊಳಿಸಲು ಹಾಗೂ ಅನಿಯಮಿತ ಅಧಿಕಾರವನ್ನು ಕೆಲವೇ ಕೆಲವು ಅಧಿಕಾರಿಗಳ ಕೈಗಿಡಲು ಕಾನೂನನ್ನು ಬದಲಾಯಿಸಲಾಗುತ್ತಿದೆ. ಯಾರನ್ನಾದರೂ ಈಗ ಕ್ಷುಲ್ಲಕ ಕಾರಣ ಕೊಟ್ಟು ಕಂಬಿ ಎಣಿಸುವಂತೆ ಮಾಡಬಹುದು. ಸರ್ಕಾರದ ವಿರುದ್ಧ ಮಾತನಾಡುವುದು ಈಗ ರಾಷ್ಟ್ರ ದ್ರೋಹ! ಸರ್ಕಾರದ ನಿಲುವು ನೀತಿಗಳನ್ನು ಪ್ರಶ್ನಿಸುವುದು ಈಗ ರಾಷ್ಟ್ರ ವಿರೋಧಿ, ಭಯೋತ್ಪಾದಕ ಕೃತ್ಯ! ಯಾರನ್ನಾದರು ಎಷ್ಟು ದಿನಗಳ ಕಾಲವಾದರೂ ವಿಚಾರಣೆ ಇಲ್ಲದೆ ಅನಿರ್ದಿಷ್ಟವಾಗಿ ಜೈಲಿನಲ್ಲಿಡಬಹುದು. 'ಸಿ.ಬಿ.ಐ', 'ಇಡಿ'ಗಳನ್ನು ಬಳಸಿಕೊಂಡು ವಿರೋಧ ಪಕ್ಷದವರು ಹಾಗೂ ಅವರ ಮುಖ್ಯ ಮಂತ್ರಿಗಳಿಗೆ ಕಿರುಕುಳ ನೀಡುವುದು ಸಾಮಾನ್ಯವಾಗಿದೆ. ವಿರೋಧ ಪಕ್ಷದವರಿಗೆ ಸಂಸತ್ತಿನಲ್ಲಿ ಮಾತನಾಡುವ ಹಕ್ಕೂ ಇಲ್ಲ, ಕೆಲವೊಮ್ಮೆ ಅಮಾನತುಗೊಂಡಿರುವುದೂ ಉಂಟು. ನ್ಯಾಯಾಧೀಶರಿಗೆ ಅಧಿಕಾರದ ಆಮಿಷ ಒಡ್ಡಿ, ನಿವೃತ್ತಿ ನಂತರದ ಹುದ್ದೆಯ ಆಮಿಷ ತೋರಿಸಿ ತೀರ್ಪುಗಳನ್ನು ತಮಗೆ ಬೇಕಾದಂತೆ ಬದಲಾಯಿಸಿಕೊಳ್ಳಲಾಗುತ್ತಿದೆ. ನ್ಯಾಯಾಂಗವೂ ತನ್ನ ಅಧಿಕಾರ ಕಳೆದುಕೊಂಡು ಬಂಡವಾಳಶಾಹಿಗಳ ಕೈಯಲ್ಲಿ ದಮನದ ಮತ್ತೊಂದು ಅಸ್ತ್ರವಾಗುತ್ತಿದೆ. ಬಂಡವಾಶಾಹಿಗಳಿಗೆ ಪೂರಕವಾಗಿ ಹಾಗೂ ಕಾರ್ಮಿಕ ವರ್ಗಕ್ಕೆ ಮಾರಕವಾಗುವಂತಹ ಕಾರ್ಮಿಕ ವಿರೋಧಿ ಕಾನೂನುಗಳನ್ನು ಜಾರಿಗೆ ತರಲಾಗುತ್ತಿದೆ. ಯೂನಿಯನ್ ಕಟ್ಟಿಕೊಳ್ಳುವ ಹಕ್ಕು, ದುಡಿಯುವ ಹಕ್ಕನ್ನೂ ಕಸಿದುಕೊಳ್ಳಲಾಗುತ್ತಿದೆ.

### ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿದೆ. ಸರ್ಕಾರದ ಧೋರಣೆಯ ಬಗ್ಗೆ ಧ್ವನಿ ಎತ್ತುವ ಪತ್ರಕರ್ತರನ್ನು, ಸಾಮಾಜಿಕ ಕಾರ್ಯಕರ್ತರನ್ನು, ಸಾಮಾನ್ಯ ಜನರನ್ನೂ ಪೀಡಿಸಲಾಗುತ್ತಿದೆ.

**ಅವಸಾನದ ಅಂಚಿನಲ್ಲಿರುವ ಬಂಡವಾಳವಾದ ಜಗತ್ತಿನಾದ್ಯಂತ ತನ್ನ ಕೊನೆ ಹಂತ ಸಾಮ್ರಾಜ್ಯವಾದವನ್ನು ತಲುಪಿ ಪ್ರಜಾತಂತ್ರದ ಎಲ್ಲಾ ಆಶಯಗಳು ಈಗ ಕೇವಲ ಪ್ರಹಸನವಾಗಿವೆ. ನ್ಯಾಯಾಂಗ ತನ್ನ ಪಾತ್ರ ಕಳೆದುಕೊಂಡಿದೆ. ಬಂಡವಾಳವಾದ ಈಗ ಮಿಲಿಟರೀಕರಣ ಹಾಗೂ ನಿರಂಕುಶಾಧಿಕಾರದತ್ತ ವಾಲುತ್ತಿದೆ.**

ಮಾಧ್ಯಮಗಳ ಸಂಪಾದಕರು, ಪತ್ರಕರ್ತರ ಮೇಲೆ ಹಾಡುಹಗಲೇ ದಾಳಿಗಳು ನಡೆಯುತ್ತಿವೆ. ಬಿಬಿಸಿ ಯಂತಹ ಪ್ರಸಿದ್ಧ ವಿದೇಶಿ ಮಾಧ್ಯಮದ ಮೇಲೆ ನಡೆದ ದಾಳಿ ಪತ್ರಿಕೋದ್ಯಮ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ನಮ್ಮ ದೇಶದ ಸ್ಥಾನವನ್ನು ಕೆಳಗಿಳಿಸಿದೆ. ಒಟ್ಟು 180 ದೇಶಗಳಲ್ಲಿ ನಮಗೀಗ 159ನೇ ಸ್ಥಾನ! ವರ್ಗ ಹಿತಾಸಕ್ತಿಗೆ ವಿರುದ್ಧವಾಗಿ ಯಾರೂ ಸೊಲ್ಲೆತ್ತದಂತೆ ಮಾಧ್ಯಮಗಳನ್ನು ಉದ್ಯಮಿಗಳು ಕೊಂಡುಕೊಳ್ಳುತ್ತಿದ್ದಾರೆ. ಪ್ರಜಾತಂತ್ರದ ಮೂರು ಅಂಗಗಳ ಕೆಲಸದ ಮೇಲೆ ನಿಗಾವಹಿಸಬೇಕಿದ್ದ ಪ್ರಜಾತಂತ್ರದ ನಾಲ್ಕನೇ ಅಂಗ ತನ್ನೆಲ್ಲಾ ಕರ್ತವ್ಯಗಳನ್ನೂ ಮರೆತು ಇತಿಹಾಸದ ಪುಟ ಸೇರಿದೆ.

ಬಿಜೆಪಿ ಆಡಳಿತದಲ್ಲಿ ನಡೆಯುತ್ತಿರುವ ಈ ಪ್ರಜಾತಂತ್ರದ ಹರಣವನ್ನು ಸಮಾಜದ ಬೆಳವಣಿಗೆಯ ಈ ಬೆಳಕಿನಲ್ಲಿ ನೋಡಬೇಕು. ಈ ಯುಗದ ಓರ್ವ ಮಹಾನ್ ಮಾರ್ಕ್ಸ್‌ವಾದಿ ಚಿಂತಕ ಕಾಮ್ರೇಡ್ ಶಿವದಾಸ್ ಘೋಷ್‌ರವರು ಈ ವಿದ್ಯಮಾನದ ಕುರಿತಾಗಿ ಹೀಗೆನ್ನುತ್ತಾರೆ: "ಫ್ಯಾಸೀವಾದವು ಈಗ ಎಲ್ಲ ಬಂಡವಾಳಶಾಹಿ ರಾಷ್ಟ್ರಗಳ ನಿಯಮವಾಗಿದೆ.... ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ, ಅದರ ಆರ್ಥಿಕ ಸಂರಚನೆ, ರಾಜಕೀಯ ಸಂಸ್ಥೆ ಮತ್ತು ಆಡಳಿತ ಉಪಕರಣವು ಉಲ್ಬಣಗೊಳ್ಳುತ್ತಿರುವ ಬಂಡವಾಳಶಾಹಿ ಬಿಕ್ಕಟ್ಟನ್ನು ಎದುರಿಸಲು ವಿಫಲಗೊಂಡಾಗ, ಮಾರುಕಟ್ಟೆ ಸ್ಥಿರತೆಯೊಂದಿಗೆ ಅಧಿಕ ಲಾಭಗಳಿಕೆಯು ಅಸಾಧ್ಯ ಎನ್ನುವಂತಾದಾಗ, ಬಿಕ್ಕಟ್ಟಿನಿಂದ ತುಂಬಿದ ಈ ಜೀವನದ ಅಭದ್ರತೆಗೆ ಸಿಲುಕಿದ ಜನಸಮೂಹವು ಪ್ರಸಕ್ತ ಪರಿಸ್ಥಿತಿಯನ್ನು ಬದಲಾಯಿಸುವ ಅವಶ್ಯಕತೆಯನ್ನು ಅರಿತಾಗ, ಅಂತಹ ಪರಿಸ್ಥಿತಿಯಲ್ಲಿ, ಬಂಡವಾಳಶಾಹಿ ವ್ಯವಸ್ಥೆಯ ಅಧಿಕ ಲಾಭಗಳಿಕೆಯ ಮೂಲ ತತ್ವವನ್ನು ಚಲನೆಯಲ್ಲಿ ಇಟ್ಟುಕೊಳ್ಳಲು, ಬಂಡವಾಳಶಾಹಿಯು, ವರ್ಗ ಸರ್ವಾಧಿಕಾರದ ಮೇಲಿನ ಸಂಸದೀಯ ಪ್ರಜಾತಂತ್ರದ ಮುಖಾವಾಡವನ್ನು ಕಿತ್ತೆಸೆಯುತ್ತದೆ. ಆರ್ಥಿಕ ಕೇಂದ್ರೀಕರಣ, ರಾಜ್ಯದ ಕೈಯಲ್ಲಿ ಗರಿಷ್ಠ ಅಧಿಕಾರದ ಕ್ರೋಢೀಕರಣ, ಆಡಳಿತದ ನಿಷ್ಠುರತೆ, ಸಾಂಸ್ಕೃತಿಕ ನಿಯಂತ್ರಣ ಮತ್ತು ಪ್ರಭುತ್ವದ ಹಿತಾಸಕ್ತಿಯೊಂದಿಗೆ ಏಕಸ್ವಾಮ್ಯಾಧಿಪತಿಗಳ ಹಿತಾಸಕ್ತಿಗಳ ಐಕ್ಯತೆ–ಇವು ಫ್ಯಾಸೀವಾದದ ಲಕ್ಷಣಗಳು. ಆಫ್ರಿಕಾ ಹಾಗೂ ಏಷ್ಯಾದಲ್ಲಿರುವ ಹಿಂದುಳಿದ ದೇಶಗಳನ್ನು ಸೇರಿದಂತೆ ಈ ಲಕ್ಷಣಗಳಲ್ಲಿ ಏರಿಳಿತಗಳಿದ್ದರೂ ಈ ವಿದ್ಯಮಾನ ಇಡೀ ಜಗತ್ತನ್ನು ವ್ಯಾಪಿಸಿದೆ. ಫ್ಯಾಸೀಸಂ ಇಂದು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ರೂಪ ತಾಳಿದೆ. ಒಂದೆಡೆ ಏಕ ವ್ಯಕ್ತಿ ಸರ್ವಾಧಿಕಾರದ ರೂಪ ತಾಳಿದರೆ, ಇನ್ನೊಂದೆಡೆ ಮಿಲಿಟರಿ ಆಡಳಿತದ ನಿರಂಕುಶ ಅಧಿಕಾರವಾಗಿದೆ, ಮತ್ತೊಂದೆಡೆ ಪ್ರಜಾಪ್ರಭುತ್ವದ ಮುಖವಾಡದಲ್ಲೇ ಸಂಸತ್ತನ್ನು ಜೀವಂತವಾಗಿಯೇ ಇಟ್ಟು ಅದರ ಅಧಿಕಾರವನ್ನು ಆರ್ಥಿಕ ಹಾಗೂ ರಾಜಕೀಯವಾಗಿ ಕೇಂದ್ರೀಕರಣಗೊಳಿಸಿ ಸರ್ವಾಧಿಕಾರದ ರೂಪ ತಾಳಿದೆ."

ಈ ಪ್ರಕ್ಷುಬ್ಧ ಪರಿಸ್ಥಿತಿಯೇ ಬದಲಾವಣೆಗೆ ನಾಂದಿಯಾಗುತ್ತದೆ. ರಷ್ಯಾ ಕ್ರಾಂತಿಯ ರೂವಾರಿ ಮಾರ್ಕ್ಸ್‌ವಾದಿ ಚಿಂತಕ ಕಾಮ್ರೇಡ್ ಲೆನಿನ್‌ರವರು ಹೇಳುವಂತೆ, ಈ ಯುಗ "ಸಾಮ್ರಾಜ್ಯವಾದ ಹಾಗೂ ಕಾರ್ಮಿಕ ವರ್ಗದ ಕ್ರಾಂತಿಯ ಯುಗ" ಎಷ್ಟು ಸತ್ಯ ಎಂಬುದು ಮತ್ತೆ ಸಾಬೀತಾಗುತ್ತಿದೆ. ಸಾಮ್ರಾಜ್ಯಶಾಹಿಗಳ ಶೋಷಣೆ ಎಷ್ಟು ವಾಸ್ತವವೋ ಕಾರ್ಮಿಕ ವರ್ಗದ ಕ್ರಾಂತಿಯಾಗುವುದು ಕೂಡ ಅಷ್ಟೇ ನಿಶ್ಚಿತ!

---

**ಡೀಸೆಲ್ ದರ, ಹೆದ್ದಾರಿ ಸುಂಕ ಏರಿಕೆ:**

## ದಿನಾಂಕ 02/04/2025ರಂದು ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ. ಉಮಾ ಅವರು ನೀಡಿರುವ ಪತ್ರಿಕಾ ಹೇಳಿಕೆ

ರಾಜ್ಯ ಸರ್ಕಾರದ ಡೀಸೆಲ್ ದರ ಏರಿಕೆಯನ್ನು, ಕೇಂದ್ರ ಸರ್ಕಾರದ ಹೆದ್ದಾರಿ ಸುಂಕ ಹೆಚ್ಚಳವನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ.

ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರಾಜ್ಯ ಸರ್ಕಾರವು ಏರಿಕೆ ಮಾಡಿರುವುದರಿಂದ ಲೀಟರಿಗೆ ರೂ. 2 ಹೆಚ್ಚಳವಾಗಿದೆ.

ಹಾಗೆಯೇ ರಾಷ್ಟ್ರೀಯ ಹೆದ್ದಾರಿಯ ಸುಂಕವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಶೇ. 5ರಷ್ಟು ಏರಿಕೆ ಮಾಡಿದೆ.

ಇವೆರಡೂ ಹೆಚ್ಚಳಗಳು ಸಾರ್ವಜನಿಕ ಸಾರಿಗೆ ಮತ್ತು ಸರಕು ಸಾಗಾಣಿಕೆಗಳ ಮೇಲೆ ಪರಿಣಾಮ ಬೀರಲಿವೆ. ಇದರಿಂದ ಪ್ರಯಾಣ ದರಗಳು, ಸಾಗಾಣಿಕೆ ವೆಚ್ಚ ಏರಿಕೆಯಾಗಿ ಅಗತ್ಯ ವಸ್ತುಗಳ ಬೆಲೆ ಇನ್ನಷ್ಟು ತುಟ್ಟಿಯಾಗಲಿದೆ.

ಬೆಲೆ ಏರಿಕೆಗೆ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಪರಸ್ಪರ ಬೊಟ್ಟು ಮಾಡಿ ದೂಷಿಸುತ್ತಾ ಜನರ ಮೇಲೆ ಮಂಕು ಬೂದಿ ಎರಚುತ್ತಿವೆ. ಎರಡೂ ಪಕ್ಷಗಳು ಅಪ್ಪಟ ಜನವಿರೋಧಿ ನೀತಿಗಳನ್ನು ಅನುಸರಿಸುತ್ತಿವೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಇಂತಹ ನಡೆಗಳ ವಿರುದ್ಧ ಜನತೆ ಪ್ರಬಲ ಹೋರಾಟಕ್ಕೆ ಮುಂದಾಗಬೇಕು ಎಂದು ನಮ್ಮ ಪಕ್ಷವು ಕರೆ ನೀಡುತ್ತದೆ.

## ಸಚಿವರು ಮತ್ತು ಶಾಸಕರ ವೇತನ ಹೆಚ್ಚಳ ಕುರಿತು ದಿನಾಂಕ 23/03/2025ರಂದು ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಕೆ.ಉಮಾ ಅವರು ನೀಡಿದ ಪತ್ರಿಕಾ ಹೇಳಿಕೆ



ರಾಜ್ಯ ವಿಧಾನಸಭೆಯು ಸಚಿವರ, ಶಾಸಕರ, ಸಭಾಧ್ಯಕ್ಷರ ಮತ್ತು ಸಚೇತಕರ ವೇತನ ಮತ್ತು ಭತ್ಯೆಯನ್ನು ಹೆಚ್ಚಳ ಮಾಡುವ ಮಸೂದೆಯನ್ನು ಸರ್ವಾನುಮತದಿಂದ ಮಂಜೂರು ಮಾಡಿರುವುದು ಅತ್ಯಂತ ವಿಪರ್ಯಾಸದ ಸಂಗತಿ ಎಂದು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ಖಂಡಿಸುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆಯ ಸದಸ್ಯರು ರಾಜ್ಯದ ಜನಸಾಮಾನ್ಯರ ಹಿತ ಕಾಪಾಡಲು ಅವರ ಪ್ರತಿನಿಧಿಗಳಾಗಿ ಕೆಲಸ ಮಾಡಬೇಕೆಂಬುದು ಆಶಯವಾಗಿದೆ. ಆದರೆ ಇಂದು ಬಹುತೇಕ ಶಾಸಕರು ಕೋಟ್ಯಾಧಿಪತಿಗಳಾಗಿದ್ದಾರೆ. ಜನ ಸಾಮಾನ್ಯರು ನಿರ್ಗತಿಕರಾಗುತ್ತಿದ್ದಾರೆ. ವಿವಿಧ ರಂಗಗಳ ಕಾರ್ಮಿಕರ ಕನಿಷ್ಠ ವೇತನವನ್ನು ಕಳೆದ 7 ವರ್ಷಗಳಿಂದ ಏರಿಕೆ ಮಾಡಿಲ್ಲ. ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು ಮುಂತಾದ ಅಗತ್ಯ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸಲು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು, ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಹಣಕಾಸಿನ ಕೊರತೆಯ ಕಾರಣ ನೀಡಲಾಗುತ್ತದೆ. ದಿನನಿತ್ಯ ದುಡಿಯುವ ಆಶಾ, ಅಂಗನವಾಡಿ, ಬಿಸಿಯೂಟ ಮೊದಲಾದ ಸ್ಕೀಂ ನೌಕರರಿಗೆ ಪುಡಿಗಾಸಿನ ಸಂಬಳವನ್ನೂ ನೀಡಲಾಗುತ್ತಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಜನರ ಸಂಕಷ್ಟ ನಿವಾರಣೆಗೆ ದುಡಿಯಬೇಕಾದ, ಜನರ ತೆರಿಗೆಯನ್ನು ಜನ ಕಲ್ಯಾಣಕ್ಕೆ ಬಳಸಬೇಕಾದ ಸಚಿವ, ಶಾಸಕರು ಯಾವುದೇ ಪಕ್ಷ ಭೇದವಿಲ್ಲದೆ ಸರ್ವಾನುಮತದಿಂದ ತಮ್ಮ ವೇತನಗಳನ್ನು ದುಪ್ಪಟ್ಟು ಮಾಡಿಕೊಂಡಿರುವುದು ಕ್ರೂರ ಹಾಸ್ಯವಲ್ಲದೆ ಇನ್ನೇನೂ ಅಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಈ ವಿಷಯದಲ್ಲಿ ಯಾವುದೇ ಭಿನ್ನಾಭಿಪ್ರಾಯ ಹೊಂದಿಲ್ಲ ಎಂಬುದನ್ನು ರಾಜ್ಯದ ಜನತೆ ಗಮನಿಸಬೇಕು. ಇಂತಹ ವಿಲಾಸ, ದುಂದುವೆಚ್ಚವನ್ನು ತಕ್ಷಣವೇ ನಿಲ್ಲಿಸಬೇಕೆಂದು ನಾವು ಒತ್ತಾಯಿಸುತ್ತೇವೆ.

ಇನ್ನೊಂದೆಡೆ ರಾಜ್ಯದ ಸರ್ಕಾರಿ ಸ್ವಾಮ್ಯದ ವಿದ್ಯುತ್ ಕಂಪನಿಗಳು ವಿದ್ಯುತ್ ದರವನ್ನು ಮುಂದಿನ ಮೂರು ವರ್ಷಗಳಿಗೆ ಪ್ರತಿ ಯೂನಿಟಿಗೆ ಸರಾಸರಿ ಸುಮಾರು 35 ಪೈಸೆಗಳಷ್ಟು ಏರಿಕೆ ಮಾಡಿದೆ. ಇದು ಗೃಹಜ್ಯೋತಿ ಯೋಜನೆಗೆ ಒಳಪಡದ ಎಲ್ಲ ಗ್ರಾಹಕರಿಗೆ ತೀವ್ರ ಸಂಕಷ್ಟ ಉಂಟುಮಾಡುತ್ತದೆ. ಸಣ್ಣ ಅಂಗಡಿ, ಹೋಟೆಲ್, ಉದ್ದಿಮೆಗಳು ಈ ಹೊರೆಯನ್ನು ಅಂತಿಮವಾಗಿ ಸಾಮಾನ್ಯ ಗ್ರಾಹಕರ ಮೇಲೆ ವರ್ಗಾಯಿಸಬೇಕಾಗುತ್ತದೆ. ವಿದ್ಯುತ್ ಕಂಪನಿಗಳ ಕೋಟಿಗಟ್ಟಲೆ ಬಾಕಿ, ಭ್ರಷ್ಟಾಚಾರ, ದುಂದುವೆಚ್ಚಗಳಂತಹ ಸಮಸ್ಯೆಗಳನ್ನು ಬಗೆಹರಿಸದೆ ಪ್ರತಿಬಾರಿ ದರ ಏರಿಕೆ ಮಾಡಿರುವುದು ಅಸಮರ್ಥನೀಯ. ಇದು ಬೆಲೆ ಏರಿಕೆಯ ಸುಳಿಗೆ ಜನರನ್ನು ಸಿಲುಕಿಸುತ್ತದೆ. ರಾಜ್ಯ ಸರ್ಕಾರ ತಕ್ಷಣವೇ ಮಧ್ಯಪ್ರವೇಶಿಸಿ ಇದನ್ನು ರದ್ದುಗೊಳಿಸಬೇಕೆಂದು ಒತ್ತಾಯಿಸುತ್ತೇವೆ.

## ಧನಿಕರ ಹಣದ ಥೈಲಿ ತುಂಬಿಸುವ ಲೆಕ್ಕಾಚಾರ

1ನೇ ಪುಟದಿಂದ ಆದಾಯದ ಕೊರತೆ ಇದೆ. ಇದು ಕಳೆದ ಸಾಲಿನ ರೀತಿಯಲ್ಲಿಯೇ ಅದೇ ಪ್ರವೃತ್ತಿಯನ್ನು ಮುಂದುವರೆಸಿದಂತೆ. 2024–25ರಲ್ಲಿ ರೂ.27,354 ಕೋಟಿಗಳ ಕೊರತೆ ಇತ್ತು. ವಿವೇಕಯುತ ರೀತಿಯಲ್ಲಿ ತೆರಿಗೆ ಅಥವಾ ತೆರಿಗೆಯೇತರ ಆದಾಯ ಹೆಚ್ಚಿಸುವ ಬದಲು, ಸುಲಭವಾಗಿ ಸಾಲದ ಮೇಲೆ ಅವಲಂಬಿತವಾಗಿರುವುದು ಹಣಕಾಸಿನ ಸುಸ್ಥಿರತೆಯನ್ನು ಹಾಳು ಮಾಡುತ್ತದೆ ಎನ್ನುವುದು ನಿರ್ವಿವಾದ. 2025–26ರ ಅಂತ್ಯದ ವೇಳೆಗೆ ರಾಜ್ಯದ ಒಟ್ಟು ಹೊಣೆಗಾರಿಕೆಗಳು ರೂ.7.64 ಲಕ್ಷ ಕೋಟಿಗೆ ತಲುಪುವ ನಿರೀಕ್ಷೆಯಿದೆ. (ಜಿಎಸ್‌ಡಿಪಿಯ 24.91%). ಸರ್ಕಾರ ಇದು ಕರ್ನಾಟಕ ಹಣಕಾಸಿನ ಜವಾಬ್ದಾರಿ ಕಾಯ್ದೆಯ ಮಿತಿಯೊಳಗೆ ಇದೆ ಎಂದು ವಾದಿಸುತ್ತಿದ್ದರೂ, ಹೆಚ್ಚುತ್ತಿರುವ ಸಾಲದ ಹೊರೆಯಿಂದ ಆರ್ಥಿಕ ಸ್ಥಿತಿ ಕುಸಿಯುತ್ತಿರುವುದು ಅರ್ಥವಾಗದಿರುವಷ್ಟು ಕಠಿಣ ವಿಷಯವಲ್ಲ. ಸಾಲಗಳ ಬಹುಪಾಲು, ಸಾಲ ಮರುಪಾವತಿಸುವುದಕ್ಕೂ (ಸುಮಾರು ರೂ.1.16 ಲಕ್ಷ ಕೋಟಿ) ವಿನಿಯೋಜಿಸಲ್ಪಡುತ್ತದೆ. ಹಾಗಾಗಿ ಮುಂದಿನ ಪೀಳಿಗೆಗೆ ಈ ಸರ್ಕಾರಗಳು ಬಿಟ್ಟು ಹೋಗುವುದು ಸಾಲಗಳು...ಸಾಲಗಳು ಹಾಗೂ ಬರೀ ಸಾಲಗಳು.

### 3. ಗ್ಯಾರಂಟಿ ಯೋಜನೆಗಳ ಅಸಮರ್ಪಕ ನಿರ್ವಹಣೆ

ಐದು ಗ್ಯಾರಂಟಿ ಯೋಜನೆಗಳಿಗೆ (ಉದಾ. ಮಹಿಳಾ ಸಾರಿಗೆಗಾಗಿ ಶಕ್ತಿ ಯೋಜನೆ, ಗೃಹ ಲಕ್ಷ್ಮಿ) ರೂ.51,034 ಕೋಟಿ ಹಂಚಿಕೆಯಾಗುತ್ತಿದೆ. ಸರ್ಕಾರ ಜನ ಕಲ್ಯಾಣ ಕಾರ್ಯಕ್ರಮಗಳನ್ನು ಯೋಜಿಸುವುದರಲ್ಲಿ ತಪ್ಪಿಲ್ಲ. ಆದರೆ ಅವುಗಳ ನಿರ್ವಹಣೆ ಸಮಪಕವಾಗಿರಬೇಕಾಗುತ್ತದೆ. ಈ ಯೋಜನೆಗಳು ಸಾಮಾಜಿಕ ಕಲ್ಯಾಣ ಮತ್ತು ಸಂಪತ್ತಿನ ಸಮಾನ ಹಂಚಿಕೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿರಬೇಕು. ಶೋಷಿತ ಜನಸಮುದಾಯಕ್ಕೆ ಘೋಷಿಸುವ ಗ್ಯಾರಂಟಿಗಳು ಆ ಸಮುದಾಯಗಳ ಆದಾಯ ಹೆಚ್ಚಿಸುವ ರೀತಿಯ ಉತ್ಪಾದಕ ಹೂಡಿಕೆಗಳಾಗಿರಬೇಕೇ ಹೊರತು ಚುನಾವಣಾ ರಾಜಕೀಯದ ದಾಳಗಳಾಗಿ ಬಳಕೆಯಾಗಬಾರದು. ಈ ಬಾರಿಯ ಈ ಯೋಜನೆಗಳು ಒಟ್ಟು ಬಜೆಟ್‌ನ ಸರಿಸುಮಾರು 12.5% ಅನ್ನು ಬಳಸುತ್ತವೆ. ಇವುಗಳಿಗೆ ಹೊಂದಿಸುವ ಹಣಕ್ಕೆ ಸೂಕ್ತ ದಾರಿಯನ್ನು ಹುಡುಕಬೇಕು. ಇದಕ್ಕೆ ಬೇಕಾಗುವ ಆದಾಯ ಮೂಲವನ್ನು ಸೂಕ್ತವಾಗಿ ನಿರ್ವಹಿಸದಿದ್ದಲ್ಲಿ, ಇದು ಹೆಚ್ಚಿನ ದೀರ್ಘಕಾಲೀನ ಆರ್ಥಿಕ ಆದಾಯವನ್ನು ನೀಡುವ ಮೂಲಸೌಕರ್ಯ, ಆರೋಗ್ಯ ರಕ್ಷಣೆ ಮತ್ತು ಶಿಕ್ಷಣದಂತಹ ನಿರ್ಣಾಯಕ ಕ್ಷೇತ್ರಗಳಿಂದ ಹಣವನ್ನು ಬೇರೆಡೆಗೆ ತಿರುಗಿಸುವ ಸಾಧ್ಯತೆಯಿದೆ.

### 4. ನಗರಾಭಿವೃದ್ಧಿಯ ಹೆಸರಲ್ಲಿ ಲೂಟಿ ಮತ್ತು ಗ್ರಾಮೀಣಾಭಿವೃದ್ಧಿಯ ನಿರ್ಲಕ್ಷ್ಯ

ಬಜೆಟ್‌ನಲ್ಲಿ ಬೆಂಗಳೂರಿಗೆ ನಗರ ಅಭಿವೃದ್ಧಿಗೆ ರೂ.7,000 ಕೋಟಿ, "ಬ್ರ್ಯಾಂಡ್ ಬೆಂಗಳೂರು" ಯೋಜನೆಗೆ ರೂ.1,800 ಕೋಟಿ ಮತ್ತು ನಮ್ಮ ಮೆಟ್ರೋ ಹಂತ–3 ರೊಂದಿಗೆ ಡಬಲ್ ಡೆಕ್ಕರ್ ಫ್ಲೈಓವರ್‌ಗೆ ರೂ.8,916 ಕೋಟಿಗಳಷ್ಟು ಗಮನಾರ್ಹ ಸಂಪನ್ಮೂಲಗಳನ್ನು ಮೀಸಲಿಟ್ಟಿದೆ. ಈ ಹೂಡಿಕೆಗಳು ಸಂಚಾರ ದಟ್ಟಣೆಯನ್ನು ಪರಿಹರಿಸಲು ಮತ್ತು ಬೆಂಗಳೂರಿನ ಜಾಗತಿಕ ಇಮೇಜ್ ಅನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ ಎಂದು ಸಾರಲಾಗುತ್ತಿದೆ. ಆದರೆ ಬೆಂಗಳೂರಿನ ರಸ್ತೆ, ಚರಂಡಿ, ಕುಡಿಯುವ ನೀರಿನ ವ್ಯವಸ್ಥೆಯಂತಹ ಮೂಲ ಸೌಕರ್ಯಗಳ ಅಭಿವೃದ್ಧಿ ಕನಸಿನ ಮಾತಾಗಿದೆ. ಸ್ವತ: ಉಪ ಮುಖ್ಯಮಂತ್ರಿಗಳೇ ಬೆಂಗಳೂರು ನಗರವನ್ನು ಸುಧಾರಿಸಲು ದೇವರಿಗೂ ಸಾಧ್ಯವಿಲ್ಲ ಎಂದು ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ ಅವರೇ ಕೋಟಿ ಕೋಟಿಗಳ ಬ್ರ್ಯಾಂಡ್ ಬೆಂಗಳೂರು ಮಾತನಾಡುತ್ತಿದ್ದಾರೆ. ಹಾಗಾದಲ್ಲಿ ಈ ಕೋಟಿಗಳು ಯಾರ ಜೀವನ ಸುಧಾರಣೆಗಾಗಿ? ಜನಸಾಮಾನ್ಯರದ್ದೋ ಅಥವಾ ಬಹುರಾಷ್ಟ್ರೀಯ ಕಂಪೆನಿಗಳ ಉದ್ಧಾರಕ್ಕೋ? ಇದೊಂದು ಯಕ್ಷಪ್ರಶ್ನೆ.

ಈ ಕೋಟಿ–ಕೋಟಿ ಲೆಕ್ಕಾಚಾರಗಳ ನಡುವೆ ಗ್ರಾಮೀಣ ಕರ್ನಾಟಕವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಕಾಣುತ್ತದೆ. ಕೃಷಿಗೆ ರೂ.51,339 ಕೋಟಿ ಹಂಚಿಕೆಯ ಹೊರತಾಗಿಯೂ ಗ್ರಾಮೀಣ ಪ್ರದೇಶಗಳು ಅಸಮರ್ಪಕ ರಸ್ತೆಗಳು, ವಿದ್ಯುತ್ ಮತ್ತು ನೀರಾವರಿ ಮೂಲಸೌಕರ್ಯಗಳಿಂದ ಬಳಲುತ್ತಿವೆ. ಗ್ರಾಮೀಣ ಉದ್ಯೋಗ, ಹಣಕಾಸು ಸೌಲಭ್ಯ ಅಥವಾ ಕೌಶಲ್ಯ ಅಭಿವೃದ್ಧಿಯಲ್ಲಿ ಪ್ರಮುಖ ಹೂಡಿಕೆಯ ಕೊರತೆಯು ಪ್ರಾದೇಶಿಕ ಅಸಮತೋಲನದ ಆರೋಪಗಳನ್ನು ಮತ್ತಷ್ಟು ಹೆಚ್ಚಿಸುತ್ತದೆ. ಗ್ರಾಮೀಣ ಸರ್ಕಾರಿ ಶಾಲೆಗಳು ಹಣಕಾಸಿನ ಕೊರತೆಯಿಂದ ಕೂಡಿದ್ದು, ಸಮಾನ ಸಂಪನ್ಮೂಲ ವಿತರಣೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುತ್ತವೆ.

### 5. ನಾವೀನ್ಯತೆ ಮತ್ತು ಉದ್ಯೋಗ ಸೃಷ್ಟಿಯ ಕೊರತೆ

ಕರ್ನಾಟಕವು ಐಟಿ ಮತ್ತು ಸ್ಟಾರ್ಟ್‌ಅಪ್ ಕೇಂದ್ರವಾಗಿ ಖ್ಯಾತಿ ಪಡೆದಿದ್ದರೂ, ಉದ್ಯೋಗ ಸೃಷ್ಟಿ ಅಥವಾ ಕೌಶಲ್ಯ ಅಭಿವೃದ್ಧಿಯನ್ನು ಹೆಚ್ಚಿಸಲು ಬಜೆಟ್ ಸಾಕಷ್ಟು ಮಾಡಿಲ್ಲ ಎಂದು ಟೀಕಿಸಲಾಗಿದೆ. ಹೊಸ ಕೈಗಾರಿಕಾ ನೀತಿ 2025–30 ಮತ್ತು ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ (LEAP) ನಂತಹ ಉಪಕ್ರಮಗಳು ಐದು ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದ್ದರೂ, ಆರಂಭಿಕ ರೂ. 200 ಕೋಟಿ ಹಂಚಿಕೆಯನ್ನು ಬಿಟ್ಟರೆ, ಈ ಕಾರ್ಯಕ್ರಮದ ಅನುಷ್ಠಾನ ಅಥವಾ ನಿಧಿಯ ಬಗ್ಗೆ ಹೆಚ್ಚಿನ ವಿವರಗಳಿಲ್ಲ. ಬಜೆಟ್‌ನಲ್ಲಿ ಯುವ ನಿರುದ್ಯೋಗವನ್ನು ಪರಿಹರಿಸಲು ಅಥವಾ ಉದಯೋನ್ಮುಖ ಕೈಗಾರಿಕೆಗಳಿಗೆ ಕಾರ್ಯಪಡೆಯನ್ನು ಸಿದ್ಧಪಡಿಸಲು ದಿಟ್ಟ ಕ್ರಮಗಳ ಕೊರತೆಯಿದೆ, ಬದಲಿಗೆ ಯಾವುದೇ ರೀತಿಯ ನಾವೀನ್ಯತೆ ಇಲ್ಲದೆ, ಐಟಿ ಮತ್ತು ಉತ್ಪಾದನೆಯಂತಹ ಅಸ್ತಿತ್ವದಲ್ಲಿರುವ ವಲಯಗಳ ಮೇಲೆ ಹೆಚ್ಚು ಅವಲಂಬಿತವಾಗಿದೆ ಎಂಬುದು ಉದ್ಯೋಗ ಸೃಷ್ಟಿಯ ವಿಷಯದಲ್ಲಿ ಸರ್ಕಾರ ಎಷ್ಟು ಗಂಭೀರವಾಗಿದೆ ಎಂಬ ಪ್ರಶ್ನೆಯನ್ನು ಮೂಡಿಸುತ್ತದೆ.

### 6. ಮೂಲಸೌಕರ್ಯ ವೆಚ್ಚ ಮತ್ತು ಅನುಷ್ಠಾನ

ಬೆಂಗಳೂರು ಮೆಟ್ರೋ ವಿಸ್ತರಣೆಗೆ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮತ್ತು 15,000 ಕೋಟಿ ರೂ. ವೆಚ್ಚದ ಉತ್ತರ–ದಕ್ಷಿಣ ಸುರಂಗ ಮಾರ್ಗದಂತಹ ಪ್ರಮುಖ ಮೂಲಸೌಕರ್ಯ ಯೋಜನೆಗಳು ಮಹತ್ವಾಕಾಂಕ್ಷೆಯದ್ದಾಗಿವೆ. ಆದರೆ ಸಕಾಲಿಕ ಅನುಷ್ಠಾನದ ಬಗ್ಗೆ ಸಂದೇಹವನ್ನು ಎದುರಿಸುತ್ತಿವೆ. ಹಿಂದಿನ ಬಜೆಟ್‌ಗಳಲ್ಲಿಯೂ ಇಂತಹ ಮೂಲಸೌಕರ್ಯ ಯೋಜನೆಗಳು ಬರೀ ಬಣ್ಣ ಬಣ್ಣದ ಮಾತುಗಳಿಂದ ರಂಜಿಸಿದವಷ್ಟೇ, ಅನುಷ್ಠಾನಗೊಳ್ಳಲಿಲ್ಲ. 2025–26ರ ಬಜೆಟ್ ಸಾರ್ವಜನಿಕ–ಖಾಸಗಿ ಸಹಭಾಗಿತ್ವವನ್ನು (ಉದಾ. ಪ್ರಾಜೆಕ್ಟ್ ಮೆಜೆಸ್ಟಿಕ್) ಅವಲಂಬಿಸಿರುವುದು ಮಿತಿಮೀರಿದ ವೆಚ್ಚ ಮತ್ತು ಹೊಣೆಗಾರಿಕೆ (Liabilities)ಯ ಬಗ್ಗೆ ಕಳವಳವನ್ನು ಹುಟ್ಟುಹಾಕುತ್ತದೆ. ಇಂತಹ ಪ್ರಾಜೆಕ್ಟ್‌ಗಳು ಹಲವು ಫೀಗಳ ಹೆಸರಿನಲ್ಲಿ ಕೊನೆಗೆ ಸಾಮಾನ್ಯ ಗ್ರಾಹಕರ ತಲೆಗೇ ಟೋಪಿ ಹಾಕುವುದು.

ಇದಲ್ಲದೆ, 8,000 ಕೋಟಿ ರೂ. ಮುಖ್ಯಮಂತ್ರಿಗಳ ಸಣ್ಣ ನೀರಾವರಿ ಮತ್ತು ರಸ್ತೆಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮವು ದೀರ್ಘಕಾಲದ ಗ್ರಾಮೀಣ ಸಂಪರ್ಕ ಸಮಸ್ಯೆಗಳನ್ನು ಪರಿಣಾಮಕಾರಿಯಾಗಿ ಹೇಗೆ ಪರಿಹರಿಸುತ್ತದೆ ಎಂಬುದರ ಕುರಿತು ಸ್ಪಷ್ಟತೆಯನ್ನು ಹೊಂದಿಲ್ಲ.

ಒಟ್ಟಾರೆಯಾಗಿ, ಸಾಲದ ಮೇಲೆ ಭಾರೀ ಅವಲಂಬನೆ, ಜನಪ್ರಿಯ ಯೋಜನೆಗಳ ಮೇಲೆ ಕೇಂದ್ರೀಕರಿಸುವುದು, ನಗರ ಪಕ್ಷಪಾತ, ಹಣಕಾಸಿನ ದು:ಸ್ಥಿತಿ ಮತ್ತು ಸಮಾನ ಬೆಳವಣಿಗೆಗೆ ದೀರ್ಘಾವಧಿಯ ದೃಷ್ಟಿಕೋನದ ಕೊರತೆ ಎದ್ದು ಕಾಣುತ್ತಿದೆ.

### ಬಂಡವಾಳಿಗರ ನಾಡಲ್ಲಿ ಎಲ್ಲಕ್ಕೂ ಸುಂಕವೇ?

ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಕೈಗೊಳ್ಳುವ ಬಜೆಟ್ ಎನ್ನುವ ಈ ಸರ್ಕಸ್, ಇಂದು ವಿಶ್ವಾಸಪಾತ್ರವಾಗಿ ಉಳಿದಿಲ್ಲ. ಬಹುಮಟ್ಟಿಗೆ ಪ್ರಹಸನದ ಮಟ್ಟಕ್ಕೆ ಇಳಿದಿದೆ. ಆದಾಯ ಹೆಚ್ಚಿಸುವುದು ಅಂದರೆ ಸುಂಕ ವಿಧಿಸುವುದು, ಶುಲ್ಕ ಹೆಚ್ಚಿಸುವುದು ಎಂಬಂತಾಗಿದೆ. ಬದಲಿಗೆ ಬಡವನಿಂದ ಬಲ್ಲಿದನವರೆಗೆ ಎಲ್ಲರನ್ನೂ ಸುಂಕದ ತೊಟ್ಟಿಯೊಳಗೆ ಹಾಕಿ ಉಸಿರು ಕಟ್ಟಿಸಲಾಗುತ್ತಿದೆ. ಉದಾ: ಓರ್ವ ಸಾಮಾನ್ಯ ನಾಗರಿಕ ಒಂದು ವಾಹನ ಖರೀದಿ ಮಾಡಿದರೆ, ವಾಹನದ ಬೆಲೆಗೆ ಜಿಎಸ್‌ಟಿ ವಿಧಿಸಲಾಗುವುದು, ರೋಡ್ ಟ್ಯಾಕ್ಸ್ ವಿಧಿಸಲಾಗುವುದು, ವಾಹನಕ್ಕೆ ತುಂಬಿಸುವ ಇಂಧನಕ್ಕೂ ತೆರಿಗೆ ವಿಧಿಸಲಾಗುವುದು, ವಾಹನ ಚಲಾಯಿಸುವ ಲೈಸೆನ್ಸ್‌ಗೆ ದೊಡ್ಡ ಮೊತ್ತದ ಫೀ ವಿಧಿಸಲಾಗುವುದು, ಇದೆಲ್ಲಕ್ಕೂ ಕಳಸವಿಟ್ಟಂತೆ ರಸ್ತೆಗಿಳಿದ ವಾಹನ ತನ್ನ ಊರು ಸೇರಬೇಕಾದರೆ ಹಲವು ಬಾರಿ ಟೋಲ್ ಪಾವತಿ ಮಾಡಬೇಕಾಗುವುದು. ಒಂದು ವೇಳೆ, ಸಾವಿಲ್ಲದ ಮನೆಯಿಂದ ಸಾಸಿವೆ ಕಾಳು ತರಲು ಹೇಳಿದ ಬುದ್ಧ ಈ ಕಾಲದಲ್ಲಿದ್ದರೆ, ಸುಂಕವಿಲ್ಲದ ವಸ್ತು ತರಲು ಹೇಳುತ್ತಿದ್ದರೇನೋ!! ಒಂದೆಡೆ ಸರ್ಕಾರಿ ಉದ್ಯೋಗಿಗಳಿಗೆ ವೇತನ ನೀಡುವುದು, ಜನ ಕಲ್ಯಾಣ ಕಾರ್ಯಕ್ರಮಗಳಿಗೆ ಹಣ ವಿನಿಯೋಜಿಸುವುದು ಒಂದು ದೊಡ್ಡ ಹೊರೆ ಎನ್ನುವ ಸಂಕಥನವನ್ನು ಹರಿ ಬಿಡಲಾಗುತ್ತಿದೆ. ಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡುವ ಯಾವುದೇ ಕ್ರಮಗಳು ಆರ್ಥಿಕ ಬೆಳವಣಿಗೆಗೆ ಪೂರಕವಾಗುವುದು. ಇನ್ನೊಂದೆಡೆ ಭ್ರಷ್ಟಾಚಾರಕ್ಕೆ ಕಡಿವಾಣ, ಅನಾವಶ್ಯಕ ಹಣ ಪೋಲಾಗುವುದನ್ನು ತಡೆಗಟ್ಟುವುದು, ಸರಳ ತೆರಿಗೆ ನೀತಿ, ಆದಾಯ ಆಧಾರಿತ ತೆರಿಗೆ ನೀತಿ, ತೆರಿಗೆಯೇತರ ಆದಾಯಗಳ ಸಂಗ್ರಹ ಇತ್ಯಾದಿ ಯಾವುದೇ ನವೀನ ಆಲೋಚನೆಗಳೇ ಆಳ್ವಿಕರಲ್ಲಿ ಇಲ್ಲ.

### ಧನಿಕರ ಥೈಲಿ ತುಂಬಿತಲ್ಲೋ ಬಹುಪರಾಕ್!!

ಸರ್ಕಾರದ ಆರ್ಥಿಕ ನೀತಿಗಳು, ಅದಕ್ಕನುಗುಣವಾಗಿ ತಯಾರಾಗುವ ಬಜೆಟ್ ಯಾರ ಪರವಾಗಿದೆ ಎನ್ನುವುದು ಬಹು ಮುಖ್ಯ. ಸಮಾಜವಾದಿ ವ್ಯವಸ್ಥೆಯ ಬಜೆಟ್‌ನಲ್ಲಿ ಸಮಾಜದ ಅವಶ್ಯಕತೆಗಳಿಗೆ ಆದ್ಯತೆ ನೀಡಲಾಗಿರುತ್ತದೆ, ಅದೇ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಲಾಭಗಳಿಕೆಯೇ ಆದ್ಯತೆಯಾಗಿರುತ್ತದೆ. ಸಮಾಜವಾದಿ ವ್ಯವಸ್ಥೆಯಲ್ಲಿ ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಶಿಕ್ಷಣ, ವಸತಿ, ಮೂಲ ಸೌಕರ್ಯಗಳ ಅಭಿವೃದ್ಧಿಗಳಿಗೆ ಆದ್ಯತೆ ನೀಡಿ ಹೂಡಿಕೆ ಮಾಡಲಾಗುತ್ತದೆ, ಕೃಷಿ, ಕೈಗಾರಿಕೆಗಳ ಉತ್ಪಾದನಾ ಗುರಿಗಳು ಸಮಾಜದ ಅವಶ್ಯಕತೆಗೆ ತಕ್ಕಂತೆ ಇರುತ್ತವೆ, ಹೆಚ್ಚುವರಿ ಉಳಿಕೆ, ಮತ್ತೆ ಸಮಾಜಕ್ಕೆ ಮರುವಿತರಣೆಯಾಗುತ್ತದೆ. ಆದರೆ ಬಂಡವಾಳ ವ್ಯವಸ್ಥೆಯಲ್ಲಿ ಲಾಭಕೋರತನದಿಂದ ಶೋಷಣೆ ಮಿತಿಮೀರಿ, ಉಳಿಕೆ ಸಂಪತ್ತು ಏಕವ್ಯಕ್ತಿಯಲ್ಲಿ ಅಥವಾ ಕೆಲವೇ ವ್ಯಕ್ತಿಗಳಲ್ಲಿ ಕ್ರೋಢೀಕೃತವಾಗುವುದು.

ಹಾಗಾಗಿ ಬಜೆಟ್ ಭಾಷಣದ ನಡುವೆ ಉದ್ಧರಿಸುವ ಸಂಸ್ಕೃತ ಶ್ಲೋಕಗಳನ್ನು, ಸರ್ವಜ್ಞನವರ, ಬಸವಣ್ಣನವರ ವಚನಗಳನ್ನು ಪಕ್ಕಕ್ಕಿಟ್ಟು, ಸಮಾಜವಾದಿ ಮುಖ್ಯಮಂತ್ರಿ ಎಂದು ಬೀಳುಬೀಸಾಗಿ ಬಳಸಿದ ಪದಗಳಾಚೆ ದೃಷ್ಟಿ ಹಾಯಿಸಿ, ಬಡವರ ಉದ್ಧಾರದ ಆಕರ್ಷಕ ನುಡಿಗಟ್ಟುಗಳನ್ನು ಬಳಸಿದ ಘೋಷಣೆಗಳ ಮುಸುಕು ಸರಿಸಿ ನೋಡಿದಾಗ ಮೇಲಿನ ಅಂಶಗಳು ಕಣ್ಣಿಗೆ ರಾಚುತ್ತವೆ.

ಈ ಸರ್ಕಾರಗಳ ಮುಖವಾಡಗಳನ್ನು ಬಯಲು ಮಾಡಿ, ಧನಿಕರ ಥೈಲಿ ತುಂಬುವ ಆರ್ಥಿಕ ನೀತಿಗಳನ್ನು ಜನ ಚಳುವಳಿಗಳ ಮೂಲಕ ಹಿಮ್ಮೆಟ್ಟಿಸಬೇಕಾಗಿದೆ.

# ಅಮೆರಿಕದ ಜನರನ್ನು ವಿನಾಶಕ್ಕೆ ತಳ್ಳುತ್ತಿರುವ ಟ್ರಂಪ್ ನೀತಿಗಳು

ಅಧಿಕಾರಕ್ಕೆ ಬಂದ ಬಳಿಕ 'ಅಮೆರಿಕ ಮೊದಲು' ಎನ್ನುವ ಘೋಷಣೆಯನ್ನು ಹೊರಡಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಲವು ವಿವಾದಾತ್ಮಕ ನಿರ್ಧಾರಗಳನ್ನು ಕೈಗೊಳ್ಳುವ ಮೂಲಕ ಸುದ್ದಿಯಲ್ಲಿದ್ದಾರೆ.

ವಿಶ್ವದ ಅತ್ಯಂತ ಶ್ರೀಮಂತ ವ್ಯಕ್ತಿಗಳಲ್ಲೊಬ್ಬರಾದ ಎಲಾನ್ ಮಸ್ಕ್ ಅವರನ್ನು ಸಲಹೆಗಾರರನ್ನಾಗಿ ಮಾಡಿಕೊಂಡು, ಟ್ರಂಪ್ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಕುಳಗಳಿಗೆ ಪೂರಕವಾಗಿ ಹಲವು ನೀತಿಗಳನ್ನು ರೂಪಿಸುತ್ತಿದ್ದಾರೆ. ಇದಕ್ಕೆ ಅಮೆರಿಕದ ಪ್ರಜೆಗಳಿಂದಲೇ ಭಾರೀ ಪ್ರಮಾಣದ ಪ್ರತಿರೋಧ ವ್ಯಕ್ತವಾಗಿದೆ. 'ಅಮೆರಿಕ ಮೊದಲು' ಎಂಬ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ ಭಾರೀ ಪ್ರಮಾಣದ ಲಾಭ ತಂದುಕೊಡುವ ನಿಟ್ಟಿನಲ್ಲಿ ಟ್ರಂಪ್ ಹಲವು ಕಾರ್ಯಕಾರಿ ಆದೇಶಗಳಿಗೆ ಸಹಿ ಹಾಕುತ್ತಿದ್ದಾರೆ; ಆದರೆ, ಅಲ್ಲಿನ ಜನಗಳಿಗಾಗಿ ಯಾವುದೇ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುತ್ತಿಲ್ಲ.

### ಗಾಜಾ ಕಬಳಿಸಲು ಯತ್ನ

ಇಸ್ರೇಲ್–ಪ್ಯಾಲೆಸ್ಟೀನಿಯರ ಸಂಘರ್ಷದ ತಾಣವಾದ ಮಧ್ಯಪ್ರಾಚ್ಯದ ಗಾಜಾ ಪಟ್ಟಿಯನ್ನು ಅಮೆರಿಕ ತನ್ನದಾಗಿಸಿಕೊಳ್ಳಲಿದೆ ಎಂದು ಟ್ರಂಪ್ ಹೇಳಿಕೆ ನೀಡಿದ್ದಾರೆ. ಅದನ್ನು ತನ್ನ ವಶಕ್ಕೆ ಪಡೆದುಕೊಂಡು ಪ್ಯಾಲೆಸ್ಟೀನಿಯರಿಗೆ ಬೇರೆ ಕಡೆ ಪುನರ್ವಸತಿ ಕಲ್ಪಿಸಿ ಗಾಜಾವನ್ನು ಅಸಾಧಾರಣ ಅಭಿವೃದ್ಧಿ ಯೋಜನೆಯಡಿ ಮರುಸ್ಥಾಪನೆ ಮಾಡುವುದಾಗಿ ಘೋಷಿಸಿದ್ದಾರೆ.

ಕಳೆದ ತಿಂಗಳು ಹಮಾಸ್ ಮತ್ತು ಇಸ್ರೇಲ್ ಸೇನೆಯ ಮಧ್ಯೆ ಕದನ ವಿರಾಮದ ಮಾತುಕತೆ ನಡೆಯುವ ವೇಳೆಯೇ ಈ ಹೇಳಿಕೆ ಹೊರಬಿದ್ದಿದೆ. 23 ಲಕ್ಷ ಪ್ಯಾಲೆಸ್ಟೀನಿಗಳ ಪೈಕಿ ಈಗಾಗಲೇ 45,000 ಪ್ಯಾಲೆಸ್ಟೀನಿಯರು ಹತರಾಗಿದ್ದಾರೆ, ಶೇ.90ರಷ್ಟು ಜನರು ತಮ್ಮ ನೆಲೆಗಳನ್ನು ಕಳೆದುಕೊಂಡಿದ್ದಾರೆ. ಕದನ ವಿರಾಮ ಘೋಷಣೆಯಾಗುತ್ತಿದ್ದಂತೆಯೇ ಅವರು ತಮ್ಮ ತಾಯ್ನಾಡಿಗೆ ಮರಳುವುದಕ್ಕೆ ದೊಡ್ಡ ಅಡ್ಡಿಯಾಗಿರುವುದೆಂದರೆ, ಇಸ್ರೇಲ್ ಗಾಜಾ ಪಟ್ಟಿಯ ಮೇಲೆ ನಿರಂತರ ದಾಳಿ ಮಾಡುತ್ತಿರುವುದು! ಟ್ರಂಪ್ ಹೇಳಿಕೆ ರಾಜಕೀಯ ಲಾಭಕ್ಕಾಗಿ ಒಂದು ಜನಾಂಗದ ಅಸ್ತಿತ್ವವನ್ನು ನಿರ್ನಾಮ ಮಾಡುವ ಹುನ್ನಾರವಾಗಿದೆ. ಅಂತಿಮವಾಗಿ ಅಳಿದುಳಿದ ಪ್ಯಾಲೆಸ್ಟೀನಿಯರನ್ನು ತಮ್ಮ ತಾಯ್ನಾಡಿನಿಂದ ಒಕ್ಕಲೆಬ್ಬಿಸಿ ನೆರೆಯ ಜೋರ್ಡಾನ್ ಅಥವಾ ಈಜಿಪ್ಟ್‌ನಲ್ಲಿ ನೆಲೆ ಕಾಣಿಸುವ ಸಂಚು ಹೂಡಲಾಗಿದೆ. ಆ ಮೂಲಕ ಅಮೆರಿಕ ಇತರೆ ರಾಷ್ಟ್ರಗಳಲ್ಲಿ ಭಯವನ್ನು ಬಿತ್ತುತ್ತಾ, ತನ್ನ ವಿಧ್ವಂಸಕ ಶಸ್ತ್ರಗಳ ಬಲದಿಂದ ತನ್ನ ದೇಶದ ನೆಲೆಯನ್ನು ವಿಸ್ತರಿಸುವಂತೆ ಕಾಣಿಸುತ್ತದೆ.

ಸಾವಿರಾರು ನಿರಾಶ್ರಿತ ಪ್ಯಾಲೆಸ್ಟೀನಿಯರು ಗಾಜಾ ನಗರದ ಉತ್ತರಕ್ಕೆ ಕಡಲ ದಂಡೆಯಲ್ಲಿ ತಮ್ಮ ಮನೆಗಳತ್ತ ಹೋಗುತ್ತಿರುವಾಗ, ಟ್ರಂಪ್, 'ಗಾಜಾ ನದಿ ತೀರದಲ್ಲಿನ ರಮಣೀಯ ಆಸ್ತಿ' ಬಗ್ಗೆ ಉಲ್ಲೇಖಿಸಿದ್ದಾರೆ. ಇದು, ಎಲ್ಲ ನಿರಾಶ್ರಿತರು ತಮ್ಮ ಮನೆಗಳಿಗೆ ಮರಳುವ ಹಕ್ಕನ್ನು ಎತ್ತಿ ಹಿಡಿದಿರುವ ವಿಶ್ವಸಂಸ್ಥೆ 1948ರಲ್ಲಿ ಕೈಗೊಂಡ 194ನೇ ನಿರ್ಣಯದ ಉಲ್ಲಂಘನೆಯಾಗಿದೆ. ಆದರೆ, ಈ ನಿರ್ಣಯಕ್ಕೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡದ ಜನಾಂಗೀಯವಾದಿ ಇಸ್ರೇಲ್ ಸೇನೆ ಮತ್ತು ಟ್ರಂಪ್ ಅಲ್ಲಿನ ಜನರನ್ನು ಒಕ್ಕಲೆಬ್ಬಿಸುವ ಮಾತುಗಳನ್ನಾಡುತ್ತಿದ್ದಾರೆ. ಆ ಮೂಲಕ ಪ್ಯಾಲೆಸ್ಟೀನ್ ನೆಲವನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುವುದು ಅಮೆರಿಕ ಸಾಮ್ರಾಜ್ಯಶಾಹಿಯ ಹುನ್ನಾರ. ಜೊತೆಗೆ, ಅಲ್ಲಿ ಆತನಿಗೆ ಒಂದು ವೈಯಕ್ತಿಕ ಹಿತಾಸಕ್ತಿಯೂ ಇದೆ; ಅದೆಂದರೆ, ಆ ಭೂಮಿಯನ್ನು ತನ್ನ ಹಾಗೂ ತನ್ನ ಕುಟುಂಬದ ಸದಸ್ಯರು ಅತ್ಯಂತ ಕಡಿಮೆ ಬೆಲೆಗೆ ಖರೀದಿಸಿ, ಅಲ್ಲಿ ಹೋಟೆಲ್, ಕ್ಯಾಸಿನೊ ಮತ್ತು ಗಾಲ್ಫ್ ಕ್ಲಬ್‌ಗಳ ನಿರ್ಮಾಣಕ್ಕೆ ಹಣವನ್ನು ಹೂಡಿಕೆ ಮಾಡುವ ಯೋಜನೆ. ವರದಿಗಳ ಪ್ರಕಾರ ಡೊನಾಲ್ಡ್ ಟ್ರಂಪ್ ಈಗಾಗಲೇ ಒಮಾನ್, ಸೌದಿ ಅರೇಬಿಯಾ ಮತ್ತು ದುಬೈನಲ್ಲಿ ಹೋಟೆಲ್, ಗಾಲ್ಫ್ ಕೋರ್ಟ್‌ಗಳಿಗೆ ಹಣ ಹೂಡಿಕೆ ಮಾಡಿದ್ದಾರೆ. ಒಮಾನ್ ಒಂದರಲ್ಲಿಯೇ 75 ಲಕ್ಷ ಡಾಲರ್ ಲಾಭವನ್ನು ಈ ಉದ್ಯಮಗಳು ತಂದು ಕೊಡುತ್ತಿವೆಯಂತೆ.

### ಗ್ರೀನ್‌ಲ್ಯಾಂಡ್ ಕಿತ್ತುಕೊಳ್ಳುವ ಹುನ್ನಾರ!

ಡೆನ್ಮಾರ್ಕ್‌ನ ಸ್ವಾಯತ್ತ ನೆಲವಾದ, ವಿಶ್ವದ ಅತಿ ದೊಡ್ಡ ದ್ವೀಪವಾದ ಗ್ರೀನ್‌ಲ್ಯಾಂಡ್ ಮೇಲೆ ಟ್ರಂಪ್ ಕಾಕದೃಷ್ಟಿ ಬಿದ್ದಿದೆ. ಕಳೆದ ಡಿಸೆಂಬರ್‌ನಲ್ಲಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಟ್ರಂಪ್ ಗ್ರೀನ್‌ಲ್ಯಾಂಡ್ ಮೇಲೆ ಅಧಿಪತ್ಯ ಸ್ಥಾಪಿಸುವುದು ಅತಿ ಜರೂರಿನ ಕೆಲಸ ಎಂದು ಘೋಷಿಸಿದ್ದರು. ಪತ್ರಿಕಾ ಗೋಷ್ಠಿಯೊಂದರಲ್ಲಿ ಮಾತನಾಡುತ್ತಾ, ಗ್ರೀನ್ ಲ್ಯಾಂಡ್ ಅಥವಾ ಪನಾಮಾದ ಮಾಲೀಕತ್ವ ಪಡೆದುಕೊಳ್ಳಲು ಮಿಲಿಟರಿ ಅಥವಾ ಆರ್ಥಿಕ ದಿಗ್ಬಂಧನದಂತಹ ದಿಟ್ಟ ಕ್ರಮಗಳನ್ನು ಕೈಗೊಳ್ಳುವ ಸುಳಿವು ನೀಡಿದ್ದರು. ಗ್ರೀನ್‌ಲ್ಯಾಂಡ್ ಬಹು ಅಪರೂಪದ ಭೂ ಖನಿಜ ಸಂಪತ್ತು ಹೊಂದಿದ್ದು, ಜಾಗತಿಕ ತಾಪಮಾನ ಬದಲಾವಣೆಯಿಂದ ಅಲ್ಲಿಯ ಹಿಮ ಕರಗುತ್ತಿರುವುದರಿಂದ ಆ ಖನಿಜಗಳನ್ನು ಪಡೆದುಕೊಳ್ಳಲು ಹೆಚ್ಚಿನ ಶ್ರಮ ಅಗತ್ಯವಿಲ್ಲದ್ದನ್ನು ಗಮನಿಸಿದ ಅಮೆರಿಕದ ಸಾಮ್ರಾಜ್ಯಶಾಹಿಗಳು ಇದರ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿರುವುದು ಸಹಜವೇ ಆಗಿದೆ.

ಗ್ರೀನ್‌ಲ್ಯಾಂಡ್‌ನಲ್ಲಿ ತೈಲ ಮತ್ತು ಅನಿಲಗಳು, ವಿದ್ಯುತ್ ಕಾರುಗಳಿಗೆ ಬಳಸಲು ಹಾಗೂ ಪವನ ಯಂತ್ರ ತಯಾರಿಕೆಗಾಗಿ ಹೆಚ್ಚಿನ ಬೇಡಿಕೆ ಇರುವ ಖನಿಜ ನಿಕ್ಷೇಪಗಳು, ಮಿಲಿಟರಿ ಉಪಕರಣಗಳ ತಯಾರಿಕೆಗೆ ಬೇಕಾಗುವ ಖನಿಜಗಳು ಹೇರಳವಾಗಿ ಸಿಗುತ್ತವೆ. ಪ್ರಸ್ತುತ ಚೀನಾ ಇಂತಹ ಅಪರೂಪದ ಖನಿಜಗಳ ಉತ್ಪಾದನೆಯಲ್ಲಿ ಅಗ್ರಗಣ್ಯ ಸ್ಥಾನದಲ್ಲಿದ್ದು, ವಿರಳವಾಗಿ ದೊರೆಯುವ ಖನಿಜಗಳು ಹಾಗೂ ಅದರ ತಂತ್ರಜ್ಞಾನದ ರಫ್ತನ್ನು ನಿಲ್ಲಿಸುವುದಾಗಿ ಎಚ್ಚರಿಕೆ ನೀಡಿದೆ. ಇದರಿಂದ ವಿಶ್ವದ ದೊಡ್ಡಣ್ಣ ಸಾಮ್ರಾಜ್ಯಶಾಹಿ ಬಣದಲ್ಲಿನ ತನ್ನ ಸ್ಥಾನವನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದಾನೆ. ಹಾಗಾಗಿ, ತನ್ನ ಪ್ರತಿಸ್ಪರ್ಧಿಗಳಾಗಿರುವ ಚೀನಾ ಮತ್ತು ರಷ್ಯಾ ಸಾಮ್ರಾಜ್ಯಶಾಹಿಗಳ ಮುನ್ನಡೆಗೆ ತಡೆಯೊಡ್ಡಲು, ಅಮೆರಿಕ ಸಾಮ್ರಾಜ್ಯಶಾಹಿ, ತನ್ನ ಮಿಲಿಟರಿ ಬಲ ಅಥವಾ ಆರ್ಥಿಕ ಬಲವನ್ನು ಬಳಸಿಕೊಂಡು ಗ್ರೀನ್‌ಲ್ಯಾಂಡನ್ನು ತನ್ನ ವಶಕ್ಕೆ ಪಡೆಯುವ ಷಡ್ಯಂತ್ರ ಹೂಡಿದೆ.

ಇಷ್ಟೇ ಅಲ್ಲದೇ, ಎರಡನೇ ಬಾರಿಗೆ ಅಮೆರಿಕ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಡೊನಾಲ್ಡ್ ಟ್ರಂಪ್ ಶ್ವೇತ ಭವನ ಪ್ರವೇಶಿಸುತ್ತಿದ್ದಂತೆಯೇ ಕೆನಡಾದತ್ತ ಕೆಂಗಣ್ಣು ಬೀರಿದ್ದರು. ಅಮೆರಿಕದೊಂದಿಗೆ ಗಡಿ ಹಂಚಿಕೊಂಡಿರುವ ಕೆನಡಾವು ವಲಸೆಯನ್ನು ನಿಯಂತ್ರಿಸಲು ಹಾಗೂ ಮಾದಕ ವಸ್ತುಗಳ ಸಾಗಣೆಯನ್ನು ನಿರ್ಬಂಧಿಸಲು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದರು. ಇದಕ್ಕೆ ಪ್ರತಿಯಾಗಿ ಕೆನಡಾದಿಂದ ಆಮದಾಗುವ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುವುದಾಗಿಯೂ ಎಚ್ಚರಿಕೆ ನೀಡಿದ್ದಾರೆ. ಇನ್ನೂ ಮುಂದುವರೆದು ಇತ್ತೀಚೆಗೆ ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ 'ಕೆನಡಾ ಅಮೆರಿಕದ 51ನೇ ರಾಜ್ಯವಾಗುವುದು ಹೆಚ್ಚು ಸೂಕ್ತ' ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ಮೂಲಕ ಸ್ವತಂತ್ರ ರಾಷ್ಟ್ರವಾದ ಕೆನಡಾವನ್ನು ಅಮೆರಿಕದ ತೆಕ್ಕೆಗೆ ತೆಗೆದುಕೊಳ್ಳುವ ಮಾತುಗಳನ್ನು ಉದ್ದೇಶಪೂರ್ವಕವಾಗಿಯೇ ಆಡಿದ್ದಾರೆ.

ದಶಕಗಳ ಹಿಂದೆ ಸೂಯೆಜ್ ಕಾಲುವೆ ಮೇಲೆ ನಿಯಂತ್ರಣ ಹೊಂದಲು, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಇಸ್ರೇಲ್‌ನೊಂದಿಗೆ ಸೇರಿಕೊಂಡು ಈಜಿಪ್ಟ್ ಮೇಲೆ ಆಕ್ರಮಣ ಮಾಡಿದಾಗ, ತಕ್ಷಣವೇ ಈ ಕಾನೂನುಬಾಹಿರ ಅತಿಕ್ರಮಣ ನಿಲ್ಲಿಸದಿದ್ದರೆ ಮುಂದಿನ 48 ಗಂಟೆಗಳಲ್ಲಿ ಲಂಡನ್ ಮತ್ತು ಪ್ಯಾರಿಸ್ ಮೇಲೆ ಬಾಂಬ್ ಹಾಕುವುದಾಗಿ ಸಮಾಜವಾದಿ ಸೋವಿಯತ್ ರಷ್ಯಾ ನೇರ ಎಚ್ಚರಿಕೆ ನೀಡಿ ಅದನ್ನು ತಡೆದಿತ್ತು. ಆದರೆ, ಈಗ ಸಮಾಜವಾದಿ ಬಣ ಅಸ್ತಿತ್ವದಲ್ಲಿರದ ಕಾರಣ, ಅಮೆರಿಕಾ ರಾಜಾರೋಷವಾಗಿ ಇಂತಹ ಹೇಳಿಕೆ ನೀಡುತ್ತಿದೆ.

### ವಿದೇಶಿ ಆಮದಿನ ಮೇಲೆ ಅತ್ಯಧಿಕ ಶುಲ್ಕ

ಅಮೆರಿಕದ ಏಕಸ್ವಾಮ್ಯಾಧಿಪತಿಗಳಿಗೆ ಲಾಭ ಮಾಡಿಕೊಡಲು ಹಾಗೂ ವಿದೇಶಗಳೊಂದಿಗೆ ಚೌಕಾಶಿ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಟ್ರಂಪ್ ತಮ್ಮನ್ನು ನಿಯಂತ್ರಿಸುತ್ತಿರುವ ಸಾಮ್ರಾಜ್ಯಶಾಹಿ ಕುಳಗಳ ಅಣತಿ ಮೇರೆಗೆ ವಿದೇಶದಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಅತ್ಯಧಿಕ ಸುಂಕ ವಿಧಿಸಲು ಮುಂದಾಗಿದ್ದಾರೆ. ಟ್ರಂಪ್ ಪ್ರಸ್ತಾವನೆಯ ಪ್ರಕಾರ, ಚೀನಾದ ಕಬ್ಬಿಣಕ್ಕೆ ಶೇ.25ರಷ್ಟು ಸುಂಕ, ಮೆಕ್ಸಿಕನ್ ಆಟೊಗಳ ಮೇಲೆ ಶೇ.60ರಷ್ಟು ಸುಂಕ ವಿಧಿಸುವ ಮೂಲಕ ವಿದೇಶಿ ಆಮದನ್ನು ನಿಯಂತ್ರಿಸಲು ಮುಂದಾಗಿದ್ದಾರೆ. ಮತ್ತೊಂದೆಡೆ ಯೂರೋಪಿಯನ್ ಯೂನಿಯನ್‌ನೊಂದಿಗೆ ಬೆಸೆದುಕೊಂಡಿರುವ 27 ರಾಷ್ಟ್ರಗಳು ಅಮೆರಿಕದೊಂದಿಗೆ ಸೌಹಾರ್ದ ಸಂಬಂಧ ಇಟ್ಟುಕೊಳ್ಳದಿದ್ದರೆ ಇಂತಹುದೇ ಆಮದು ಶುಲ್ಕ ಹೆಚ್ಚಿಸುವುದಾಗಿ ತಾಕೀತು ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಸಂದೇಶವೊಂದನ್ನು ಪೋಸ್ಟ್ ಮಾಡಿರುವ ಡೊನಾಲ್ಡ್ ಟ್ರಂಪ್, ಅಮೆರಿಕ ಮತ್ತು ಯೂರೋಪಿಯನ್ ಯೂನಿಯನ್ ಮಧ್ಯೆ ದ್ವಿಪಕ್ಷೀಯ ವ್ಯವಹಾರ ಕುಸಿತ ಕಂಡಿದೆ ಎಂದು ಒಪ್ಪಿಕೊಂಡಿದ್ದಾರೆ. ಅಮೆರಿಕದಿಂದ ತೈಲ ಮತ್ತು ನೈಸರ್ಗಿಕ ಅನಿಲದ ಆಮದಿನ ಪ್ರಮಾಣವನ್ನು ಹೆಚ್ಚಿಸದಿದ್ದರೆ ಇತರೆ ರಾಷ್ಟ್ರಗಳಿಗೆ ಆದಂತೆಯೇ, ಅವುಗಳೂ ಸಹ ಅಮೆರಿಕಕ್ಕೆ ಕಳುಹಿಸುವ ವಸ್ತುಗಳ ಮೇಲೆ ಹೆಚ್ಚಿನ ಆಮದು ಸುಂಕ ಪಾವತಿಸಲು ತಯಾರಾಗಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕಕ್ಕೆ ಹೊರಡುವ ಒಂದು ದಿನದ ಮುಂಚೆಯೇ ಟ್ರಂಪ್, ಭಾರತದಿಂದಾಗುವ ಕಬ್ಬಿಣ ಮತ್ತು ಅಲ್ಯುಮಿನಿಯಂ ವಸ್ತುಗಳ ಆಮದಿನ ಮೇಲೆ ಶೇ.25ರಷ್ಟು ಸುಂಕ ವಿಧಿಸಿದ್ದರು. ಇಷ್ಟಾಗಿಯೂ ಮೋದಿ ಅವರು ಯಾವುದೇ ಪ್ರತಿರೋಧವನ್ನು ತೋರುವ ಗೋಜಿಗೆ ಹೋಗಲಿಲ್ಲ. ಟ್ರಂಪ್ ಎಚ್ಚರಿಕೆಯಿಂದ ಬೆದರಿದ ಭಾರತ, ಅಮೆರಿಕದಿಂದ ಆಮದಾಗುವ 1600 ಸಿಸಿ ಎಂಜಿನ್‌ನ ಬೈಕುಗಳ ಮೇಲಿನ ಸುಂಕವನ್ನು ಶೇ.50ರಿಂದ ಶೇ.30, ಅದಕ್ಕಿಂತ ಕಡಿಮೆ ಸಿಸಿ ಬೈಕುಗಳ ಮೇಲಿನ ಸುಂಕವನ್ನು ಶೇ.50ರಿಂದ ಶೇ.40ಕ್ಕೆ ಇಳಿಸಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯ ಹಾರ್ಲೆ ಡೇವಿಡ್ಸನ್ ಬೈಕುಗಳು ದೇಶಕ್ಕೆ ಬರಲು ಅನುಕೂಲವಾಗಿದೆ. ಇದಕ್ಕೂ ಮುನ್ನ ಟ್ರಂಪ್ ಭಾರತ ಬೈಕುಗಳ ಆಮದಿನ ಮೇಲೆ ವಿಧಿಸುತ್ತಿರುವ ಶೇ.50ರಷ್ಟು ಸುಂಕ ಒಪ್ಪಲಾಗದು ಎಂದು ಗುಡುಗಿದ್ದರು.

> **ಅಮೆರಿಕ ಅಧ್ಯಕ್ಷ ಟ್ರಂಪ್‌ನ ನೀತಿಗಳು ಸಾಮ್ರಾಜ್ಯಶಾಹಿಗಳ ಸಂಪತ್ತನ್ನು ಹೆಚ್ಚಿಸುತ್ತಾ, ಅವರ ಅಧಿಕಾರದಾಹವನ್ನು ತಣಿಸುತ್ತವೆ; ದೇಶ–ವಿದೇಶಗಳ ಜನ ಸಾಮಾನ್ಯರನ್ನು ಸಂಕಷ್ಟದ ಕೂಪಕ್ಕೆ ತಳ್ಳುತ್ತವೆ.**

### ನೆರವು ಸ್ಥಗಿತಗೊಳಿಸುವ ಎಚ್ಚರಿಕೆ

ಟ್ರಂಪ್ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಅಮೆರಿಕ ಇದುವರೆಗೆ ತನ್ನ ಸಾಮಾಜಿಕ ಹೊಣೆಗಾರಿಕೆಯ ಭಾಗವಾಗಿ ವಿವಿಧ ದೇಶಗಳು ಹಾಗೂ ಸಂಸ್ಥೆಗಳಿಗೆ ನೀಡುತ್ತಿದ್ದ ಉದಾರ ನೆರವನ್ನು ಸ್ಥಗಿತಗೊಳಿಸಿದೆ. ದಕ್ಷಿಣ ಆಫ್ರಿಕಾ, ಬಿಳಿಯ ರೈತರಿಗೆ ಸಂಬಂಧಿಸಿದಂತೆ ಮಾನವ ಹಕ್ಕುಗಳನ್ನು ಉಲ್ಲಂಘಿಸುತ್ತಿದೆ ಎಂದು ಅದರ ಮೇಲೆ ಆರೋಪ ಹೊರಿಸಿ ಆ ದೇಶಕ್ಕೆ ನೀಡುತ್ತಿದ್ದ ನೆರವನ್ನು ಸ್ಥಗಿತಗೊಳಿಸಿದೆ. ಮತ್ತೊಂದೆಡೆ ತನ್ನ ಮಿತ್ರರಾಷ್ಟ್ರ ಇಸ್ರೇಲ್, ಹಮಾಸ್ ಮೇಲೆ ದಾಳಿ ನಡೆಸುವ ನೆಪದಲ್ಲಿ ನಡೆಸಿದ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಸೊಲ್ಲೆತ್ತುತ್ತಿಲ್ಲ. ಇದೆಂತಹ ಇಬ್ಬಗೆಯ ನೀತಿ!

### ಪ್ಯಾರಿಸ್ ಪರಿಸರ ಒಪ್ಪಂದದಿಂದ ಹೊರಕ್ಕೆ

ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯ ವಿದ್ಯಮಾನ ಇಡೀ ಜಗತ್ತನ್ನು ತಲ್ಲಣಗೊಳಿಸಿದೆ. ಅಮೆರಿಕ ಸಹ ಈ ವಿಪತ್ತಿಗೆ ಒಳಗಾಗಿದೆ. ಇತ್ತೀಚೆಗೆ ಭಾರೀ ಪ್ರಮಾಣದ ತಾಪಮಾನ, ಮಳೆಯ ಅಭಾವ ಮತ್ತು ಒಣ ಬಿರುಗಾಳಿಗೆ ಒಳಗಾದ ಲಾಸ್ ಏಂಜೆಲಿಸ್‌ನಲ್ಲಿ ಸಂಭವಿಸಿದ ಕಾಳ್ಗಿಚ್ಚಿನಿಂದಾದ ಬೆಂಕಿಯ ಕೆನ್ನಾಲಿಗೆ ಅಲ್ಲಿನ ಬೆಟ್ಟಗಳ ಮೇಲೆ ಕಾಣಿಸಿಕೊಂಡಿತ್ತು. ಅಷ್ಟಲ್ಲದೆ, ಫ್ಲಾರಿಡಾ ಆಗಾಗ, ಚಂಡಮಾರುತಕ್ಕೆ ಬಲಿಯಾಗುತ್ತಲೇ ಇದೆ. ಇಂತಹ ಬದಲಾವಣೆಗಳನ್ನು ತಡೆಯಲೆಂದೇ ಪ್ಯಾರಿಸ್ ಹವಾಮಾನ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಇದೀಗ ಅಮೆರಿಕ ಆ ಒಪ್ಪಂದದಿಂದ ಹೊರಬರುವ ಪ್ರಕ್ರಿಯೆಯನ್ನು ಶುರು ಮಾಡಿದೆ.

### ವಿಶ್ವ ಆರೋಗ್ಯ ಸಂಸ್ಥೆಯಿಂದ ವಿಮುಖ

ಜಾಗತಿಕ ಆರೋಗ್ಯ ವ್ಯವಸ್ಥೆಯ ನಾಯಕನ ಸ್ಥಾನದಲ್ಲಿರುವ ಅಮೆರಿಕ, ವಿಶ್ವ ಆರೋಗ್ಯ ಸಂಸ್ಥೆ (ಡಬ್ಲುಎಚ್‌ಓ) ಹಾಗೂ ವಿಶ್ವಸಂಸ್ಥೆಯ ಇತರೆ ಸಂಘಟನೆಗಳಿಂದ ಹೊರಬರುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಅಮೆರಿಕದ ನೆರವು ಕಡಿತವಾಗುವ ಕಾರಣ ಮುಂದಿನ ಸಂಭವನೀಯ ಸಾಂಕ್ರಾಮಿಕವನ್ನು ಎದುರಿಸಲು ಆರೋಗ್ಯ ಸಂಸ್ಥೆಗೆ ತೀವ್ರ ಹಿನ್ನಡೆಯಾಗಲಿದೆ. 2020ರ ಮೇ ತಿಂಗಳಲ್ಲಿ ಟ್ರಂಪ್ ತಮ್ಮ ಮೊದಲ ಬಾರಿಯ ಅಧ್ಯಕ್ಷ ಪದವಿಯ ಕೊನೆಯ ಘಟ್ಟದಲ್ಲಿ, ವಿಶ್ವ ಆರೋಗ್ಯ ಸಂಸ್ಥೆಗೆ ನೀಡಬೇಕಿದ್ದ ನೆರವನ್ನು ವಾಪಸ್ ಪಡೆದು ಅಮೆರಿಕದ ಜಾಗತಿಕ ಆರೋಗ್ಯ ಸೇವಾ ವ್ಯವಸ್ಥೆಗೆ ಒದಗಿಸುವುದಾಗಿ ಘೋಷಿಸಿದ್ದರು. ಅಲ್ಲದೆ, 2020ರ ಜುಲೈ 6ರಂದು, ಅಮೆರಿಕ ವಿಶ್ವ ಆರೋಗ್ಯ ಸಂಸ್ಥೆಯ ಸದಸ್ಯತ್ವದಿಂದ ಹೊರಬರುವ ನಿರ್ಧಾರ ಮಾಡಿತ್ತು. ಅದೇ ಸಮಯದಲ್ಲಿ, ವಿಶ್ವದಲ್ಲಿ ಮತ್ತು ಅಮೆರಿಕದಲ್ಲಿ ಸಹ ಕೋವಿಡ್ ಪ್ರಕರಣ ಸಂಖ್ಯೆ ಭಾರಿ ಪ್ರಮಾಣದಲ್ಲಿ ಹೆಚ್ಚಿತ್ತು. ಹಾಗಾಗಿ, ಅಮೆರಿಕದ ವಿವಿಧ ಸಂಸ್ಥೆಗಳ 750 ನಾಯಕರ ಒತ್ತಡಕ್ಕೆ ಮಣಿದಿದ್ದ ಅಮೆರಿಕನ್ ಕಾಂಗ್ರೆಸ್ ಈ ಆದೇಶಕ್ಕೆ ತಡೆ ನೀಡಿತ್ತು.

### ಅಮೆರಿಕದ ಜನತೆಯ ಮೇಲಿನ ಪ್ರಹಾರ!

ಮಿತವ್ಯಯ ಸಾಧಿಸುವ ನಿಟ್ಟಿನಲ್ಲಿ ಅಮೆರಿಕದ ವಿವಿಧ ಇಲಾಖೆಗಳ 20 ಲಕ್ಷಕ್ಕೂ ಹೆಚ್ಚಿನ ಉದ್ಯೋಗಿಗಳನ್ನು ಮನೆಗೆ ಕಳಿಸಲಾಗಿದೆ. ಅಲ್ಲದೆ ಸ್ವಯಂ ನಿವೃತ್ತಿ ಯೋಜನೆಗಳನ್ನೂ ಉದ್ಯೋಗಿಗಳ ಮೇಲೆ ಬಲವಂತವಾಗಿ ಹೊರಿಸಲಾಗಿದೆ. ಜೊತೆಗೆ, ಗಗನಮುಖಿಯಾಗಿರುವ ಬೆಲೆ ಏರಿಕೆಗೆ ಯಾವುದೇ ಕಡಿವಾಣ ಹಾಕುತ್ತಿಲ್ಲ. ಇದರಿಂದಾಗಿ ಆಹಾರ ಪದಾರ್ಥಗಳು ಬಡ ಜನರ ಕೈಗೆಟುಕದಿದ್ದರೂ, ಅವರಿಗೆ ಈ ಹಿಂದೆ ಸಿಗುತ್ತಿದ್ದ ಪೂರಕ ಪೌಷ್ಟಿಕಾಂಶ ನೆರವು ಯೋಜನೆಗೆ ಕಡಿತ ಹಾಕಲಾಗಿದೆ. ಇದು 426 ಲಕ್ಷ ಜನರನ್ನು ಅಪೌಷ್ಟಿಕತೆಗೆ ದೂಡುತ್ತದೆ. ಇದೆಲ್ಲದರ ಜೊತೆಗೆ, ಅಮೆರಿಕದ ಆರ್ಥಿಕತೆಗೆ ಬಹುದೊಡ್ಡ ಪಾಲನ್ನು ನೀಡುತ್ತಿರುವ ಕೋಟ್ಯಂತರ ವಲಸೆ ಕಾರ್ಮಿಕರನ್ನು ಅವರ ತಾಯ್ನಾಡಿಗೆ ಮರಳಿ ಕಳಿಸುವ ಪ್ರಕ್ರಿಯೆ ಇದಾಗಲೇ ಪ್ರಾರಂಭವಾಗಿದೆ.

ಇದೆಲ್ಲವೂ ಕೇವಲ ಅಮೆರಿಕದ ವಿದ್ಯಮಾನವಲ್ಲ, ಬದಲಿಗೆ, ಫ್ಯಾಸೀವಾದಿ ಬಂಡವಾಳಶಾಹಿ, ಸಾಮ್ರಾಜ್ಯಶಾಹಿಗಳು ಜಗತ್ತಿನಾದ್ಯಂತ ತರಲು ಬಯಸುತ್ತಿರುವ ಬದಲಾವಣೆಗಳ ನೀಲಿನಕ್ಷೆ. ಆದ್ದರಿಂದ ಜಾಗತಿಕ ಸುಚಿಂತನಾಶೀಲ ಜನತೆ ಹಾಗೂ ಸಾರ್ವಜನಿಕರು ಇಂತಹ ನೀತಿಗಳ ವಿರುದ್ಧ ಪ್ರಬಲ ಹೋರಾಟ ಕಟ್ಟುವ ಮೂಲಕ ಇಂತಹ ಬೆಳವಣಿಗೆಗಳನ್ನು ಸೋಲಿಸಲು ಮುಂಬರಲು ಇದು ಸಕಾಲ.

ಮಾರ್ಚ್ 08, 2025

# ರಾಜ್ಯದಾದ್ಯಂತ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಎಐಎಂಎಸ್‌ಎಸ್ ಹಾಗೂ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ)ಗಳ ವತಿಯಿಂದ ಜಂಟಿಯಾಗಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಮುಖ್ಯ ಭಾಷಣಕಾರರಾಗಿ ಎಐಎಂಎಸ್‌ಎಸ್‌ನ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಎಂ. ಎನ್. ಮಂಜುಳಾ ಮಾತನಾಡಿದರು.




ಎಸ್‌ಜೆಎಂ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ, ಎಐಎಂಎಸ್‌ಎಸ್ ಸಹಯೋಗದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು. ಎಐಎಂಎಸ್‌ಎಸ್‌ನ ರಾಜ್ಯ ಉಪಾಧ್ಯಕ್ಷರರಾದ ಡಾ.ಸೀಮಾ ದೇಶಪಾಂಡೆ ಮುಖ್ಯ ಅತಿಥಿಗಳಾಗಿ ಮಾತನಾಡಿದರು.




ಅಂತರರಾರಾಷ್ಟ್ರೀಯ ಮಹಿಳಾ ದಿನದ ಸಭೆಯನ್ನು ಉದ್ದೇಶಿಸಿ ಎಐಎಂಎಸ್‌ಎಸ್ ಕರ್ನಾಟಕ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯರಾದ ಕಾಮ್ರೇಡ್ ರಶ್ಮಿ ಮಾತನಾಡಿದರು.







ಅಂತರರಾರಾಷ್ಟ್ರೀಯ ಮಹಿಳಾ ದಿನದ ಸಭೆಯನ್ನು ಉದ್ದೇಶಿಸಿ ಮುಖ್ಯ ಭಾಷಣಕಾರರಾಗಿ ಎಐಎಂಎಸ್‌ಎಸ್‌ನ ರಾಜ್ಯ ಕಚೇರಿ ಕಾರ್ಯದರ್ಶಿ ಕಾಮ್ರೇಡ್ ಶಾಂತ ಎ. ಮಾತನಾಡಿದರು.




ಎಐಯುಟಿಯುಸಿ ಸಂಯೋಜಿತ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ, ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘ ಹಾಗೂ ಎಐಎಂಎಸ್‌ಎಸ್ ಜಂಟಿಯಾಗಿ ರಾಜ್ಯ ಸರ್ಕಾರಿ ನೌಕರರ ಸಭಾಭವನದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಂಡಿದ್ದವು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್)ಯ ಬೆಂಗಳೂರು ಜಿಲ್ಲಾ ಸಮಿತಿಯು ನಗರದ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಯೋಜಿಸಿತ್ತು.

ಕಾರ್ಯಕ್ರಮದಲ್ಲಿ ಎಐಎಂಎಸ್‌ಎಸ್‌ನ ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ಅಲಕಾ ರಾವ್, ಮುಖ್ಯ ಅತಿಥಿಗಳಾಗಿ ಕನ್ನಡ ಪ್ರಾಧ್ಯಾಪಕರು ಹಾಗೂ ಸ್ತ್ರೀವಾದಿ ಚಿಂತಕರಾದ ಎಂ.ಎಸ್. ಆಶಾ ದೇವಿ, ಮತ್ತು ಮುಖ್ಯ ಭಾಷಣಕಾರರಾಗಿ ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಶೋಭಾ ಎಸ್. ಭಾಗವಹಿಸಿದ್ದರು.







ನಗರದ ಜಯದೇವ ವೃತ್ತದಲ್ಲಿ ಎಐಎಂಎಸ್‌ಎಸ್ ಹಾಗೂ ಎಐಯುಟಿಯುಸಿ ಜಂಟಿಯಾಗಿ ಅಂತರರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಕಾರ್ಯಕ್ರಮವನ್ನು ನಡೆಸಿದವು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರಜಾವಾಣಿಯ ಸ್ಥಾನಿಕ ಸಂಪಾದಕರಾದ ಸಿದ್ದಯ್ಯ ಹಿರೇಮಠ್ ಹಾಗೂ ಮುಖ್ಯ ಭಾಷಣಕಾರರಾಗಿ ಎಐಎಂಎಸ್‌ಎಸ್‌ನ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯರಾದ ಕಾಮ್ರೇಡ್ ಅನುರಾಧ ಪಾಲ್ಗೊಂಡಿದ್ದರು.




ಎಐಎಂಎಸ್‌ಎಸ್ ಹಾಗೂ ಎಐಯುಟಿಯುಸಿ ಸಂಘಟನೆಗಳು ಜಂಟಿಯಾಗಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ನಗರದ ಪತ್ರಿಕಾ ಭವನದಲ್ಲಿ ನಡೆಸಿದವು. ಮುಖ್ಯ ಭಾಷಣಕಾರರಾಗಿ ಎಐಎಂಎಸ್‌ಎಸ್‌ನ ರಾಜ್ಯ ಉಪಾಧ್ಯಕ್ಷರಾದ ಕಾಮ್ರೇಡ್ ಹರಿಣಿ ಮಾತನಾಡಿದರು. ಎಐಯುಟಿಯುಸಿಯ ಕಾಮ್ರೇಡ್ ಮಂಜುಳಾ ಗೋನವಾರ ಉಪಸ್ಥಿತರಿದ್ದರು.




**ಮೈಸೂರು:** ಅಂತರರಾರಾಷ್ಟ್ರೀಯ ಮಹಿಳಾ ದಿನದ ಹಿನ್ನೆಲೆಯಲ್ಲಿ ಮೈಸೂರಿನ ನಟರಾಜ ಪದವಿ ಕಾಲೇಜಿನಲ್ಲಿ 'ವಿದ್ಯಾರ್ಥಿನಿಯರ ಮಾನಸಿಕ ತುಮುಲಗಳು ಮತ್ತು ಸವಾಲುಗಳು' ಎಂಬ ವಿಷಯದ ಕುರಿತು ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

## ಸಮಾವೇಶಗಳು

ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಕೊಪ್ಪಳ ಜಿಲ್ಲಾ ಮಹಿಳಾ ಸಮಾವೇಶವನ್ನು ತಾಲೂಕು ಪಂಚಾಯಿತಿ ಆವರಣದಲ್ಲಿರುವ ಕೃಷಿ ವಿಸ್ತರಣಾ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಉದ್ದೇಶಿಸಿ ಎಐಎಂಎಸ್‌ಸ್‌ನ ಕರ್ನಾಟಕ ರಾಜ್ಯ ಕಾರ್ಯದರ್ಶಿ ಶೋಭಾ ಎಸ್. ಅವರು ಮಾತನಾಡುತ್ತಾ "ನಮ್ಮ ದೇಶದಲ್ಲಿ ಮಹಿಳೆಯರ ಪರಿಸ್ಥಿತಿ ಇಂದಿಗೂ ಬದಲಾಗಿಲ್ಲ. ಇಂದಿಗೂ ಮಹಿಳೆಯರ ಮೇಲಿನ ಅಪರಾಧಗಳು ನಿಂತಿಲ್ಲ. ಬದಲಿಗೆ ಮತ್ತಷ್ಟು ವಿಕೃತರೂಪವನ್ನು ಪಡೆದುಕೊಳ್ಳುತ್ತಿವೆ. ಅಂತರರಾಷ್ಟ್ರೀಯ ಮಹಿಳಾ ದಿನ ಎಂದರೆ ಅದು ಕೇವಲ ಸಂಭ್ರಮಾಚರಣೆಯ ದಿನವಲ್ಲ! ಮಹಿಳೆಯರ ಮೇಲಿನ ದೌರ್ಜನ್ಯದ ಕೊನೆಯ ಅಂಶವೂ ಸಹ ಉಳಿಯದಂತೆ ಪಣ ತೊಡುವ ದಿನ. ಆ ನಿಟ್ಟಿನಲ್ಲಿ ನಾವೆಲ್ಲರೂ ಸಜ್ಜಾಗಬೇಕು" ಎಂದರು. ಸಮಾವೇಶದಲ್ಲಿ 19 ಸದಸ್ಯರ ಹೊಸ ಜಿಲ್ಲಾ ಸಮಿತಿಯ ರಚನೆಯಾಯಿತು. ಎಐಎಂಎಸ್‌ಎಸ್‌ನ ರಾಜ್ಯ ಸೆಕ್ರೆಟೇರಿಯೇಟ್ ಸದ್ಯಸರಾದ ಕಾಮ್ರೇಡ್ ವಿಜಯಲಕ್ಷ್ಮಿ ಮಾತನಾಡಿದರು.




ಉತ್ತರ ಕನ್ನಡದ ಹಳಿಯಾಳ ತಾಲ್ಲೂಕು ಮಟ್ಟದಲ್ಲಿ ಮಹಿಳಾ ದಿನಾಚರಣೆಯ ಅಂಗವಾಗಿ ನಡೆದ ಮಹಿಳಾ ಸಮಾವೇಶವನ್ನು ಉದ್ದೇಶಿಸಿ ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಶೋಭಾ ಎಸ್. ಮಾತನಾಡಿದರು. ವೇದಿಕೆಯ ಮೇಲೆ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯರಾದ ಮಧುಲತಾ ಗೌಡರ್ ಮತ್ತು ರಾಜ್ಯ ಖಜಾಂಚಿ ಕಾಮ್ರೇಡ್ ಈಶ್ವರಿ ಉಪಸ್ಥಿತರಿದ್ದರು.



### ಎಐಕೆಕೆಎಂಎಸ್ ನಾಯಕತ್ವದಲ್ಲಿ

# ಭೂಮಿ–ಬೆಲೆ ಹಕ್ಕಿಗಾಗಿ ರೈತರ ಭಾರಿ ಪ್ರತಿಭಟನೆ

**ದಶಕಗಳಿಂದ ಸಾಗುವಳಿ ಮಾಡುತ್ತಿರುವ ಬಗರ್ ಹುಕುಂ ರೈತರಿಗೆ ಹಕ್ಕುಪತ್ರ ನೀಡಬೇಕು; ರೈತರು ಬೆಳೆದ ಎಲ್ಲಾ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನೀಡಬೇಕು ಮತ್ತು ಅದನ್ನು ಕಾನೂನುಬದ್ಧಗೊಳಿಸಬೇಕು ಹಾಗೂ ಸರ್ಕಾರಿ ವ್ಯಾಪಾರ ಜಾರಿಯಾಗಬೇಕು; ಗ್ರಾಮೀಣ ಜನರಿಗೆ ನರೇಗಾದಲ್ಲಿ ವರ್ಷಪೂರ್ತಿ ಉದ್ಯೋಗ ನೀಡಬೇಕು ಮತ್ತು ದಿನಕ್ಕೆ ಕನಿಷ್ಠ ರೂ.600 ವೇತನ ನೀಡಬೇಕು; ರೈತ ವಿರೋಧಿ–ಜನ ವಿರೋಧಿ ವಿದ್ಯುತ್ ಮಸೂದೆ – 2022 ವಾಪಸ್ ತೆಗೆದುಕೊಳ್ಳಬೇಕು, ಮುಂತಾದ ಹಕ್ಕೊತ್ತಾಯಗಳೊಂದಿಗೆ ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ(ಎಐಕೆಕೆಎಂಎಸ್)ಯ ನಾಯಕತ್ವದಲ್ಲಿ ಸಾವಿರಾರು ರೈತರು ಬೆಂಗಳೂರಿನಲ್ಲಿ ಭಾರಿ ಪ್ರತಿಭಟನೆಯನ್ನು ನಡೆಸಿದರು.**

ರೈತರ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರೆಡೂ ಮಾತಿಗೆ ತಪ್ಪಿವೆ. 2022ರ ಚಾರಿತ್ರಿಕ ದೆಹಲಿ ಚಳುವಳಿಯಲ್ಲಿ 750 ಕ್ಕೂ ಹೆಚ್ಚು ರೈತರು ಜೀವ ತೆತ್ತು ಜಯಗಳಿಸಿದಾಗ, ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುತ್ತೇವೆಂದು ಕೇಂದ್ರ ಬಿಜೆಪಿ ಸರ್ಕಾರ ಮಾತು ಕೊಟ್ಟಿತ್ತು. ಆದರೆ ಇಲ್ಲಿಯವರೆಗೂ ದೀರ್ಘ ಮೌನದಲ್ಲಿ ಮುಳುಗಿಹೋಗಿದೆ. ಮೂರು ಕರಾಳ ಕೃಷಿ ಕಾಯ್ದೆಗಳನ್ನು ಆಗ ವಾಪಸ್ ತೆಗೆದುಕೊಂಡು ಇದೀಗ ಈ ಮೂರು ಕಾಯ್ದೆಗಳನ್ನೇ ಹಿಂಬಾಗಿಲಿನಿಂದ ಕೃಷಿ ಮಾರುಕಟ್ಟೆ ಮಸೂದೆಯ ರೂಪದಲ್ಲಿ ಜಾರಿಗೆ ತರುತ್ತಿದೆ. ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆಂದು ಹೇಳುತ್ತಲೇ ಆದಾಯದ ಮೂಲಗಳನ್ನೆಲ್ಲಾ ಮುಚ್ಚಿ ಹಾಕುತ್ತಿದೆ. ಒಟ್ಟಾರೆಯಾಗಿ, ಎಪಿಎಂಸಿಯಲ್ಲಿ ಕಾರ್ಪೊರೇಟ್ ದೈತ್ಯರಿಗೆ ಚಿಲ್ಲರೆ ವ್ಯಾಪಾರಕ್ಕೆ ಅನುವು ಮಾಡಿ, ರೈತರನ್ನು ಬಲಿಕೊಟ್ಟು ಕಾರ್ಪೊರೇಟ್ ಕಂಪೆನಿಗಳ ಕೈಗೆ ಕೃಷಿ ಕ್ಷೇತ್ರವನ್ನು ಧಾರೆಯೆರೆಯುತ್ತಿದೆ. ಇತ್ತ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳುತ್ತೇವೆ, ರೈತರ ಹಿತವನ್ನು ಕಾಪಾಡುತ್ತೇವೆ, ನಮ್ಮದು ಪ್ರಗತಿಪರ ಸರ್ಕಾರ ಎಂದು ಬಡಾಯಿ ಕೊಚ್ಚಿಕೊಂಡ ರಾಜ್ಯ ಕಾಂಗ್ರೆಸ್ ಸರ್ಕಾರ ಮಾತಿಗೆ ತಪ್ಪಿದೆ. ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳಲಿಲ್ಲ. ಖರೀದಿ ಕೇಂದ್ರಗಳನ್ನು ಸರಿಯಾಗಿ ತೆರೆಯಲಿಲ್ಲ ಮತ್ತು ರೈತರಿಂದ ಪೂರ್ಣ ಪ್ರಮಾಣದಲ್ಲಿ ಫಸಲನ್ನು ಕೊಳ್ಳಲಿಲ್ಲ. ಬಗರ್ ಹುಕುಂ ರೈತರ ಸಮಸ್ಯೆಗೆ ಬಾಯಿಸೇವೆ ಬಿಟ್ಟರೆ ಪರಿಹಾರ ನೀಡಿಲ್ಲ. ಇದೂ ಸಹ ಬಿಜೆಪಿ ಸರ್ಕಾರದ ಅದೇ ಹಾದಿಯಲ್ಲೇ ನಡೆಯುತ್ತಿದೆ. ಇಂತಹ ಹಲವಾರು ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಒತ್ತಾಯಿಸಿ ಎಐಕೆಕೆಎಂಎಸ್ ಹೋರಾಟವನ್ನು ಸಂಘಟಿಸಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ರೈತರು ಭಾಗವಹಿಸಿದ್ದರು.

ಎಐಕೆಕೆಎಂಎಸ್, ಅಖಿಲ ಭಾರತ ಉಪಾಧ್ಯಕ್ಷರಾದ ಡಾ. ಟಿ.ಎಸ್.ಸುನೀತ್ ಕುಮಾರ್ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸರ್ಕಾರವೇ ನೇಮಿಸಿದ ಸ್ವಾಮಿನಾಥನ್ ವರದಿಯ ಪ್ರಕಾರ ಸಿ2+50% ಸೂತ್ರದಡಿ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸದೇ ರೈತರಿಗೆ ಕೇಂದ್ರ ಸರ್ಕಾರ ದ್ರೋಹ ಬಗೆದಿದೆ. ಸರ್ಕಾರಗಳ ಕಾರ್ಪೊರೇಟ್ ಕಂಪೆನಿಗಳ ಪರವಾದ, ಕೃಷಿ ವಿರೋಧಿಯಾದ ನೀತಿಗಳು ರೈತರ ಬದುಕನ್ನು ನಾಶಮಾಡುತ್ತಿವೆ. ಕೃಷಿ ಒಳಸುರಿಗಳ ವೆಚ್ಚ ವಿಪರೀತವಾಗುತ್ತಿವೆ, ಆದರೆ ರೈತರ ಬೆಳೆಗೆ ಬೆಲೆಯಿಲ್ಲ. ಇದರಿಂದಾಗಿ ಸಾಲದ ಶೂಲಕ್ಕೇರುತ್ತಿದ್ದಾರೆ ಎಂದು ಅಭಿಪ್ರಾಯಪಟ್ಟರು. ಅವರು ಮುಂದುವರೆದು, ರೈತರ ಹೋರಾಟದ ಒತ್ತಡದಿಂದ ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಂಡ ಕೇಂದ್ರ ಸರ್ಕಾರ ಈಗ ಹಿಂಬಾಗಿಲಿನಿಂದ ಅದನ್ನು ಹೊಸ ಕೃಷಿ ಮಾರುಕಟ್ಟೆ ನೀತಿಯ ಮೂಲಕ ತರುತ್ತಿದೆ. ರೈತರು ಮತ್ತು ಕೃಷಿ ಕಾರ್ಮಿಕರು ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯವಾಗದಿರುವುದಕ್ಕೆ ಕಾರಣವನ್ನು ಹುಡುಕಿಕೊಳ್ಳಬೇಕು. ಬಂಡವಾಳಿಗರ ಪರವಾದ ಈ ವ್ಯವಸ್ಥೆಯು ಇಂದಿನ ಸಮಸ್ಯೆಗಳಿಗೆ ಮೂಲ ಕಾರಣವಾಗಿದೆ. ಹಾಗಾಗಿ ಬಂಡವಾಳಿಗರ ಬೊಕ್ಕಸವನ್ನು ತುಂಬಿಸಲು ಅವರಿಗೆ ಅನುಕೂಲವಾದ ಕೃಷಿ ನೀತಿಗಳನ್ನು ತರುತ್ತಿದೆ. ಹಾಗಾಗಿ ರೈತ ಚಳುವಳಿಯು ಅಂತಿಮವಾಗಿ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧವೇ ನಡೆಯಬೇಕು. ಶೋಷಕ ವ್ಯವಸ್ಥೆಯಿಂದ ವಿಮುಕ್ತಿ ಹೊಂದಿ ಸಮಾಜವಾದಿ ಆರ್ಥಿಕ ವ್ಯವಸ್ಥೆಯಲ್ಲಿ ಮಾತ್ರ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದು. ಅದಕ್ಕಾಗಿ ರೈತರು ಮತ್ತು ಕೃಷಿ ಕಾರ್ಮಿಕರು ಸಂಘಟಿತರಾಗಿ ಕ್ರಾಂತಿಕಾರಿ ರೈತ ಚಳುವಳಿಯನ್ನು ಕಟ್ಟಬೇಕೆಂದು ಕರೆ ನೀಡಿದರು.

ಎಐಕೆಕೆಎಂಎಸ್, ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಭಗವಾನ್ ರೆಡ್ಡಿ ಮಾತನಾಡಿ, ರೈತರ ಆದಾಯ ದುಪ್ಪಟ್ಟು ಮಾಡುತ್ತೇವೆಂದು ಬಡಾಯಿ ಕೊಚ್ಚಿಕೊಂಡ ಕೇಂದ್ರ ಸರ್ಕಾರ ರೈತರು ಆದಾಯವನ್ನು ಕಳೆದುಕೊಳ್ಳುವಂತಹ ನೀತಿಗಳನ್ನು ಜಾರಿಗೊಳಿಸುತ್ತಿದೆ. ಬಡ ರೈತರ ಸಾಲ ಮನ್ನಾ ಮಾಡದ ಕೇಂದ್ರ ಸರ್ಕಾರ ಕಾರ್ಪೊರೇಟ್ ಕಂಪೆನಿಗಳ ಲಕ್ಷಾಂತರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತಿದೆ. ಗ್ರಾಮೀಣ ಜನರಿಗೆ ಉದ್ಯೋಗ ಖಾತ್ರಿಪಡಿಸುವ ನರೇಗಾ ಯೋಜನೆಗೆ ಬಜೆಟ್‌ನಲ್ಲಿ 4,000 ಕೋಟಿ ಕಡಿತ ಮಾಡಿ ಗ್ರಾಮೀಣ ಉದ್ಯೋಗವನ್ನು ಮರೀಚಿಕೆ ಮಾಡುತ್ತಿದೆ. ಸುಮಾರು 90 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರುವ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡದಿರುವುದಷ್ಟೇ ಅಲ್ಲದೆ, ಅವರನ್ನು ಒಕ್ಕಲೆಬ್ಬಿಸುವ ಪ್ರಯತ್ನ ನಡೆಯುತ್ತಿದೆ. ಜಿಂದಾಲ್‌ನಂತಹ ಕಾರ್ಪೊರೇಟ್ ಕಂಪೆನಿಗೆ ಸಾವಿರಾರು ಎಕರೆ ಜಮೀನನ್ನು ಎಕರೆಗೆ ಲಕ್ಷದಂತೆ ಕೊಡುವ ಸರ್ಕಾರ ಬಡ ರೈತರಿಗೆ ಒಂದೆರಡು ಎಕರೆ ಬಗರ್ ಹುಕುಂ ಸಾಗುವಳಿ ಭೂಮಿ ನೀಡುತ್ತಿಲ್ಲ. ಬದಲಿಗೆ ಅರಣ್ಯ ಇಲಾಖೆ ಭೂಮಿ ತಮ್ಮದೆಂದು ರೈತರ ಮೇಲೆ ದಾಳಿ ನಡೆಸುತ್ತಿದೆ. ಕಂದಾಯ ಇಲಾಖೆಯ ಮಂತ್ರಿಗಳು ಕೇವಲ ಭರವಸೆಗಳನ್ನಷ್ಟೇ ನೀಡುತ್ತಿದ್ದಾರೆ ಎಂದು ಆರೋಪಿಸಿದರು.

ಎಐಕೆಕೆಎಂಎಸ್, ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಮ್ರೇಡ್ ದೀಪಾ ಮಾತನಾಡಿ, ದೆಹಲಿ ಸಂಗ್ರಾಮದ ಸಮಯದಲ್ಲಿ ಮಾತು ಕೊಟ್ಟಂತೆ ವಿದ್ಯುತ್ ಕಾಯ್ದೆಯನ್ನು ವಾಪಸ್ ತೆಗೆದುಕೊಂಡಿಲ್ಲ. ಇಲ್ಲಿ ರೈತರು ವಿದ್ಯುತ್ ಸಂಪರ್ಕಕ್ಕೆ ಎರಡರಿಂದ ಮೂರು ಲಕ್ಷ ಹಣ ಖರ್ಚು ಮಾಡಬೇಕು. ಜೊತೆಗೆ ವಿದ್ಯುತ್ ಖಾಸಗೀಕರಣದಿಂದ ರೈತರ ಬೋರ್‌ವೆಲ್‌ಗಳಿಗೆ ಮೀಟರ್ ಅಳವಡಿಸಿದರೆ ರೈತರು ನಿರ್ಗತಿಕರಾಗಬೇಕಾಗುತ್ತದೆ ಎಂದು ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಎಐಕೆಕೆಎಂಎಸ್, ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಎಂ.ಶಶಿಧರ್ ಮಾತನಾಡಿ, ರೈತರ ಸಮಸ್ಯೆಗಳು ದಿನೇ ದಿನೇ ತೀವ್ರವಾಗುತ್ತಿವೆ, ಆಳುವ ಸರ್ಕಾರಗಳು ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಾ ರೈತರ ಹಿತವನ್ನು ಬಲಿ ಕೊಡುತ್ತಿವೆ. ಹಿಂದೆ ಸೋವಿಯತ್ ಒಕ್ಕೂಟದಲ್ಲಿ ಇದ್ದ ಸಮಾಜವಾದಿ ಕೃಷಿಯು ಬಡ, ಮಧ್ಯಮ ರೈತರ ಆದಾಯವನ್ನು ನಿರಂತರವಾಗಿ ಹೆಚ್ಚಿಸುತ್ತಾ ಸುಸ್ಥಿರ ಬದುಕನ್ನು ನೀಡಿತ್ತು. ಅಂತಹ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ತರುವುದೊಂದೇ ನಮ್ಮ ಮುಂದಿರುವ ಪರಿಹಾರದ ದಾರಿ ಎಂದು ಹೇಳಿದರು.

ಪ್ರತಿಭಟನಾ ಸಭೆಯಲ್ಲಿ ಬಗರ್ ಹುಕುಂ ಸಮಸ್ಯೆಯನ್ನು ಬಗೆಹರಿಸಬೇಕು, ನರೇಗಾ ಯೋಜನೆಯಲ್ಲಿ ವರ್ಷಕ್ಕೆ 200 ದಿನಗಳ ಉದ್ಯೋಗ ಮತ್ತು ದಿನಕ್ಕೆ ರೂ.600 ಕೂಲಿ ನೀಡಬೇಕು, ಎಲ್ಲಾ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು ಹಾಗೂ ವಿದ್ಯುತ್ ಕಾಯ್ದೆಯನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಮುಖ್ಯಮಂತ್ರಿಗಳ ರಾಜಕೀಯ ಸಲಹೆಗಾರರಾದ ಶ್ರೀಯುತ ಬಿ.ಆರ್.ಪಾಟೀಲರು ಮನವಿಯನ್ನು ಸ್ವೀಕರಿಸಿ, ರೈತರು ವಿದ್ಯುತ್ ಬಿಲ್ ಕಟ್ಟುವ ಪರಿಸ್ಥಿತಿ ಬರುವುದಿಲ್ಲ ಎಂದು ಭರವಸೆ ನೀಡಿ, ಬಗರ್ ಹುಕುಂ ಸಾಗುವಳಿದಾರರಿಗೆ ಭೂಮಿ ಕೊಡಬೇಕು, 60 ವರ್ಷ ದಾಟಿದ ರೈತರಿಗೆ ಪಿಂಚಣಿ ಬೇಕೆನ್ನುವುದು ನ್ಯಾಯವಾದ ಬೇಡಿಕೆಯಾಗಿದೆ. ಇವುಗಳ ಬಗ್ಗೆ ಮತ್ತು ಇನ್ನಿತರ ಸಮಸ್ಯೆಗಳನ್ನು ಬಗೆಹರಿಸುವಂತೆ ಸರ್ಕಾರದ ಜೊತೆ ಮಾತನಾಡುತ್ತೇನೆಂದು ತಿಳಿಸಿದರು. ಅರಣ್ಯ ಇಲಾಖೆಯ ಅಧಿಕಾರಿಗಳು ಭೇಟಿ ಕೊಟ್ಟು ಸಮಸ್ಯೆಗಳನ್ನು ಆಲಿಸಿ, ಬಗೆಹರಿಸುವುದಾಗಿ ಹೇಳಿದರು.



ಎಐಕೆಕೆಎಂಎಸ್‌ನ ರಾಜ್ಯಾಧ್ಯಕ್ಷರಾದ ಕಾಮ್ರೇಡ್ ಎಂ. ಶಶಿಧರ್ ಅವರು ಮಾತನಾಡುತ್ತಿರುವುದು


ವಿವಿಧ ಜಿಲ್ಲೆಗಳಿಂದ ಆಗಮಿಸಿರುವ ರೈತ–ಕೃಷಿಕಾರ್ಮಿಕರು

## ಪಶ್ಚಿಮ ಬಂಗಾಳ: ವಿದ್ಯಾರ್ಥಿಗಳ ಮೇಲಿನ ಕ್ರೂರ ದಾಳಿಯನ್ನು ವಿರೋಧಿಸಿ ಎಐಡಿಎಸ್‌ಓ ಪ್ರತಿಭಟನೆ

ಪಶ್ಚಿಮ ಬಂಗಾಳದ ಜಾಧವಪುರ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆ ನಡೆಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪಶ್ಚಿಮ ಬಂಗಾಳ ಸರ್ಕಾರ ನಡೆಸಿದ ಕ್ರೂರ ದಾಳಿಯನ್ನು ವಿರೋಧಿಸಿ ಮಾರ್ಚ್ 6, 2025 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಲ್ಯಾಣ್ ಅವರು ಮಾತನಾಡಿ, ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಚುನಾವಣೆ ನಡೆಸಲು ಆಗ್ರಹಿಸಿ ನ್ಯಾಯಯುತ ಹೋರಾಟ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಶಿಕ್ಷಣ ಮಂತ್ರಿಗಳ ಸುರಕ್ಷಾ ವಾಹನ ಹಾಯಿಸಿದನ್ನು ವಿರೋಧಿಸಿ ಪಶ್ಚಿಮ ಬಂಗಾಳದಲ್ಲಿ ಹೋರಾಟ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲೆ ಪಶ್ಚಿಮ ಬಂಗಾಳದ ಆಡಳಿತ ಪಕ್ಷ ಟಿಎಂಸಿಯ ವಿದ್ಯಾರ್ಥಿ ಸಂಘಟನೆಯ ಗುಂಡಾಗಳು ಹಲ್ಲೆ ನಡೆಸಿದ್ದಾರೆ. ವಿದ್ಯಾರ್ಥಿನಿಯರ ಜೊತೆ ಕೆಟ್ಟದಾಗಿ ವರ್ತಿಸುವುದು ಅಷ್ಟೇ ಅಲ್ಲದೆ ತುಂಬಾ ಕೆಟ್ಟದಾಗಿ ಹಲ್ಲೆ ಕೂಡ ನಡೆಸಿದ್ದಾರೆ. ಆ ಸಂದರ್ಭದಲ್ಲಿ ಪೊಲೀಸರು ಇದ್ದರೂ ಯಾವುದೇ ಕ್ರಮ ಕೈಗೊಳ್ಳದೆ ಅವರೂ ಇದರಲ್ಲಿ ಭಾಗಿಯಾಗಿದ್ದಾರೆ. ಇದು ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುತ್ತಿರುವ ಕಗ್ಗೊಲೆ. ಈ ಕುರಿತು ತಕ್ಷಣವೇ ತನಿಖೆ ನಡೆಸಿ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಆಗ್ರಹಿಸುತ್ತೇವೆ ಎಂದು ಹೇಳಿದರು.

ಇನ್ನೋರ್ವ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿನಯಚಂದ್ರ ಪ್ರತಿಭಟನೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ರಾಜ್ಯ ಖಜಾಂಚಿಗಳಾದ ಸುಭಾಷ್ ಬೆಟ್ಟದಕೊಪ್ಪ, ರಾಜ್ಯ ಉಪಾಧ್ಯಕ್ಷರಾದ ಹಣಮಂತು, ಅಭಯಾ ದಿವಾಕರ್, ಅಪೂರ್ವ ಸಿ.ಎಂ., ಚಂದ್ರಕಲಾ, ಕಚೇರಿ ಕಾರ್ಯದರ್ಶಿ ಮಹಾಂತೇಶ ಬೀಳೂರ ಸೇರಿದಂತೆ ರಾಜ್ಯ ಸಮಿತಿ ಸದಸ್ಯರು ಹಾಗೂ ಅನೇಕ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



# ಮೋದಿ-ಟ್ರಂಪ್, ಮೋದಿ-ಮಸ್ಕ್ ಭೇಟಿ - ನಡೆದದ್ದೇನು?

ಅನೇಕ ಮಾಧ್ಯಮಗಳು ಮೋದಿ ಹಾಗೂ ಟ್ರಂಪ್ ಬಾಂಧವ್ಯವನ್ನು 'ಬ್ರೊಮ್ಯಾನ್ಸ್' ಎಂದು ಹೇಳಲಾರಂಭಿಸಿದ್ದಾರೆ! ಇತ್ತೀಚೆಗೆ ವಾಷಿಂಗ್ಟನ್‌ನಲ್ಲಿ ಇಬ್ಬರೂ ಅನ್ಯೋನ್ಯವಾಗಿ ಇದ್ದದ್ದೇನು! ಸಾರ್ವಜನಿಕವಾಗಿ ಪ್ರೀತಿ ವ್ಯಕ್ತಪಡಿಸಿಕೊಂಡಿದ್ದೇನು! ಟ್ರಂಪ್ ಮೋದಿಯನ್ನು 'ಮಹಾನ್ ನಾಯಕ' ಎಂದು ಕರೆದರೆ ಮೋದಿ ಟ್ರಂಪ್‌ರನ್ನು 'ಗೆಳೆಯಾ' ಎಂದು ಕರೆದರು! ಮೋದಿ ಮಾಧ್ಯಮಗಳಿಗೆ, "ರಾಷ್ಟ್ರೀಯ ಹಿತಾಸಕ್ತಿಯನ್ನು ಸರ್ವೋಚ್ಛವಾಗಿಡುವ ಟ್ರಂಪ್‌ರವರ ಧೋರಣೆ ಪ್ರಶಂಸನೀಯ ಹಾಗೂ ನಾನೂ ಅದರಿಂದ ಕಲಿತಿದ್ದೇನೆ. ನಾನೂ ಕೂಡ ರಾಷ್ಟ್ರೀಯ ಹಿತಾಸಕ್ತಿಯನ್ನು ಅತ್ಯುನ್ನತ ಸ್ತರದಲ್ಲಿಡುತ್ತೇನೆ" ಎಂದು ತನ್ನ ಹಾಗೂ ತನ್ನಣ್ಣ ಟ್ರಂಪ್‌ನೊಂದಿಗಿನ ಸಾಮ್ಯತೆಯನ್ನು ಹೊಗಳಿಕೊಂಡಾಯ್ತು. ಆದರೆ ಇದೇ ಸಂದರ್ಭದಲ್ಲಿ ಈ ಇಬ್ಬರೂ ಬಹಳ ಜಾಗರೂಕತೆಯಿಂದ ಪ್ರಮುಖ ಪ್ರಶ್ನೆಗಳ ವಿಷಯದ ಚರ್ಚೆಗಳಿಂದ ಜಾರಿಕೊಂಡಿದ್ದೂ ನಿಜ.

ಭಾರತದ ವಿರುದ್ಧ ಟ್ರಂಪ್ ತಾಳಬಹುದು ಎಂಬ ಆರ್ಥಿಕ ನಿಲುವುಗಳನ್ನೆಲ್ಲಾ ಮೊಟಕುಗೊಳಿಸುವ ಆತ್ಮವಿಶ್ವಾಸದಿಂದ ಪ್ರಧಾನಿ ಮೋದಿಯವರು ಅಮೆರಿಕಾಕ್ಕೆ ಆಗಮಿಸಿದರಾದರೂ, ಅವರ ಎಲ್ಲಾ ಅಪೇಕ್ಷೆಗಳು ಹುಸಿಯಾದವು! ವಿದೇಶಿ ವಸ್ತುಗಳ ಮೇಲಿನ ಹೆಚ್ಚಿನ ಸುಂಕದ ದರಕ್ಕಾಗಿ ಭಾರತವನ್ನು ಟ್ರಂಪ್ ದೀರ್ಘಕಾಲದಿಂದಲೂ ಟೀಕಿಸಿದ್ದಾರೆ, ಪ್ರಧಾನಿ ಮೋದಿಯವರನ್ನು "ಸುಂಕಗಳ ರಾಜ" ಎಂದು ಕರೆದಿದ್ದೂ ಹೌದು. ಅನುಗುಣವಾಗಿ, ಆರ್ಥಿಕ–ಬಕ್ಲಿಂಗ್ ಸುಂಕಗಳನ್ನು ಸಡಿಲಿಸಲು ಟ್ರಂಪ್ ಈ ಬಾರಿ ಒಪ್ಪಿಲ್ಲ. ಬದಲಿಗೆ, ಅವರು ಹೆಚ್ಚಿನ ಸುಂಕದ ಬೆದರಿಕೆಯನ್ನು ಚೌಕಾಶಿ ಸಾಧನವಾಗಿ ಬಳಸಿ ಆ ಮೂಲಕ ಭಾರತವು ಅಮೆರಿಕಾದ ಸರಕುಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸುವಂತೆ ಮತ್ತು ತಮ್ಮ ಮಾರುಕಟ್ಟೆಯನ್ನು ತೆರೆಯುವಂತೆ ಒತ್ತಾಯಿಸಿದರು. "ನಾವು ಪರಸ್ಪರ ನೀತಿ ಅನುಸರಿಸಲಿದ್ದೇವೆ. ನೀವು ಶುಲ್ಕ ವಿಧಿಸಿದಷ್ಟು ನಾನೂ ಶುಲ್ಕ ವಿಧಿಸುತ್ತಿದ್ದೇನೆ" ಎಂದು ಹೇಳಿ ತಮ್ಮ ಈ ಮಾತಿಗೆ ಸೊಲ್ಲೆತ್ತದಂತೆ ಮೋದಿಯವರ ಬಾಯಿ ಕಟ್ಟಿದರು. ತನ್ನನ್ನೇ "ವಿಶ್ವಗುರು" ಎಂದು ಕರೆದುಕೊಳ್ಳುವ ಹಾಗೂ ಭಾರತದ ಜಯಭೇರಿ ಜಗತ್ತಿನಾದ್ಯಂತ ಬಾರಿಸಲಾಗುತ್ತಿದೆ ಎಂದು ಹೇಳಿಕೊಳ್ಳುವ ಮೋದಿಯವರಿಗೆ, ಟ್ರಂಪ್‌ನೊಂದಿಗೆ ತಮಗೆ ನಿಕಟ ಸಂಬಂಧವಿರುವುದನ್ನು ಪ್ರದರ್ಶಿಸಿಕೊಳ್ಳುವ ಸರ್ವ ಪ್ರಯತ್ನವೂ ಈ ಬಾರಿ ವಿಫಲವಾಯಿತು. ಈ ಓಲೈಕೆಗ್ಯಾವುದಕ್ಕೂ ಕಿವಿಗೊಡದೆ ಟ್ರಂಪ್ ತಮಗೆ ಬೇಕಾದ್ದನ್ನು ಗಿಟ್ಟಿಸಿಕೊಂಡರು.

### ಭಾರತದಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ಅಮೆರಿಕಾದಿಂದ $ 21 ಮಿಲಿಯನ್ ನೆರವು!

ಡೊನಾಲ್ಡ್ ಟ್ರಂಪ್ ಸ್ಥಾಪಿಸಿದ್ದ ಹಾಗೂ ಈಗ ಜಗತ್ತಿನ ಅತ್ಯಂತ ಶ್ರೀಮಂತ ಎಲಾನ್ ಮಸ್ಕ್‌ನ ನಿಯಂತ್ರಣದಲ್ಲಿರುವ ಅಮೆರಿಕಾದ ಡಿಪಾರ್ಟ್‌ಮೆಂಟ್ ಆಫ್ ಗವರ್ನಮೆಂಟ್ ಎಫಿಷಿಯೆನ್ಸಿ (ಡಿಓಜಿಇ) ಹಾಗೂ ವಾಷಿಂಗ್ಟನ್‌ನ 'ಕಾಸ್ಟ್ ಕಟ್ಟಿಂಗ್' ಏಜೆನ್ಸಿಯು ಇತ್ತೀಚೆಗೆ ಹೊಸ ಸತ್ಯವೊಂದನ್ನು ಹೊರಹಾಕಿದೆ. ಯುನೈಟೆಡ್ ಸ್ಟೇಟ್ಸ್ ಏಜೆನ್ಸಿ ಫಾರ್ ಇಂಟರ್‌ನ್ಯಾಷನಲ್ ಡೆವೆಲಪ್‌ಮೆಂಟ್(ಯುಎಸ್‌ಎಐಡಿ) ಸಂಸ್ಥೆಯು ಭಾರತದಲ್ಲಿ ಮತದಾನ ಹೆಚ್ಚಿಸಲು 21 ಮಿಲಿಯನ್ ಡಾಲರ್ (182 ಕೋಟಿ) ಗಳನ್ನು ದೇಣಿಗೆ ರೂಪದಲ್ಲಿ ನೀಡಿದೆ ಎಂದು. ಈ ಸತ್ಯ ಹೊರಬಿದ್ದಿರುವುದು ಪ್ರಧಾನಿ ಮೋದಿ ಮತ್ತು ಸಾಮ್ರಾಜ್ಯಶಾಹಿ ಭಾರತದ ಒಡೆಯರಿಗೆ ಮುಜುಗರ ತಂದಿದೆ. ಅಂದರೆ ಭಾರತೀಯ ಮತದಾರರು ಚುನಾವಣಾ ಪ್ರಕ್ರಿಯೆಯತ್ತ ನಿರಾಸಕ್ತಿ ತೋರಿದ್ದಾರೆ. ಆದ್ದರಿಂದ ಅವರ ಹಕ್ಕು ಚಲಾಯಿಸಲು ಅವರನ್ನು "ಪ್ರೋತ್ಸಾಹಿಸಲು" ಅಮೆರಿಕಾದ 'ಸಹಾಯ'ವನ್ನು ಬಳಸಿಕೊಳ್ಳಲಾಗಿದೆ ಎಂಬ ತೀರ್ಮಾನಕ್ಕೆ ನಾವು ಬರಬೇಕೆ? ಹಾಗಾದರೆ ಈ "ಪ್ರೋತ್ಸಾಹ" ಯಾವ ರೂಪದಲ್ಲಿತ್ತು? ಹಣ, ಹೆಂಡದ ಆಮಿಷದ ರೂಪದಲ್ಲಿಯೇ? ಬಿಜೆಪಿಯ ನಾಯಕ ಮತ್ತು ಪಕ್ಷದ ಐಟಿ ಉಸ್ತುವಾರಿ ಅಮಿತ್ ಮಾಳವೀಯ ಈ ಸತ್ಯ ಸೃಷ್ಟಿಸಬಲ್ಲ ಅಪಾಯವನ್ನು ಗ್ರಹಿಸಿ ಹಾನಿ ನಿಯಂತ್ರಣ ಕಸರತ್ತಿಗೆ ತೊಡಗಿದರು. "ಇದರಿಂದ ಯಾರಿಗೆ ಲಾಭ? ಖಚಿತವಾಗಿ ಆಡಳಿತ ಪಕ್ಷಕ್ಕೆ (ಬಿಜೆಪಿ) ಅಲ್ಲ!" ಎಂದರು. ಇದನ್ನು "ಭಾರತದ ಚುನಾವಣಾ ಪ್ರಕ್ರಿಯೆಯಲ್ಲಿ ಬಾಹ್ಯ ಹಸ್ತಕ್ಷೇಪ" ಎಂದು ಆಪಾದಿಸಿದರು. ತಪ್ಪನ್ನೆಲ್ಲಾ ಕಾಂಗ್ರೆಸ್ ತಲೆಗೆ ಕಟ್ಟಿ ತಾವಿನ್ನೂ ಬರೀ 11 ವರ್ಷಗಳಿಂದ ಅಧಿಕಾರದಲ್ಲಿದ್ದೇವೆ ಎಂಬುದನ್ನು ನೆನಪಿಸಿದರು. ತನ್ನನ್ನು ತಾನೇ ಕ್ಷಮಿಕೊಳ್ಳುವವನು ತನ್ನನ್ನು ತಾನೇ ಆರೋಪಿಯೆಂದು ಕರೆದುಕೊಳ್ಳುತ್ತಾನೆ!

ಆದರೆ ಕಳೆದ ಫೆಬ್ರವರಿ 16 ರಂದು ಅಮೆರಿಕಾದ ಸಂಸ್ಥೆಯೊಂದು ಅವರ ದೇಶದ ಜನರ ತೆರಿಗೆ ಹಣ ಎಲ್ಲಿ 'ಪೋಲಾಗುತ್ತಿದೆ' ಎಂಬ ಪಟ್ಟಿಯನ್ನು ಬಹಿರಂಗಪಡಿಸಿತು. ಭಾರತದ ಮತದಾನ ಪ್ರೋತ್ಸಾಹಕ್ಕೆ ನೀಡುತ್ತಿದ್ದ ಹಣವೂ ಈ ಪಟ್ಟಿಯಲ್ಲಿತ್ತು. ಹಾಗೂ ಇದೆಲ್ಲವನ್ನು ಆ ಸರ್ಕಾರ ಹಿಂಪಡೆಯಿತು. ಅಧ್ಯಕ್ಷ ಟ್ರಂಪ್ ಈ ಕ್ರಮವನ್ನು ಸಮರ್ಥಿಸಿಕೊಂಡು ಈ ಪ್ರಶ್ನೆ ಎತ್ತಿದರು: "ನಾವು ಭಾರತಕ್ಕೆ 21 ಮಿಲಿಯನ್ ಡಾಲರ್‌ಗಳನ್ನು ಏಕೆ ನೀಡುತ್ತಿದ್ದೇವೆ? ಅವರು ನಮಗಿಂತಲೂ ಹೆಚ್ಚು ಹಣವನ್ನು ಹೊಂದಿದ್ದಾರೆ. ಭಾರತ ವಿಶ್ವದ ಅತಿ ಹೆಚ್ಚು ತೆರಿಗೆ ವಿಧಿಸುವ ದೇಶಗಳಲ್ಲಿ ಒಂದಾಗಿದೆ; ನಾವು ಅವರ ಮಾರುಕಟ್ಟೆ ಪ್ರವೇಶಿಸಲಾರದಷ್ಟು ಅವರ ಸುಂಕಗಳು ದುಬಾರಿಯಾಗಿವೆ. ನನಗೆ ಭಾರತ ಮತ್ತು ಅವರ ಪ್ರಧಾನ ಮಂತ್ರಿಯ ಬಗ್ಗೆ ಸಾಕಷ್ಟು ಗೌರವವಿದೆ, ಆದರೆ ಅದಕ್ಕೆ ಮತದಾರರ ಪ್ರೋತ್ಸಾಹಕ್ಕೆ $21 ಮಿಲಿಯನ್ ನೀಡುವುದೆ?" ಎಂದರು!

ಆದಾಗ್ಯೂ, ಈ 21 ಮಿಲಿಯನ್ ಡಾಲರ್ ಅಮೆರಿಕಾದ ನೆರವಿನ ಸುದ್ದಿ ಹೊರಬೀಳುತ್ತಲೇ ಭಾರತದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಪರಸ್ಪರ ಕೆಸರೆರಚಾಟ ಪ್ರಾರಂಭವಾಯಿತು. ಬಿಜೆಪಿಯ ಸ್ಮೃತಿ ಇರಾನಿ ಅವರು 4 ವರ್ಷಗಳ ಕಾಲ ಭಾರತಕ್ಕೆ ಯು.ಎಸ್.ಎ.ಐ.ಡಿನ "ಗುಡ್ ವಿಲ್ ರಾಯಭಾರಿ" ಆಗಿ ಸೇವೆ ಸಲ್ಲಿಸಿದ್ದು, ಬಿಜೆಪಿ ಸರ್ಕಾರದ ಸಚಿವರು ಸಹ ಯು.ಎಸ್.ಎ.ಐ.ಡಿ ಅಧಿಕಾರಿಗಳೊಂದಿಗೆ ನಿರಂತರವಾಗಿ ಮಾತುಕತೆ ನಡೆಸುತ್ತಿದ್ದುದು ಹಾಗೂ ಸರ್ಕಾರದ ವಿವಿಧ ಯೋಜನೆಗಳಿಗೆ, ಒಪ್ಪಂದಗಳಿಗೆ ಸಹಿ ಹಾಕಿರುವುದು ವರದಿಯಾಯಿತು. ಮಾರ್ಚ್ 21, 2023 ರಂದು, ಮಾಜಿ ಯು.ಎಸ್.ಎ.ಐ.ಡಿ ನಿರ್ವಾಹಕ ಮತ್ತು ರಾಕ್‌ಫೆಲ್ಲರ್ ಫೌಂಡೇಶನ್‌ನ ಪ್ರಸ್ತುತ ಅಧ್ಯಕ್ಷರಾದ ರಾಜೀವ್ ಶಾ ಅವರನ್ನು ಪ್ರಧಾನಿ ಮೋದಿ ಭೇಟಿಯಾದರು ಎಂಬ ಆರೋಪ ಹೊರಬೀಳುತ್ತಿದ್ದಂತೆ ಅತ್ತ ಟ್ರಂಪ್ ಅವರು ಅಮೆರಿಕಾದ ಗವರ್ನರ್‌ಗಳನ್ನು ಉದ್ದೇಶಿಸಿ "ಭಾರತದಲ್ಲಿರುವ ನನ್ನ ಸ್ನೇಹಿತ ಪ್ರಧಾನಿ ಮೋದಿಗೆ 21 ಮಿಲಿಯನ್ ಡಾಲರ್ ಹೋಗುತ್ತಿದೆ" ಎಂದು ಹೇಳಿದ್ದು ಮತ್ತೊಮ್ಮೆ ಬಿಜೆಪಿಯನ್ನು ಮುಜುಗರಕ್ಕೆ ಸಿಕ್ಕಿ ಹಾಕಿಸಿತು.

**ತನ್ನ ಆರ್ಥಿಕ ಸಂಕಷ್ಟದಿಂದ ಪಾರಾಗಲು ವಿಶ್ವದ ದೊಡ್ಡಣ್ಣ ಎಲ್ಲಾ ರೀತಿಯ ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ–ಕಾರ್ಯತಂತ್ರಗಳನ್ನು ಬಳಸುತ್ತಿದೆ. ಭಾರತ ಸೇರಿದಂತೆ ಎಲ್ಲಾ ದೇಶಗಳಿಂದಲೂ ಸಾಧ್ಯವಾದಷ್ಟು ವ್ಯಾಪಾರ–ವಹಿವಾಟು ಬಾಚಿಕೊಳ್ಳಲು ಹರಸಾಹಸ ನಡೆಸುತ್ತಿದೆ. ಭಾರತೀಯ ಅಕ್ರಮ ವಲಸಿಗರನ್ನು ಕೋಳತೊಡಿಸಿ ಕಳುಹಿಸಿದ್ದಲ್ಲದೇ ಎಚ್.ಒನ್.ಬಿ ವೀಸಾ ಮೇಲಿನ ನಿಯಂತ್ರಣವನ್ನು ಹೇರುತ್ತಲೇ ಬೆದರಿಕೆಯೊಡ್ಡುತ್ತಾ ಭಾರತ ಸೇರಿದಂತೆ ಎಲ್ಲಾ ದೇಶಗಳ ಮೇಲೆ ತನ್ನ ಹತೋಟಿ ಸಾಧಿಸುತ್ತಿದೆ.**

### ಒತ್ತಡಕ್ಕೆ ಮಣಿದು ಅಮೆರಿಕದ ಆಮದುಗಳ ಮೇಲಿನ ಸುಂಕಗಳ ಕಡಿತ

ಅಮೆರಿಕದ ಬೆದರಿಕೆಗೆ ಮಣಿದು ಬಿಜೆಪಿ ಸರ್ಕಾರ ಆತುರಾತುರವಾಗಿ ಅಮೆರಿಕದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲಿನ ಸುಂಕವನ್ನು ಕಡಿತಗೊಳಿಸಿತು. ಬೋರ್ಬನ್ ವಿಸ್ಕಿಯ ಮೇಲಿನ ಸುಂಕವನ್ನು 150% ರಿಂದ 100% ಕ್ಕೆ, ಮೋಟರ್ ಸೈಕಲ್‌ಗಳ ಸುಂಕ 50% ರಿಂದ 30% ಕ್ಕೆ, ಸ್ಟೇಷನ್–ವ್ಯಾಗನ್‌ಗಳು ಮತ್ತು ರೇಸ್ ಕಾರ್‌ಗಳದ್ದು 125% ರಿಂದ 70% ಕ್ಕೆ ಕಡಿತಗೊಳಿಸಲಾಯಿತು. "ಪ್ರಧಾನಿ ಮೋದಿ ಇತ್ತೀಚೆಗೆ ಅಮೆರಿಕಾದ ಸರಕುಗಳಿಗೆ ತಡೆ ಹೇರುತ್ತಿದ್ದ ಭಾರತದ ಭಾರಿ ಸುಂಕಗಳನ್ನು ಕಡಿತಗೊಳಿಸಿರುವುದನ್ನು ಘೋಷಿಸಿದ್ದಾರೆ." "ಭಾರತಕ್ಕೆ ತೈಲ ಮತ್ತು ಅನಿಲದ ಪ್ರಮುಖ ಪೂರೈಕೆದಾರರಾಗಿ ಅಮೆರಿಕಾವನ್ನು ಮರುಸ್ಥಾಪಿಸಲು ಪ್ರಧಾನ ಮಂತ್ರಿ ಮತ್ತು ನಾನು ಇಂಧನದ ಮಹತ್ವದ ಒಪ್ಪಂದಕ್ಕೂ ಒಪ್ಪಿಗೆ ಸೂಚಿಸಿದ್ದೇವೆ. ನಾವು ಭಾರತದ ಅದ್ವಿತೀಯ ಪೂರೈಕೆದಾರರಾಗಲಿದ್ದೇವೆ" ಎಂದು ಟ್ರಂಪ್ ತಮ್ಮ ಉದ್ದೇಶ ಸಾಧಿಸಿಕೊಂಡಿದ್ದಾರೆ! ಇದು ಟ್ರಂಪ್‌ರವರ 'ಟಿಟ್ ಫಾರ್ ಟ್ಯಾಟ್' ತಂತ್ರ! ಹೀಗೆ ಕಚ್ಚಾ ತೈಲವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳುತ್ತಿದ್ದ ಭಾರತದ ಮೇಲೆ ಈಗ ಒತ್ತಡ ಹೇರಿ ರಷ್ಯಾದಿಂದ ದೂರ ಸರಿಯುವಂತೆ ಮತ್ತು ತನ್ನ ಅವಶ್ಯಕತೆಗೆ ಅಮೆರಿಕಾದ ಮೇಲೆಯೇ ಅವಲಂಬಿತವಾಗುವಂತೆ ಭಾರತವನ್ನು ತನ್ನ ಅಧೀನಕ್ಕೆ ತಂದುಕೊಳ್ಳುವಲ್ಲಿ ಟ್ರಂಪ್ ಯಶಸ್ವಿಯಾಗುತ್ತಿದ್ದಾರೆ.

2024ರ ಹೊತ್ತಿಗೆ, ಅಮೆರಿಕಾ ಸರ್ಕಾರದ ಅಂಕಿಅಂಶಗಳ ಪ್ರಕಾರ, ಎರಡೂ ದೇಶಗಳ ನಡುವಿನ ಒಟ್ಟು ವ್ಯಾಪಾರ ಅಂದಾಜು 129.2 ಬಿಲಿಯನ್ ಡಾಲರ್‌ಗಳು. ಪ್ರಸ್ತುತ ಭಾರತವು ಅಮೆರಿಕಾಗೆ 87.4 ಬಿಲಿಯನ್ ಡಾಲರ್ ಮೌಲ್ಯದ ಸರಕುಗಳನ್ನು ರಫ್ತು ಮಾಡುತ್ತಿದೆ. ಅಂದರೆ ಭಾರತದೊಂದಿಗೆ 45 ಬಿಲಿಯನ್ ಡಾಲರ್‌ನಷ್ಟು ವ್ಯಾಪಾರ ಕೊರತೆ ಅಮೆರಿಕಾ ಅನುಭವಿಸುತ್ತಿದೆ. ಹಿಂದೆ ಸುದ್ದಿಗೋಷ್ಠಿಯಲ್ಲೊಮ್ಮೆ ಟ್ರಂಪ್ ಭಾರತದೊಂದಿಗೆ 100 ಬಿಲಿಯನ್ ಡಾಲರ್ ವ್ಯಾಪಾರ ಕೊರತೆಯನ್ನು ಅಮೆರಿಕಾ ಅನುಭವಿಸುತ್ತಿದೆ ಎಂದು ದೂರಿದ್ದರು. ಟ್ರಂಪ್ ಹೇಳುವಷ್ಟು ಮೊತ್ತದ ದುಡ್ಡಲ್ಲವೆಂದರೂ ಆ ವರ್ಷ ವಾಸ್ತವದಲ್ಲಿ 50 ಬಿಲಿಯನ್ ಡಾಲರ್‌ನಷ್ಟು ವ್ಯಾಪಾರ ಕೊರತೆ ಇತ್ತು. ಈಗ ಟ್ರಂಪ್ ಈ ವ್ಯಾಪಾರ ಕೊರತೆಯನ್ನು ನೀಗಿಸಲು ಅಮೆರಿಕಾದಿಂದ ಭಾರತಕ್ಕೆ ಬರುವ ಸರಕುಗಳನ್ನು ಹೆಚ್ಚಿಸುವಂತೆ, ಅಂದರೆ ಅಮೆರಿಕಾದ ಸರಕುಗಳ ರಫ್ತು ಹೆಚ್ಚಿಸುವಲ್ಲಿ ಮುಂದಾಗುತ್ತಿದ್ದಾರೆ. ಇದೇ ಸಮಯದಲ್ಲಿ ಮೋದಿ, ಟ್ರಂಪ್‌ನೊಂದಿಗಿನ ಸ್ನೇಹ ಸಂಬಂಧ ವೃದ್ಧಿಸಲು ಅಮೆರಿಕಾದೊಂದಿಗೆ ಭಾರತದ ವಹಿವಾಟನ್ನು 2030ರ ವೇಳೆಗೆ 500 ಬಿಲಿಯನ್ ಡಾಲರ್‌ಗೆ ದ್ವಿಗುಣಗೊಳಿಸುವೆವೆಂಬ ಘೋಷಣೆಯನ್ನು ನೀಡಿದ್ದಾರೆ. ಹಾಗಾದರೆ ಅಮೆರಿಕಾದಿಂದ ಯಾವ ಸರಕು ಭಾರತಕ್ಕೆ ಬರಲಿವೆ? ಆಹಾರ ಅಥವಾ ಜೀವನಾವಶ್ಯಕ ಸರಕುಗಳೇ? ಖಂಡಿತ ಅಲ್ಲ! ಇನ್ನು ಭಾರತಕ್ಕೆ ಧಾವಿಸಲಿವೆ ಅಮೆರಿಕಾದ ಮಿಲಿಟರಿ ತಂತ್ರಾಂಶ! 2008ರಿಂದ ಇಲ್ಲಿಯವರೆಗೂ ಭಾರತ ಅಮೆರಿಕಾ ಮೂಲದ ಕಂಪನಿಗಳಿಂದ ಒಟ್ಟು 25 ಬಿಲಿಯನ್ ಡಾಲರ್ ಮೊತ್ತದ ಯುದ್ಧ ಸಾಮಾಗ್ರಿಗಳ ಒಪ್ಪಂದ ಮಾಡಿಕೊಂಡಿದೆ. ಬಹು ಡಾಲರ್‌ಗಳ ಮಿಲಿಟರಿ ಉಪಕರಣಗಳು ಭಾರತಕ್ಕೆ ಮಾರಾಟವಾಗಲಿವೆ ಎಂದು ಟ್ರಂಪ್ ಘೋಷಿಸಿದ್ದಾರೆ. ಭಾರತ ಸರ್ಕಾರ ಮುಂಬರುವ ಹತ್ತು ವರ್ಷಗಳಲ್ಲಿ 200 ಬಿಲಿಯನ್ ಡಾಲರ್‌ಗಳ ಮೊತ್ತವನ್ನು ಮಿಲಿಟರಿಯ ಆಧುನೀಕರಣಕ್ಕೆ ವ್ಯಯಮಾಡಲಿದೆ ಎಂಬ ಅಂದಾಜು ಇಡೀ ಚಿತ್ರಣವನ್ನು ಸ್ಪಷ್ಟಗೊಳಿಸುತ್ತದೆ.

ಎಫ್–35 ಫೈಟರ್‌ಗಳ ಗುಣಮಟ್ಟದ ಬಗ್ಗೆ ಅನೇಕ ಪ್ರಶ್ನೆಗಳಿರುವ ಸಂದರ್ಭದಲ್ಲೇ ಟ್ರಂಪ್ ಎಫ್–35 ಫೈಟರ್‌ಗಳ ರೂಪದಲ್ಲಿ ಬಿಲಿಯನ್‌ಗಟ್ಟಲೆ ಮಿಲಿಟರಿ ಉಪಕರಣಗಳ ರಫ್ತು ಮಾಡಲಾಗುವುದು ಎಂದು ಘೋಷಿಸಿರುವುದು ಅನೇಕ ಆತಂಕಕಾರಿ ಪ್ರಶ್ನೆಗಳನ್ನು ಎಬ್ಬಿಸುತ್ತಿದೆ. ಅಣುತಂತ್ರಜ್ಞಾನವನ್ನು ಆಮದು ಮಾಡಿಕೊಳ್ಳಲೋಸುಗ ಭಾರತವು ತನ್ನ ದೇಶದ ಕಾನೂನುಗಳನ್ನು ಬದಲಾಯಿಸುತ್ತಿದೆ ಎಂಬ ಮಾತು ಟ್ರಂಪ್ ಬಾಯಿಂದ ಬಂದಿರುವುದು ಹೃದಯ ಝಲ್ ಎನ್ನಿಸುತ್ತದೆ!

### ಮೋದಿ–ಮಸ್ಕ್ ಭೇಟಿ

ಜಗತ್ತಿನ ಅತ್ಯಂತ ಶ್ರೀಮಂತ ಉದ್ಯಮಿಯೊಂದಿಗೆ ಮೋದಿಯವರ ಭೇಟಿಯೂ ಅನೇಕ ಪ್ರಶ್ನೆಗಳನ್ನು ಎಬ್ಬಿಸಿದೆ. ಪತ್ರಿಕಾ ವರದಿಗಳ ಪ್ರಕಾರ ಭಾರತವು ಅಮೆರಿಕಾದಿಂದ ಬರುವ ಆಟೋಗಳ ಮೇಲಿನ ಸುಂಕವು ಭಾರತದಲ್ಲಿ "100%" ರಷ್ಟು ಇದೆ ಎಂದು ಮಸ್ಕ್ ಸೂಚಿಸಿದಾಗ, ಭಾರತ ಅದಕ್ಕೆ ಪರಿಹಾರವೊಂದನ್ನು ಸೂಚಿಸಿದೆ. ಹೊಸ ಎಲೆಕ್ಟ್ರಿಕ್ ವೆಹಿಕಲ್ ನೀತಿಯ ಪ್ರಕಾರ ವಾಹನ ತಯಾರಕರು ಭಾರತದಲ್ಲಿಯೇ ಗಣನೀಯ ಮೊತ್ತದ ಬಂಡವಾಳ ಹೂಡಿ ಕಾರ್ಖಾನೆ ಪ್ರಾರಂಭಿಸಿದಲ್ಲಿ ಅವರ ಕಂಪನಿಯ ಆಮದಿಗೆ 15% ರಷ್ಟು ಸುಂಕ ವಿನಾಯಿತಿ ನೀಡಲಾಗುವುದು ಎಂದು. ಇದು ಮಸ್ಕ್‌ರಿಗೆ ಇಷ್ಟವಾಗುವಂತಹದೇ ಪರಿಹಾರ! ಭಾರತದಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾರುಕಟ್ಟೆ ಈಗ ತಾನೇ ಕಣ್ತೆರೆದಿದೆ. 2030ರಷ್ಟರಲ್ಲಿ ಈ ಮಾರುಕಟ್ಟೆಯನ್ನು ಬೃಹದಾಕಾರಗೊಳಿಸುವ ಯೋಜನೆಯನ್ನು ಸರ್ಕಾರ ರೂಪಿಸುತ್ತಿದೆ. ಮೋದಿಯವರೊಂದಿಗೆ ಮಾತುಕತೆ ನಡೆದ ಒಂದು ವಾರದೊಳಗೆ ಟೆಸ್ಲಾ ಕಂಪನಿಯು ಭಾರತದಲ್ಲಿ ಹಿರಿಯ ನೌಕರರನ್ನು ನೇಮಕ ಮಾಡಿಕೊಳ್ಳುವ ಕೆಲಸ ಪ್ರಾರಂಭಿಸಿದೆ. ಇನ್ನು ಮುಂದೆ ಮಸ್ಕ್‌ನ ಬೃಹತ್ ಉದ್ಯಮ ಭಾರತಕ್ಕೆ ಕಾಲಿಡುವ ಸೂಚನೆ ನೀಡುತ್ತದೆ. ಅಂಬಾನಿಯ ಜಿಯೊ, ರಿಲಯನ್ಸ್‌ನಿಂದ ಪ್ರತಿರೋಧವಿದ್ದರೂ ಮಸ್ಕ್‌ನ ಕಣ್ಣು ದೇಶದ ಸ್ಯಾಟಲೈಟ್‌ಗಳ ಮೇಲೆ ಈಗಾಗಲೇ ಬಿದ್ದಿದೆ! ಟ್ರಂಪ್ ಅಣ್ಣನನ್ನು ಓಲೈಸಿಕೊಳ್ಳಲು ಮೋದಿಯವರು ನಡೆಸುತ್ತಿರುವ ಕಸರತ್ತು ಒಂದಲ್ಲ, ಎರಡಲ್ಲ!

ತನ್ನ ಆರ್ಥಿಕ ಸಂಕಷ್ಟದಿಂದ ಪಾರಾಗಲು ವಿಶ್ವದ ದೊಡ್ಡಣ್ಣ ಎಲ್ಲಾ ರೀತಿಯ ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ–ಕಾರ್ಯತಂತ್ರಗಳನ್ನು ಬಳಸುತ್ತಿದೆ. ಭಾರತ ಸೇರಿದಂತೆ ಎಲ್ಲಾ ದೇಶಗಳಿಂದಲೂ ಸಾಧ್ಯವಾದಷ್ಟು ವ್ಯಾಪಾರ–ವಹಿವಾಟು ಬಾಚಿಕೊಳ್ಳಲು ಹರಸಾಹಸ ನಡೆಸುತ್ತಿದೆ. ಭಾರತೀಯ ಅಕ್ರಮ ವಲಸಿಗರನ್ನು ಕೋಳತೊಡಿಸಿ ಕಳುಹಿಸಿದ್ದಲ್ಲದೇ ಎಚ್.ಒನ್.ಬಿ ವೀಸಾ ಮೇಲಿನ ನಿಯಂತ್ರಣವನ್ನು ಹೇರುತ್ತಲೇ ಬೆದರಿಕೆಯೊಡ್ಡುತ್ತಾ ಭಾರತ ಸೇರಿದಂತೆ ಎಲ್ಲಾ ದೇಶಗಳ ಮೇಲೆ ತನ್ನ ಹತೋಟಿ ಸಾಧಿಸುತ್ತಿದೆ. ಟ್ರಂಪ್‌ನ ಬಲಪ್ರಯೋಗದ ಬೇಡಿಕೆಗಳನ್ನು ಈಡೇರಿಸಲು ಮೋದಿ ಹರಸಾಹಸ ಪಡುತ್ತಿರುವುದು, ಭಾರತದ ಅನೇಕ ವರ್ಷಗಳ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ತದ್ವಿರುದ್ಧವಾಗಿದೆ. ಏಕಸ್ವಾಮ್ಯಾಧಿಪತಿಗಳ, ವಿದೇಶಿ ಹಾಗೂ ದೇಶೀಯ ಬಹು ರಾಷ್ಟ್ರೀಯ ಕಂಪನಿಗಳ ಸೇವೆಗೆಯ್ಯುವುದನ್ನು ಬಿಟ್ಟು ಬಿಜೆಪಿ ಮತ್ತು ಅದರ ಪ್ರಧಾನಿ ಮೋದಿಗೆ ಜನರ ಹಿತಾಸಕ್ತಿ ಅಥವಾ ಭಾವನೆಗಳ ಬಗ್ಗೆ ಯಾವುದೇ ಕಾಳಜಿ ಇಲ್ಲ.

ನಮ್ಮ ಪಕ್ಷ ಎಸ್‌ಯುಸಿಐ(ಸಿ)ನ ಸಂಸ್ಥಾಪಕರಾದ ಮಹಾನ್ ಮಾರ್ಕ್ಸ್‌ವಾದಿ ಚಿಂತಕರಾದ ಕಾಮ್ರೇಡ್ ಶಿವದಾಸ್ ಘೋಷ್ ಅವರು ಹೇಳಿರುವಂತೆ, ಇಂದು ಆಡಳಿತಾರೂಢ ಬಂಡವಾಳಶಾಹಿ ವರ್ಗಕ್ಕೆ, ಅತೀ ಲಾಭಗಳಿಕೆಯ ತನ್ನ ವರ್ಗ ಹಿತಾಸಕ್ತಿಗನುಗುಣವಾಗಿ ಅಂತರರಾಷ್ಟ್ರೀಯ ಏಕಸ್ವಾಮ್ಯಾಧಿಪತಿಗಳನ್ನು ಓಲೈಸುವುದನ್ನು ಬಿಟ್ಟು ದೇಶ, ದೇಶದ ಜನರ ಬಗ್ಗೆ ಕಿಂಚಿತ್ತೂ ಯಾವ ಕಾಳಜಿಯೂ ಇಲ್ಲ. ಮೋದಿ–ಟ್ರಂಪ್ ಶೃಂಗಸಭೆಯು ಇದಕ್ಕೆ ಸಾಕ್ಷಿ.

### ಸಿರಿಯಾ:

# ಸಾಮ್ರಾಜ್ಯಶಾಹಿಗಳ ಕುತಂತ್ರದ ಹೊಸ ತಾಣ

ಯುದ್ಧಪೀಡಿತ ಮಧ್ಯಪ್ರಾಚ್ಯವು ಮತ್ತೊಂದು ಆತಂಕಕಾರಿ ಬೆಳವಣಿಗೆಗೆ ಸಾಕ್ಷಿಯಾಗುತ್ತಿದೆ. ಇಲ್ಲಿಯವರೆಗೆ, ಸಾಮ್ರಾಜ್ಯಶಾಹಿ ಅಮೆರಿಕಾ ಹಾಗೂ ಅದರ ಮಿತ್ರರಾಷ್ಟ್ರಗಳ ಬೆಂಬಲದೊಂದಿಗೆ ಝಿಯೋನಿಸ್ಟ್ ಇಸ್ರೇಲ್ ದೇಶವು ಪ್ಯಾಲೆಸ್ಟೈನ್ ಮತ್ತು ಲೆಬನಾನ್ ವಿರುದ್ಧ ಆಕ್ರಮಣಕಾರಿ ಯುದ್ಧಗಳನ್ನು ನಡೆಸುತ್ತಾ ಬಂದಿದೆ. ಈಗ, ಹೈಯಾತ್ ತಹ್ರೀರ್ ಅಲ್–ಶಾಮ್ (HTS) (ಸಿರಿಯಾ ಲಿಬರೇಶನ್ ಕಮಿಟಿಯು) ಇಸ್ರೇಲ್ ಮತ್ತು ಟರ್ಕಿಯ ಬೆಂಬಲದೊಂದಿಗೆ, ಕಳೆದ ಡಿಸೆಂಬರ್ 9 ರಂದು ಸಿರಿಯಾದ ರಾಜಧಾನಿ ಡಮಾಸ್ಕಸ್ ಅನ್ನು ವಶಪಡಿಸಿಕೊಂಡು ಅಧ್ಯಕ್ಷ ಬಶರ್ ಅಲ್–ಅಸ್ಸಾದ್ ಸರ್ಕಾರವನ್ನು ಬುಡಮೇಲು ಮಾಡಿದೆ. ಇದರ ಜೊತೆಗೆ, ಇಸ್ರೇಲ್ ಸಿರಿಯಾದ ಶಸ್ತ್ರಾಸ್ತ್ರ ಡಿಪೋಗಳ ಮೇಲೆ 480ಕ್ಕೂ ಹೆಚ್ಚು ದಾಳಿಗಳನ್ನು ಮಾಡಿದೆ. ಈಗ 1967 ರಿಂದ ಆಕ್ರಮಿಸಿಕೊಂಡಿರುವ ಗೋಲ್ಡನ್ ಹೈಟ್ಸ್‌ನಿಂದ ವಿಸ್ತರಿಸಿರುವ ಸೇನಾರಹಿತ ಬಫರ್ ವಲಯಕ್ಕೂ ತನ್ನ ಸೈನ್ಯವನ್ನು ನುಗ್ಗಿಸುತ್ತಿದೆ. ಅಮೆರಿಕಾ ಮಾತ್ರವಲ್ಲದೇ ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಕೂಡ, ಸಿರಿಯಾ ಮೇಲಿನ ಇಸ್ರೇಲ್‌ನ ಬಾಂಬ್ ದಾಳಿಯನ್ನು ಸಮರ್ಥಿಸಿಕೊಳ್ಳುತ್ತ ಇದು ಕಾನೂನುಬದ್ಧವಾಗಿದೆ ಎಂದಿದ್ದಾರೆ. ಸಿರಿಯಾ ಅಧ್ಯಕ್ಷ ಅಸ್ಸಾದ್ ಆಶ್ರಯ ಕೋರಿ ರಷ್ಯಾಕ್ಕೆ ಪಲಾಯನ ಮಾಡಿದ್ದಾನೆ ಎಂದು ಹೇಳಲಾಗುತ್ತಿದೆ.

### 2011ರಿಂದ ಸಿರಿಯಾ ಯುದ್ಧದ ಅಗ್ನಿಕುಂಡದಲ್ಲಿ

ಪ್ರಸ್ತುತ ಬೆಳವಣಿಗೆಗಳ ಮೇಲೆ ಮತ್ತಷ್ಟು ಗಮನಹರಿಸುವ ಮುಂಚೆ, 2011ರಿಂದ ನಡೆದ ಘಟನಾವಳಿಗಳನ್ನು ಮೆಲುಕು ಹಾಕುವುದು ಸೂಕ್ತವೆನಿಸುತ್ತದೆ. ಸಿರಿಯಾದ ಅಸ್ಸಾದ್ ಸರ್ಕಾರದ ಸೈನ್ಯ ಮತ್ತು ಅಮೆರಿಕಾ ಬೆಂಬಲಿತ 'ಫ್ರೀ ಸಿರಿಯನ್ ಆರ್ಮಿ' (ಎಫ್‌ಎಸ್‌ಎ) ಅಲ್ ಖೈದಾ ಗುಂಪುಗಳು ಮತ್ತು ಇತರರ ನಡುವೆ ಘನಘೋರ ಕಾಳಗಗಳು ನಡೆದಿವೆ. ಸಾಮ್ರಾಜ್ಯಶಾಹಿ ಅಮೆರಿಕಾ ಹಾಗೂ ಅದರ ಮಿತ್ರರಾಷ್ಟ್ರಗಳು ಸಿರಿಯಾದಲ್ಲಿ ಅನುಸರಿಸಿದ ಮಾದರಿಯು ಇರಾಕ್ ಅಥವಾ ಲಿಬಿಯಾದಲ್ಲಿ ಅಳವಡಿಸಿಕೊಂಡ ಮಾದರಿಯನ್ನು ಹೋಲುತ್ತದೆ. ಅಂದರೆ ಒಂದು ಕುಂಟುನೆಪವನ್ನು ಆಧರಿಸಿದ ಆಕ್ರಮಣ. ಅಧ್ಯಕ್ಷ ಅಸ್ಸಾದ್ ಬಹಳ ಹಿಂದಿನಿಂದಲೂ ಅಮೆರಿಕಾ ಮುಂದೆ ತಲೆಬಾಗಲು ನಿರಾಕರಿಸುತ್ತಿರುವುದರಿಂದ, ಅದು ತನ್ನ ಮಿತ್ರರಾಷ್ಟ್ರಗಳ ಜೊತೆಗೂಡಿ 'ಫ್ರೀ ಸಿರಿಯನ್ ಆರ್ಮಿ' (FSA) ಅನ್ನು ಸೃಷ್ಟಿ ಮಾಡಿತು. ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ಬೇಡಿಕೆಯೊಂದಿಗೆ ಚಳುವಳಿಯನ್ನು ಆರಂಭಿಸಿದ ಈ ಸಂಘಟನೆಯು, ಅಧ್ಯಕ್ಷ ಅಸ್ಸಾದ್ ಅವರನ್ನು ಪದಚ್ಯುತಗೊಳಿಸುವುದಾಗಿ ಘೋಷಿಸಿತು. ಎಫ್‌ಎಸ್‌ಎ ಸ್ಪಷ್ಟವಾಗಿ ಒಂದು ಪಿತೂರಿ ಸಂಘಟನೆಯಾಗಿದ್ದು, ಅದರ ಮುಖ್ಯ ಕೇಂದ್ರವು ಸಿರಿಯಾ ಗಡಿಗೆ ಹೊಂದಿಕೊಂಡ ಟರ್ಕಿಯ ಅದಾನಾ ಪ್ರಾಂತ್ಯದ ರಹಸ್ಯ ನೆಲೆಯಲ್ಲಿದೆ. ಇದು ಇನ್‌ಸಿರ್ಲಿಕ್‌ನ ಅಮೆರಿಕಾ ಸೇನಾನೆಲೆಗೆ ತುಂಬಾ ಹತ್ತಿರದಲ್ಲಿದೆ. ಜೊತೆಗೆ, ಅಸ್ಸಾದ್‌ನನ್ನು ಹಣಿಯುವ ದೃಷ್ಟಿಯಿಂದ, ಅವರು ಅಲ್ ಖೈದಾ ಹಾಗೂ ಜೆಹಾದಿ ಭಯೋತ್ಪಾದಕ ದಂಗೆಕೋರರಿಗೆ ಹಣಕಾಸು, ತರಬೇತಿ ಮತ್ತು ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದಾರೆ. ಆ ಕುತಂತ್ರದ ಭಾಗವಾಗಿ 10,000ಕ್ಕೂ ಹೆಚ್ಚು ಬಾಡಿಗೆ ಸೈನಿಕರನ್ನು ಸಿರಿಯಾದ ಎರಡನೇ ದೊಡ್ಡ ನಗರವಾದ ಅಲೆಪ್ಪೊಗೆ ಕಳುಹಿಸಲಾಯಿತು. ಅಮೆರಿಕಾದ ಮಾಧ್ಯಮಗಳು ಕೂಡ ನೆರೆಯ ದೇಶಗಳಿಂದ ಅಲ್ ಖೈದಾ ಮತ್ತು ಅದರ ಮಿತ್ರ ಸಲಾಫಿಸ್ಟ್ ಹೋರಾಟಗಾರರು ಸಿರಿಯಾದ ನೆಲದೊಳಗೆ ನುಸುಳಿದ್ದಾರೆ ಎಂದು ವರದಿ ಮಾಡಿವೆ. ಅಮೆರಿಕಾದ ಮಿತ್ರರಾಷ್ಟ್ರಗಳಾದ ಟರ್ಕಿ ಮತ್ತು ಸೌದಿ ಅರೇಬಿಯಾದ ಮುಲ್ಲಾಗಳು ಮತ್ತು ಮೂಲಭೂತವಾದಿ ಶೇಖ್‌ಗಳು 'ಧರ್ಮದ್ರೋಹಿ' ಸಿರಿಯನ್ ಸರ್ಕಾರದ ವಿರುದ್ಧ ವಿಷವನ್ನು ಉಗುಳುತ್ತಿದ್ದಾರೆ ಮತ್ತು ಸಿರಿಯಾವನ್ನು ಮತ್ತೊಂದು ಅಫ್ಘಾನಿಸ್ತಾನವನ್ನಾಗಿ ಮಾಡಲು ಸಿರಿಯನ್ ಯುವಕರಿಗೆ ಕುಮ್ಮಕ್ಕು ನೀಡುತ್ತಿದ್ದಾರೆ. ಅದನ್ನು ಅನುಸರಿಸಿ, ಅಮೆರಿಕಾ ಮತ್ತು ಟರ್ಕಿಶ್ ಬಾಡಿಗೆ ಸೈನಿಕರು ಮತ್ತು ಭಯೋತ್ಪಾದಕ ಪಡೆಗಳು ಸಿರಿಯಾದ ಮೂರನೇ ಒಂದು ಭಾಗದಷ್ಟು ಭೂಪ್ರದೇಶ – ಹೆಚ್ಚಾಗಿ ತೈಲ–ಸಮೃದ್ಧ ಮತ್ತು ಕೃಷಿ ನೆಲೆಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿವೆ. ಅಮೆರಿಕಾ–ಇಸ್ರೇಲ್ ಜೋಡಿ ಮತ್ತು ಅವರ ಮಿತ್ರರಾಷ್ಟ್ರಗಳು ನಡೆಸಿದ ಸಿರಿಯನ್ ಅಂತರ್ಯುದ್ಧಕ್ಕೆ ಈಗಾಗಲೇ 3,50,000 ಕ್ಕೂ ಹೆಚ್ಚು ಜನರು ಬಲಿಯಾಗಿ ಕನಿಷ್ಠ 1.3 ಕೋಟಿ ಸಿರಿಯನ್ನರು ಸ್ಥಳಾಂತರಗೊಂಡಿರುವುದು ಯುದ್ಧದ ಕರಾಳ ತೀವ್ರತೆಗೆ, ಅಮೆರಿಕಾ ಇಸ್ರೇಲ್‌ಗಳ ಸಾಮ್ರಾಜ್ಯಶಾಹಿ ಧೋರಣೆಗೆ ಸಾಕ್ಷಿಯಾಗಿದೆ.

'ಬಂಡುಕೋರರು' ಮತ್ತು ತಥಾಕಥಿತ ದಂಗೆಕೋರರಿಗೆ ಕುಮ್ಮಕ್ಕು ನೀಡುತ್ತಿದ್ದರೂ, ಅವರಿಗೆ ಅಸ್ಸಾದ್ ಸರ್ಕಾರವನ್ನು ಉರುಳಿಸಲು ಅಥವಾ ಅಸ್ಸಾದ್‌ನಿಂದ ಯಾವುದೇ ಬೇಡಿಕೆಯನ್ನು ಈಡೇರಿಸಿಕೊಳ್ಳಲೂ ಸಾಧ್ಯವಾಗಲಿಲ್ಲ. ಏಕೆಂದರೆ, ಪ್ರತಿಕ್ರಾಂತಿಯ ನಂತರ ಚೀನಾದಂತೆಯೇ ಸಾಮ್ರಾಜ್ಯಶಾಹಿ ದೇಶವಾಗಿ ಬದಲಾಗಿರುವ ರಷ್ಯಾ, ಸಿರಿಯಾ ಸೇರಿದಂತೆ ಮಧ್ಯಪ್ರಾಚ್ಯದಲ್ಲಿ ತನ್ನ ಹಿತಾಸಕ್ತಿಗಳನ್ನು ಮುಂದುವರಿಸಲು ಮತ್ತು ಆ ಪ್ರದೇಶದಲ್ಲಿ ಇರಾನ್ ಜೊತೆಗೂಡಿ ತನ್ನ ವಸಾಹತನ್ನು ಸ್ಥಾಪಿಸಲು ಪ್ರಯತ್ನಿಸುತ್ತಿದೆ. ಇಲ್ಲಿಯವರೆಗೆ ರಷ್ಯಾ ಅಸ್ಸಾದ್ ಸರ್ಕಾರದ ನಿಷ್ಠಾವಂತ ರಕ್ಷಕನಾಗಿ ತನ್ನ ಮಿಲಿಟರಿ ಶಕ್ತಿಯಿಂದ ಅದನ್ನು ರಕ್ಷಿಸಿತ್ತು. ಆದ್ದರಿಂದ, ಸಿರಿಯಾವನ್ನು ಸಂಪೂರ್ಣ ಹಿಡಿತಕ್ಕೆ ತೆಗೆದುಕೊಳ್ಳುವ ಅಮೆರಿಕಾ ಸಾಮ್ರಾಜ್ಯಶಾಹಿಗಳ ತಂತ್ರವು ಇಲ್ಲಿಯವರೆಗೆ ವಿಫಲಗೊಂಡಿತ್ತು. ಆದ್ದರಿಂದ, ಮತ್ತೊಂದು ಯುದ್ಧದ ಕ್ರಮವಾದ ಕಠಿಣ ನಿರ್ಬಂಧಗಳನ್ನು ವಿಧಿಸುವ ಮೂಲಕ ಸಿರಿಯಾದ ಆರ್ಥಿಕತೆಯನ್ನು ತೀವ್ರವಾಗಿ ಬಾಧಿಸಲು ಅದು ಯೋಜಿಸಿತು. ಪ್ರಮುಖ ಸೇವೆಗಳನ್ನು ನಿರಾಕರಿಸಿ ಜನಸಂಖ್ಯೆಯನ್ನು ಹಸಿವಿನಿಂದ ಸಾಯಿಸಲು ಮತ್ತು ಸಿರಿಯನ್ ಆರ್ಥಿಕತೆಯು ಕುಸಿಯುವವರೆಗೂ ಅದನ್ನು ನಿಶ್ಯಕ್ತ ಮಾಡುವ ಉದ್ದೇಶವಿತ್ತು. ಮತ್ತೊಂದೆಡೆ, ಸಾಮ್ರಾಜ್ಯಶಾಹಿ ರಷ್ಯಾ, ತನ್ನದೇ ಆದ ವರ್ಗ ಹಿತಾಸಕ್ತಿಗಳಿಗೆ ಆದ್ಯತೆ ನೀಡಲು, ಆಹಾರ, ಬಟ್ಟೆ ಮತ್ತು ಔಷಧಿಗಳನ್ನು ಪೂರೈಸುವ ಮೂಲಕ ಸಿರಿಯಾಕ್ಕೆ ಪ್ರತ್ಯೇಕವಾದ ಮತ್ತು ಸ್ವಾವಲಂಬಿ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಿತು. ವಿಶ್ವಸಂಸ್ಥೆಯ ಪ್ರಸ್ತಾಪಗಳ ಮೂಲಕ ಅಮೆರಿಕಾ ಮತ್ತು ಅದರ ಮಿತ್ರರಾಷ್ಟ್ರಗಳಿಂದ ನೆರವಿನ ಹರಿವನ್ನು ತಡೆಯಲು ರಷ್ಯಾ ಪ್ರಯತ್ನಿಸಿತು ಏಕೆಂದರೆ ಅಂತಹ ನೆರವು ಸಿರಿಯಾದಲ್ಲಿ ಅಮೆರಿಕಾ ಪ್ರಾಬಲ್ಯವನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ ಎಂದು ಅದು ಹೇಳಿದೆ.

ಹೀಗಾಗಿ, ಸಿರಿಯಾವು ಇಬ್ಬರು ದೈತ್ಯ ಸಾಮ್ರಾಜ್ಯಶಾಹಿಗಳಿಗೆ ತಮ್ಮ ಪ್ರಭಾವವನ್ನು ವಿಸ್ತರಿಸಲು ಪೈಪೋಟಿಯ ಕೇಂದ್ರವಾಯಿತು ಎಂದು ಗಮನಿಸಬಹುದು.

### ಅಸ್ಸಾದ್ ಸರ್ಕಾರದ ಪತನಕ್ಕೆ ಕಾರಣವೇನು?

ಆದರೆ ಅಸ್ಸಾದ್‌ನನ್ನು ಮಿಲಿಟರಿ ಮತ್ತು ರಾಜತಾಂತ್ರಿಕವಾಗಿ ರಕ್ಷಿಸುತ್ತಿದ್ದ ರಷ್ಯಾ ಮತ್ತು ಇರಾನ್ ಬಿಕ್ಕಟ್ಟಿನಲ್ಲಿವೆ. ಉಕ್ರೇನ್ ಮತ್ತು ಸಿರಿಯಾದಲ್ಲಿ ಯುದ್ಧದಲ್ಲಿ ತೊಡಗಿ ರಷ್ಯಾ ತುಂಬಾ ದುರ್ಬಲವಾಗಿದೆ. ಇತ್ತ ಇಸ್ರೇಲ್ ಮತ್ತು ಅಮೆರಿಕಾ ಜೊತೆಗಿನ ಒಂದು ವರ್ಷದ ಸಂಘರ್ಷದ ನಂತರ ಇರಾನ್ ಕೂಡ ಬಿಕ್ಕಟ್ಟಿನಲ್ಲಿದೆ.

ಇದಲ್ಲದೆ, ಸಿರಿಯಾದ ಸ್ಥಿರವಾದ ಅಮೆರಿಕಾ ಸಾಮ್ರಾಜ್ಯಶಾಹಿ ವಿರೋಧಿ, ಇಸ್ರೇಲ್ ವಿರೋಧಿ ನಿಲುವು ಮತ್ತು ದೇಶವನ್ನು ಅಸ್ಥಿರಗೊಳಿಸಲು ಅವರು ಮಾಡುತ್ತಿರುವ ನಿರಂತರ ಕುತಂತ್ರವನ್ನು ವಿಫಲಗೊಳಿಸಲು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದರೂ ಸಹ, ಎಲ್ಲ ಬಂಡವಾಳಶಾಹಿ ದೇಶಗಳಂತೆ ಅಸ್ಸಾದ್ ಆಳ್ವಿಕೆಯು ಏಕಚಕ್ರಾಧಿಪತ್ಯದ ಅರೆ–ಅಧ್ಯಕ್ಷೀಯ ಗಣರಾಜ್ಯ ಅಥವಾ ಬೂರ್ಜ್ವಾ ಸರ್ವಾಧಿಕಾರದ ಆಡಳಿತವಾಗಿದ್ದು ಅದು ಕೂಡ ಕಡಿಮೆ ದಮನಕಾರಿಯಲ್ಲ. ನಿಸ್ಸಂಶಯವಾಗಿ, ಅಲ್ಲಿಯ ಜನರು ಬೂರ್ಜ್ವಾ ದಬ್ಬಾಳಿಕೆ ಮತ್ತು ಶೋಷಣೆಗೆ ಒಳಗಾಗಿದ್ದಾರೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಇತರ ಎಲ್ಲಾ ಆಡಳಿತ ಬೂರ್ಜ್ವಾಗಳಂತೆ, ಸಿರಿಯನ್ ಬೂರ್ಜ್ವಾಗಳು ಸಹ, ಅವನತಿಯಲ್ಲಿರುವ, ಕ್ಷೀಣಿಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ತಮ್ಮ ಜನರ ಪ್ರಜಾತಾಂತ್ರಿಕ ಆಕಾಂಕ್ಷೆಗಳನ್ನು ಪೂರೈಸಲು ಸಾಧ್ಯವಿಲ್ಲ ಮತ್ತು ಸಾಧ್ಯವಾಗುವುದಿಲ್ಲ.

ಪರಿಣಾಮವಾಗಿ, ಆರ್ಥಿಕ ಸಂಕಷ್ಟವು ಭೀಕರವಾಗಿ ಏರಿದೆ. ದೇಶದ ಜಿಡಿಪಿಯು 2011 ರಿಂದ 2021 ರ ಅವಧಿಯ ಒಂದೇ ದಶಕದಲ್ಲಿ ಶೇ.60ರಷ್ಟು ಕಡಿಮೆಯಾಗಿದೆ. ನಿರುದ್ಯೋಗವು ಶೇ.50ನ್ನು ಮೀರಿದೆ. ಗ್ರಾಹಕ ಬೆಲೆ ಹಣದುಬ್ಬರವು ಶೇ.93% ರಷ್ಟು ಏರಿಕೆಯಾಗಿದೆ ಎಂದು ಅಂದಾಜಿಸಲಾಗಿದೆ. ಜನಸಂಖ್ಯೆಯ ಶೇ.90ರಷ್ಟು ಜನರು ಬಡತನ ರೇಖೆಯ ಕೆಳಗೆ ವಾಸಿಸುತ್ತಿದ್ದಾರೆ. ದಿನಕ್ಕೆ $2 ಕ್ಕಿಂತ ಕಡಿಮೆ ಆದಾಯದಲ್ಲಿ ಬದುಕುತ್ತಿದ್ದಾರೆ. 2023 ರ ಸಮೀಕ್ಷೆಯ ಪ್ರಕಾರ, ಅಲೆಪ್ಪೊ ಪ್ರದೇಶದಲ್ಲಿ ಕುಟುಂಬದ ಕಡಿಮೆ ಆದಾಯದ ಕಾರಣ ಸುಮಾರು ಶೇ.11 ರಷ್ಟು ಕುಟುಂಬಗಳ ಮಕ್ಕಳು ಬಾಲ ಕಾರ್ಮಿಕರಾಗಿದ್ದಾರೆ ಎಂದು ವರದಿಯಾಗಿದೆ. ಅಮೆರಿಕಾ ವಿಧಿಸಿದ ನಿರ್ಬಂಧಗಳಿಂದ ಹಣದುಬ್ಬರ ಉಲ್ಬಣಗೊಂಡಿದೆ ಮತ್ತು ಈ ನಿರ್ಬಂಧಗಳಿಂದಾಗಿ ನೆರೆಯ ಲೆಬನಾನ್‌ನಲ್ಲಿ ಕೂಡ ಬ್ಯಾಂಕಿಂಗ್ ಬಿಕ್ಕಟ್ಟು–ಉಂಟಾಗಿ ಮಿಲಿಯನ್‌ಗಟ್ಟಲೆ ಜನರು ನಿರ್ಗತಿಕರಾಗಿದ್ದಾರೆ. 2023ರಲ್ಲಿ, ಅಮೆರಿಕಾದ ಡಾಲರ್ ವಿರುದ್ಧ ಸಿರಿಯನ್ ಪೌಂಡ್ 141% ರಷ್ಟು ಕುಸಿದಿದೆ.

ಆದ್ದರಿಂದ, ಸಿರಿಯನ್ ಜನರು ಅಸ್ಸಾದ್ ಆಡಳಿತದ ಕುರಿತು ಎಷ್ಟು ನಿರಾಶೆಗೊಂಡರೆಂದರೆ ಅದು ಇದ್ದರೆಷ್ಟು, ಬಿಟ್ಟರೆಷ್ಟು ಎಂಬ ಮನೋಸ್ಥಿತಿಗೆ ತಲುಪಿದರು. ಅವರು ಅಸ್ಸಾದ್ ಸರ್ಕಾರವು ಹಯಾತ್ ಬಂಡುಕೋರರ ದಾಳಿಯನ್ನು ಮಟ್ಟ ಹಾಕುತ್ತದೆ ಎಂಬ ನಂಬಿಕೆಯನ್ನು ಮೊದಲು ಹೊಂದಿದ್ದರು. ಆದರೆ, ರಷ್ಯಾ ಸ್ಪಷ್ಟವಾಗಿ ಹಿಂದೆ ಸರಿಯಿತು ಮತ್ತು ನುರಿತ ರಿಪಬ್ಲಿಕನ್ ಗಾರ್ಡ್‌ಗಳು ಸಹ ಬಂಡುಕೋರರಿಗೆ ಶರಣಾದುದರಿಂದ ಅವರು ನಿರಾಶರಾದರು. ರಷ್ಯಾದ ಮತ್ತು ಇರಾನಿನ ಬೆಂಬಲವು ಇಲ್ಲವಾದ ನಂತರ ಅಸ್ಸಾದ್ ಸೈನ್ಯದ ನೈತಿಕತೆಯು ಎಷ್ಟು ಕುಸಿದಿದೆ ಎಂಬುದಕ್ಕೆ ಇದು ಸಾಕ್ಷಿ. ಹೀಗಾಗಿ ಅಸ್ಸಾದ್ ಸರಕಾರವು ಪತನಗೊಂಡಿದೆ.

### ಅಮೆರಿಕಾ ಸಾಮ್ರಾಜ್ಯಶಾಹಿಗಳು ಸಿರಿಯಾ ಮೇಲೆ ಸವಾರಿ ಮಾಡಲು ಏಕೆ ಉತ್ಸುಕರಾಗಿದ್ದಾರೆ?

ಸಿರಿಯಾ ದೇಶದಲ್ಲಿ ಅನಿಲದ ಬಾವಿಗಳು ಇರುವುದು ಕಂಡು ಹಿಡಿಯಲಾಯಿತು ಹಾಗೂ ಇದರ ವ್ಯಾಪಾರಕ್ಕೆ ಸಂಬಂಧಿಸಿದಂತೆ ಅದು ರಷ್ಯಾದ ಕಂಪನಿಗಳೊಂದಿಗೆ ವ್ಯವಹಾರ ಪ್ರಾರಂಭಿಸಿತು. ಈ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಕಣ್ಣಿಟ್ಟಿದ್ದ ಅಮೆರಿಕಾದ ಸಾಮ್ರಾಜ್ಯಶಾಹಿಗಳಿಗೆ ಇದು ಸಹ್ಯವಾಗಲಿಲ್ಲ. ಆದರೆ ಅವರಿಗೆ ಅಸ್ಸಾದ್‌ನನ್ನು ಬಗ್ಗಿಸಲು ಸಾಧ್ಯವಾಗಲಿಲ್ಲ. ಅಮೆರಿಕಾದ ಹಿತಾಸಕ್ತಿಗೆ ಪೆಟ್ಟುಬಿದ್ದು, ಅದರ ಮಿಲಿಟರಿ ಅಲ್ಲಿಂದ ಕಾಲ್ತೆಗೆಯುವ ಸಂದರ್ಭ ಬಂದಲ್ಲಿ, ಜಾಗತಿಕ ಮಾರುಕಟ್ಟೆಯಲ್ಲಿ ಅದಕ್ಕೆ ಪ್ರತಿಸ್ಪರ್ಧಿಗಳಾಗಿರುವ ಸಾಮ್ರಾಜ್ಯಶಾಹಿ ಶಕ್ತಿಗಳಾದ ರಷ್ಯಾ ಹಾಗೂ ಚೀನಾ ದೇಶಗಳಿಗೆ ಅದು ನೆರವಾಗುತ್ತದೆ ಎಂಬ ಆತಂಕ ಅಮೆರಿಕಾಗಿತ್ತು. ಇದರಿಂದಾಗಿ ತನಗೆ ಸ್ಪರ್ಧಿಯಾಗಿರುವ ಇರಾನ್‌ಗೂ ಸಹ ಇದು ನೆರವಾಗುತ್ತದೆ ಎಂದು ಅದು ಭಾವಿಸಿತು. ಆದ್ದರಿಂದಲೇ ಸಿರಿಯಾದ ಮೇಲೆ ಸವಾರಿ ಮಾಡಿ ತನ್ನ ಬಾಡಿಗೆ ಆಳ್ವಿಕೆಯನ್ನು ಅಲ್ಲಿ ನಡೆಸಲು ಅಮೆರಿಕಾಗೆ 'ತುರ್ತು' ಅವಶ್ಯಕತೆಯಿತ್ತು.

### ಹಯಾತ್ ಬಂಡುಕೋರ ಸಂಘಟನೆಯ ಉದ್ದೇಶ

ಅಮೆರಿಕಾದ ಸಿಐಎ ಹಾಗೂ ಇಸ್ರೇಲಿನ ಮೊಸ್ಸಾದ್ ಸಂಸ್ಥೆಗಳ ದೊಡ್ಡ ಫಲಾನುಭವಿ ಅಲ್ ಖೈದಾ ಸಂಘಟನೆಯ ಸಿರಿಯಾದ ಘಟಕ ಜಬಾತ್ ಆಲ್ ನುಸ್ರಾದಿಂದ ವಿಕಸಿತವಾದ ಹೈಯಾತ್ ತಹರಿರ್ ಅಲ್–ಶ್ಯಾಮ್ ಸಂಘಟನೆಯು ಸಿರಿಯಾದಲ್ಲಿ ಈಗ ಅಧಿಕಾರವನ್ನು ಹಿಡಿದಿದೆ. ಸತ್ಯವೆಂದರೆ ಇದರ ಬೇರುಗಳು ಕುಖ್ಯಾತ ಭಯೋತ್ಪಾದಕ ಸಂಘಟನೆ ಇಸ್ಲಾಮಿಕ್ ಸ್ಟೇಟ್ ಹಾಗೂ ಅಂತರರಾಷ್ಟ್ರೀಯ ಇಸ್ಲಾಮಿಕ್ ಅಲ್ ಖೈದಾ ಜಾಲದಲ್ಲಿದೆ. ಹೀಗಾಗಿ ಹೈಯಾತ್, ಸಿರಿಯಾದ ಮೇಲೆ ಇಸ್ಲಾಮಿಕ್ ಸಿದ್ಧಾಂತವನ್ನು ಹೇರುವ ಉದ್ದೇಶ ಹೊಂದಿದೆ. ಇದರ ನಾಯಕರ ಸಂದರ್ಶನ ಹಾಗೂ ಹೇಳಿಕೆಗಳನ್ನು ಗಮನಿಸಿದರೆ ಅಲ್ಲಿ ಪ್ರಜಾಪ್ರಭುತ್ವವೆಂಬ ಶಬ್ದವೇ ಇಲ್ಲ. ಅಮೆರಿಕಾ, ಟರ್ಕಿ, ಸೌದಿ ಅರೇಬಿಯಾಗಳು ಈ ಸಿರಿಯನ್ ಉಗ್ರ ಗುಂಪಿಗೆ ಬೇಷರತ್ ಬೆಂಬಲ ಸೂಚಿಸಿವೆ.

### ಹೈಯಾತ್ ಬಂಡುಕೋರರೊಂದಿಗಿನ ಅಮೆರಿಕಾ ಸಂಬಂಧ ಬಯಲು

ಅಮೆರಿಕಾ ಮತ್ತು ಯುರೋಪಿಯನ್ ಒಕ್ಕೂಟವು ಅಲ್–ಅಸ್ಸಾದ್ ಆಡಳಿತದ ಪತನವನ್ನು ಸ್ವಾಗತಿಸಿವೆ. ಇಬ್ಬರೂ ಇದನ್ನು ರಷ್ಯಾ ಮತ್ತು ಇರಾನ್‌ಗೆ ದೊಡ್ಡ ಹೊಡೆತವೆಂದು ಪರಿಗಣಿಸಿದ್ದಾರೆ. ಇದುವರೆಗೆ HTS ಅನ್ನು ಭಯೋತ್ಪಾದಕ ಸಂಘಟನೆ ಎಂದು ಕರೆದಿದ್ದ ಅಮೆರಿಕಾ, ಈಗ ಅದರ "ಭಯೋತ್ಪಾದಕ" ಹಣೆಪಟ್ಟಿಯನ್ನು ತೆಗೆದುಹಾಕಬೇಕೇ ಎಂಬುದರ ಕುರಿತು ಚರ್ಚೆ ನಡೆಸುತ್ತಿದೆ ಎಂದು ವರದಿಯಾಗಿದೆ. ಇಸ್ರೇಲ್‌ನ ರಕ್ತ–ಸಿಕ್ತ ಆಡಳಿತವನ್ನು 'ಮಧ್ಯಪ್ರಾಚ್ಯದಲ್ಲಿ ಏಕೈಕ ಪ್ರಜಾಪ್ರಭುತ್ವ' ಮತ್ತು 'ಸಿರಿಯನ್ ಬಂಡುಕೋರರು' ಅವರನ್ನು 'ಮಧ್ಯಮವಾದಿಗಳು' ಎಂದು ಶ್ಲಾಘಿಸುವ ಸಾಮ್ರಾಜ್ಯಶಾಹಿ ಪರ ಮಾಧ್ಯಮಗಳ ಶುದ್ಧೀಕರಿಸಿದ ಭಾಷೆಯು HTS ತನ್ನ ಕುಖ್ಯಾತಿಯನ್ನು ಕಳಚಿಕೊಳ್ಳಲು ನೆರವಾಗಿದೆ. ಮತ್ತು ಇಸ್ರೇಲ್–ವಿರೋಧಿ ಹಮಾಸ್ (ಪ್ಯಾಲೆಸ್ಟೈನ್), ಹುತಿ (ಯೆಮೆನ್) ಮತ್ತು ಹಿಜ್ಬುಲ್ಲಾ (ಲೆಬನಾನ್) ಅನ್ನು 'ಅನಾಗರಿಕ ಗುಂಪುಗಳು' ಎಂದು ಖಂಡಿಸುವ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ಬಣವು HTS ಅನ್ನು ದಬ್ಬಾಳಿಕೆ ಮತ್ತು ಅನ್ಯಾಯದ ವಿರುದ್ಧ ಹೋರಾಡುವ ಗೌರವಾನ್ವಿತ ಸಂಘಟನೆಯಾಗಿ ಚಿತ್ರಿಸಿ ಕುಖ್ಯಾತ CIA ನಿಂದ ಶಸ್ತ್ರಾಸ್ತ್ರ ಮತ್ತು ಧನಸಹಾಯವನ್ನು ನೀಡುತ್ತದೆ.

### ಪಾಠಗಳು

ಸಿರಿಯಾದ ಉದಾಹರಣೆಯಿಂದ ಕಲಿಯಬೇಕಾದ ಪಾಠ ಏನೆಂದರೆ, ಅಮೆರಿಕಾ–ಇಸ್ರೇಲ್ ಮತ್ತು ಅವರ ಸಹಚರರು ರೂಪಿಸಿದ ಪ್ರತಿಗಾಮಿ ಪಿತೂರಿ ವಿಫಲಗೊಳ್ಳುವವರೆಗೆ, ಅದು ಮಧ್ಯಪ್ರಾಚ್ಯ ಮತ್ತು ಅದರಾಚೆಗೆ ತನ್ನ ವಿಷವನ್ನು ಹರಡುತ್ತಲೇ ಇರುತ್ತದೆ. ಆದ್ದರಿಂದ ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಬಳಲುತ್ತಿರುವ ಜನಸಾಮಾನ್ಯರು ಯಾವುದೇ ಬಂಡವಾಳಶಾಹಿ ಆಡಳಿತವನ್ನು ಅವಲಂಬಿಸುವಂತಿಲ್ಲ. ಕ್ರಾಂತಿಕಾರಿ ನಾಯಕತ್ವವನ್ನು ಹುಟ್ಟುಹಾಕುವ ಮೂಲಕ ಮತ್ತು ಸರಿಯಾದ ತಳಹದಿಯ ರಾಜಕೀಯ ಮಾರ್ಗದಲ್ಲಿ ಅವರು ವಿಮೋಚನೆಗಾಗಿ ಹೋರಾಡಬೇಕಾಗಿದೆ. ಅಲ್ಲಿಯವರೆಗೆ, ಎಲ್ಲರಿಗೂ ಸಮಾನ ಪೌರತ್ವವನ್ನು ಪ್ರತಿಪಾದಿಸುವ ಹೊಸ ಧರ್ಮಾತೀತ ಪ್ರಜಾಪ್ರಭುತ್ವ ಸಂವಿಧಾನದ ಅಡಿಯಲ್ಲಿ ಎಲ್ಲಾ ರಾಜಕೀಯ ಗುಂಪುಗಳ ಸಂಪೂರ್ಣ ಭಾಗವಹಿಸುವಿಕೆಯೊಂದಿಗೆ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ನಡೆಯಬೇಕು. ಮತ್ತು ವಿಶ್ವಸಂಸ್ಥೆಯ ನಿಷ್ಪಕ್ಷಪಾತ ಮೇಲ್ವಿಚಾರಣೆಯಲ್ಲಿ ಎಲ್ಲಾ ಸಶಸ್ತ್ರ 09ನೇ ಪುಟಕ್ಕೆ

## ಗುಜರಾತ್ :

# ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ರದ್ದುಗೊಳಿಸಿ!

ಪ್ರಧಾನಿ ಮೋದಿಯವರ ತವರು ರಾಜ್ಯ ಗುಜರಾತನ್ನು ಭಾರತದ 'ಮಾದರಿ' ರಾಜ್ಯ ಎಂದು ಬಿಂಬಿಸಲಾಗುತ್ತದೆ. ಆದರೆ ವಾಸ್ತವವು ಅದಕ್ಕೆ ತದ್ವಿರುದ್ಧವಾಗಿದೆ. ಅದೊಂದು ಕೋಮು ವಿಭಜನೆ ಎದ್ದುಕಾಣುವ ರಾಜ್ಯವಾಗಿ ಬದಲಾಗಿದೆ. ಮುಸ್ಲಿಂ ದ್ವೇಷವನ್ನು ಅವ್ಯಾಹತವಾಗಿ ಹರಡಲಾಗಿದೆ. ಹಿಂದೂ ಕೋಮುವಾದಿಗಳು 2002ರಲ್ಲಿ ನಡೆಸಿದ ಕೋಮು ಘರ್ಷಣೆ ಮತ್ತು ಭೀಕರ ಮುಸ್ಲಿಂ ವಿರೋಧಿ ಹತ್ಯಾಕಾಂಡಕ್ಕೆ ರಾಜ್ಯವು ಸಾಕ್ಷಿಯಾಗಿದೆ. 2001 ರಿಂದ 2014ರವರೆಗೆ ಈಗಿನ ಪ್ರಧಾನಿ ನರೇಂದ್ರ ಮೋದಿಯವರೇ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಭಾರತದ ಪ್ರಮುಖ ರಾಜ್ಯಗಳಲ್ಲಿ ಗುಜರಾತ್ ಅತಿ ಹೆಚ್ಚು ಗ್ರಾಮೀಣ-ನಗರ ಅಸಮಾನತೆಯನ್ನು ಹೊಂದಿದೆ. ಗ್ರಾಮೀಣ ಕುಟುಂಬಗಳ ದಿನಬಳಕೆಯ ವೆಚ್ಚದಲ್ಲಿ ಕೆಳಸ್ತರದ 5% ಮತ್ತು ಮೇಲ್ ಸ್ತರದ 5% ಜನರ ನಡುವೆ ಬಹುದೊಡ್ಡ ಅಂತರವಿದೆ. ಅಲ್ಲಿನ ಜನರು ಮುರಿದ ರಸ್ತೆಗಳು, ಅವ್ಯವಸ್ಥೆಯ ಸರ್ಕಾರಿ ಬಸ್ಸುಗಳು, ರಸ್ತೆಗಳಲ್ಲಿ ಕಸದ ತೊಟ್ಟಿಗಳು, ಜಲಾವೃತವಾದ ರಸ್ತೆಗಳು, ಮುರಿದ ಸೇತುವೆಗಳು, ಅಪೂರ್ಣ ನಿರ್ಮಾಣ ಕಾಮಗಾರಿಗಳು ಮತ್ತು ಹಂದಿ ಜ್ವರ ಸಂಬಂಧಿತ ಸಾವು ನೋವುಗಳ ದಾಖಲೆಗಳ ಛಾಯಾಚಿತ್ರಗಳು ಹಾಗೂ ವಿಡಿಯೋ ತುಣುಕುಗಳನ್ನು 'ವಿಕಾಸ್' (ಅಭಿವೃದ್ಧಿ) ಎಂಬ ಆಕರ್ಷಕ ಟ್ಯಾಗ್ಲೈನ್ನೊಂದಿಗೆ ಹಂಚಿಕೊಳ್ಳುವುದು ಸಾಮಾನ್ಯವಾಗಿದೆ. ಗುಜರಾತಿ ಸಮಾಜದಲ್ಲಿ 'ವಿಕಾಸ್' ಎಂಬ ಸಾಮಾನ್ಯ ಪುರುಷ ಹೆಸರು ಜನಜನಿತವಾಗಿದೆ. ನವರಾತ್ರಿಯ ಹಬ್ಬದಲ್ಲಿ ಗುಜರಾತಿ ಭಾಷೆಯಲ್ಲಿ ವಿಕಾಸ್ ಗಾಂಡೋ ಥಾಯೋ ಛೇ (ಅಭಿವೃದ್ಧಿಗೆ ಹುಚ್ಚು ಹಿಡಿದಿದೆ) ಎಂದು ಹೊಸ ಹಾಡುಗಳನ್ನು ರಚಿಸಿ ಹಾಡಲಾಗುತ್ತಿದೆ.

ಆರೋಗ್ಯ, ಶಿಕ್ಷಣ ಮತ್ತು ಇತರ ಸಮಾಜ ಕಲ್ಯಾಣ ಸೂಚ್ಯಂಕಗಳು ರಾಜ್ಯದ ಮೂಲೆಯಂಚಿನ ಗಡಿಪ್ರದೇಶಗಳು ಅತ್ಯಂತ ಹೀನಾಯ ಸ್ಥಿತಿಯಲ್ಲಿವೆ ಎಂದು ತೋರಿಸುತ್ತವೆ. ಹೆಚ್ಚುತ್ತಿರುವ ನಿರುದ್ಯೋಗವು ರಾಜ್ಯದ ಒಂದು ಪ್ರಮುಖ ಸಮಸ್ಯೆಯಾಗಿ ಬೆಳೆದಿದೆ. ಒಂದು ಸಮೀಕ್ಷೆಯು ರಾಜ್ಯದಲ್ಲಿ ಶೇಕಡಾ 80% ಕ್ಕಿಂತ ಹೆಚ್ಚು ಇಂಜಿನಿಯರ್‌ಗಳು ನಿರುದ್ಯೋಗಿಗಳಾಗಿದ್ದಾರೆ ಎಂದು ಬೊಟ್ಟು ಮಾಡಿದೆ. ಇತ್ತೀಚಿನ ವರದಿಗಳ ಪ್ರಕಾರ, ಜುಲೈ 2020 ರಿಂದ ಗುಜರಾತ್‌ನಲ್ಲಿ ಸರಿಸುಮಾರು 5,974 ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಂಎಸ್‌ಎಮ್‌ಇ) ಸ್ಥಗಿತಗೊಂಡಿವೆ. ರಾಜ್ಯ ವಾಣಿಜ್ಯ ತೆರಿಗೆ ಇಲಾಖೆಯ ಅಂಕಿಅಂಶಗಳು, ಇದುವರೆಗೆ 4.05 ಲಕ್ಷ ಜಿಎಸ್‌ಟಿ ಗುರುತಿನ ಸಂಖ್ಯೆಗಳನ್ನು (ಜಿಎಸ್‌ಟಿಐಎನ್‌ಗಳು) ರದ್ದುಗೊಳಿಸಲಾಗಿದೆ ಅಥವಾ ಹಲವಾರು ವ್ಯವಹಾರಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಸೂಚಿಸುತ್ತವೆ. ಸಾಮಾಜಿಕ ವಲಯಗಳಲ್ಲಿ (ಆರೋಗ್ಯ, ಶಿಕ್ಷಣ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಕಾರ್ಮಿಕ ಕಲ್ಯಾಣ) ರಾಜ್ಯ ಜಿಡಿಪಿಯ ಶೇಕಡಾವಾರು ವೆಚ್ಚವನ್ನು ನೋಡಿದಾಗ ಭಾರತೀಯ ರಿಸರ್ವ್ ಬ್ಯಾಂಕ್ ವಾರ್ಷಿಕ ವರದಿಯು 18 ದೊಡ್ಡ ರಾಜ್ಯಗಳ ಪಟ್ಟಿಯಲ್ಲಿ ಗುಜರಾತ್ ಅತ್ಯಂತ ಕೆಳ (15 ನೇ) ಸ್ಥಾನದಲ್ಲಿದೆ ಎಂದು ಸಾರುತ್ತದೆ. ಗುಜರಾತಿನ ಆರೋಗ್ಯ ವೆಚ್ಚವು ಜಿಡಿಪಿಯ ಕೇವಲ 0.7 ಪ್ರತಿಶತದಷ್ಟಿದ್ದು, ಇದು ಈ ಕ್ಷೇತ್ರದಲ್ಲಿ ಅತ್ಯಂತ ಕಡಿಮೆ ವೆಚ್ಚ ಮಾಡುವ ಭಾರತೀಯ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯದ ಬಹುತೇಕ ಜಿಲ್ಲೆಗಳು ಬರಪೀಡಿತವಾಗಿದ್ದು ಕೃಷಿ ಮತ್ತು ಗೃಹ ಬಳಕೆಗಾಗಿ ಅಂತರ್ಜಲವನ್ನು ಅವಲಂಬಿಸಿವೆ. ಹೀಗಾಗಿ ಗ್ರಾಮೀಣ ಜನರು ಋತುಮಾನಕ್ಕನುಸಾರವಾದ ಉದ್ಯೋಗಗಳನ್ನು ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುವುದು ಅನಿವಾರ್ಯವಾಗಿದೆ. ಈ ಜನ ಅಲ್ಲಿ ಅತ್ಯಂತ ಕಡಿಮೆ ಕೂಲಿಯಲ್ಲಿ ದುಡಿಯುತ್ತಾರೆ. ಮೋದಿಯವರು ಗುಜರಾತಿನ ಸಿಎಂ ಆಗಿದ್ದ ದಶಕದ ಅವಧಿಯಲ್ಲಿ ಈ ಕೂಲಿಯ ದರ ಇಳಿಮುಖವಾಗಿದೆ. ಕಳೆದ ಐದು ವರ್ಷಗಳಿಂದ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳು ಸತತವಾಗಿ ಹೆಚ್ಚುತ್ತಿವೆ. ಫೆಬ್ರವರಿ 2020ರಲ್ಲಿ ಅಮೆರಿಕಾದ ಅಧ್ಯಕ್ಷ ಟ್ರಂಪ್ ಅಹಮದಾಬಾದಿಗೆ ಭೇಟಿ ನೀಡಿ 'ನಮಸ್ತೆ ಟ್ರಂಪ್' ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಮಾನ ನಿಲ್ದಾಣದಿಂದ ಆಗಮಿಸುವಾಗ, ಅವರಿಗೆ ನಗರದ ಕೊಳಗೇರಿಗಳು ಕಾಣಬಾರದೆಂದು ಸ್ಥಳೀಯ ನಗರಸಭೆಯು ನಾಲ್ಕು ಅಡಿ ಎತ್ತರದ ಗೋಡೆಯನ್ನು ನಿರ್ಮಿಸಿತ್ತು. ಎಲ್ಲಾ ನಗ್ನಸತ್ಯಗಳು ಗುಜರಾತ್ ಮಾದರಿಯ ಸಾಚಾತನವನ್ನು ಗೇಲಿ ಮಾಡುತ್ತವೆ.

ಗುಜರಾತ್ ಜನರ ಆರ್ಥಿಕ-ಸಾಮಾಜಿಕ ಜೀವನದ ನಿರಂತರ ಕುಸಿತವನ್ನು ಮರೆಮಾಚಲು ಆರ್‌ಎಸ್‌ಎಸ್-ಬಿಜೆಪಿ-ಸಂಘ ಪರಿವಾರವು ಹಿಂದೂ ಕೋಮುವಾದಿ ಮತಾಂಧತೆಯನ್ನು ಪರಾಕಾಷ್ಠೆಗೆ ಕೊಂಡೊಯ್ದಿದೆ. ಈ ಕೋಮು ಧ್ರುವೀಕರಣವು ತನ್ನ ಆಳುವ ವರ್ಗದ ಹಿತಾಸಕ್ತಿಗಳನ್ನು ಪೂರೈಸಲು, ಆಳುವ ಏಕಸ್ವಾಮ್ಯಾಧಿಪತಿಗಳನ್ನು ರಕ್ಷಿಸಲು ವಿನ್ಯಾಸಗೊಂಡಿದೆ. ರಾಜ್ಯದ ಮುಸ್ಲಿಂ ಅಲ್ಪಸಂಖ್ಯಾತ ಜನಸಂಖ್ಯೆಯು ವಾಸ್ತವಿಕವಾಗಿ ಜೀವನದ ಮುಖ್ಯವಾಹಿನಿಯಿಂದ ದೂರವಿದೆ. ಈಗ 'ಗುಜರಾತ್ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆ'ಯನ್ನು ಬಳಸಿಕೊಂಡು ಸಾಮಾನ್ಯ ಶ್ರಮಜೀವಿಗಳ ಐಕ್ಯತೆಯನ್ನು ಒಡೆಯಲು ಕೋಮು ವಿಷವನ್ನು ಸುರಿಯುವ ಪ್ರಕ್ರಿಯೆಗೆ ಒಂದು ಜ್ವಲಂತ ಉದಾಹರಣೆಯಾಗಿದೆ.

ಈ ಕಾಯ್ದೆಯನ್ನು ಮೊದಲು 1986ರಲ್ಲಿ ನಿರ್ದಿಷ್ಟವಾಗಿ ಧರ್ಮದ ಆಧಾರದ ಮೇಲೆ ಪ್ರತ್ಯೇಕತೆಯನ್ನು ನಿಗ್ರಹಿಸಲು ಕಾರ್ಯಗತಗೊಳಿಸಲಾಯಿತು. ನಂತರ ಇದನ್ನು ತೊಂದರೆಗೀಡಾದ ಪ್ರದೇಶಗಳ ಕಾಯ್ದೆ (1991) ಎಂಬುದರ ಬದಲಿಯಾಗಿ 'ಗುಜರಾತ್ ಪ್ರಾಹಿಬಿಷನ್ ಆಫ್ ಟ್ರಾನ್ಸ್ಫರ್ ಆಫ್ ಇಮ್ಮೂವೆಬಲ್ ಪ್ರಾಪರ್ಟಿ ಅಂಡ್ ಪ್ರಾವಿಜನ್ ಫಾರ್ ಪ್ರೊಟೆಕ್ಷನ್ ಆಫ್ ಟೆನೆಂಟ್ಸ್' ಎಂದು ತಿದ್ದುಪಡಿ ಮಾಡಲಾಯಿತು. ಈ ಕಾಯ್ದೆಯು, ಜಿಲ್ಲಾಧಿಕಾರಿಗಳು ಔಪಚಾರಿಕ ಅರ್ಜಿ ಪ್ರಕ್ರಿಯೆಯ ಮೂಲಕ "ಗಲಭೆ ಪೀಡಿತ" ಪ್ರದೇಶಗಳಲ್ಲಿ ಆಸ್ತಿ ವರ್ಗಾವಣೆಯನ್ನು ಅನುಮೋದಿಸುವಂತೆ ಕಡ್ಡಾಯಗೊಳಿಸಿದೆ. ಗಲಭೆಗಳು ಅಥವಾ ಗುಂಪು ಹಿಂಸಾಚಾರದ ಮೂಲಕ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ಉಂಟಾದಾಗ ಸಂಕಷ್ಟದಲ್ಲಿ ಆಸ್ತಿಯ ಮಾರಾಟವನ್ನು (distress sale) ತಡೆಯುವ ಮೂಲಕ ಧರ್ಮದ ಆಧಾರದ ಮೇಲೆ ಪ್ರತ್ಯೇಕತೆಯನ್ನು ನಿಗ್ರಹಿಸುವುದು ಈ ಕಾನೂನಿನ ಉದ್ದೇಶವಾಗಿತ್ತು. ಆದರೆ, ಬಿಜೆಪಿ ಆಡಳಿತದಲ್ಲಿ, ಎರಡೂ ಸಮುದಾಯಗಳು ಒಟ್ಟಿಗೆ ವಾಸಿಸುವ ಪ್ರದೇಶದಲ್ಲಿ ಹಿಂದೂ ಮಾರಾಟಗಾರರಿಂದ ಮುಸ್ಲಿಂ ಖರೀದಿದಾರರಿಗೆ ಆಸ್ತಿಯನ್ನು ವರ್ಗಾಯಿಸುವುದನ್ನು ತಡೆಯಲು ಈ ಕಾನೂನನ್ನು ದುರುಪಯೋಗಪಡಿಕೊಳ್ಳಲಾಗುತ್ತಿದೆ.

ಇದಕ್ಕೆ ಉದಾಹರಣೆಗಳು ದಂಡಿಯಾಗಿ ದೊರೆಯುತ್ತವೆ. ಕಳೆದ ಫೆಬ್ರವರಿಯ ಆರಂಭದಲ್ಲಿ ಸೂರತ್ತಿನ ಜಿಲ್ಲಾಧಿಕಾರಿಗಳು ಸಲಾಬತ್ಪುರ ಪ್ರದೇಶದಲ್ಲಿ ಹಿಂದೂ ಕುಟುಂಬವೊಂದು ಮುಸ್ಲಿಂ ಕುಟುಂಬಕ್ಕೆ ಮಾರಾಟ ಮಾಡಿದ್ದ ಮನೆಯನ್ನು ಜಪ್ತಿ ಮಾಡಿದ್ದರು. 'ಗುಜರಾತ್ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆ'ಯ ದುರುಪಯೋಗಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ಮುಸ್ಲಿಂ ಖರೀದಿದಾರರು ಸ್ಥಳಾಂತರಗೊಳ್ಳುವ ಮೊದಲು ಸಂಬಂಧಪಟ್ಟ ಅಧಿಕಾರಿಗಳ ಅಂತಿಮ ಅನುಮೋದನೆಗೆ ಕಾಯದ ಕಾರಣ ಮಾರಾಟವು ಗುಜರಾತ್ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ಉಲ್ಲಂಘಿಸಿದೆ ಎಂಬ ಆರೋಪವಿದೆ. ಸುಮಾರು ಒಂದು ವರ್ಷದ ನಂತರ, ಅಧಿಕಾರಿಗಳ ತಂಡವು ಪರಿಶೀಲನೆಗೆ ಬಂದು ಹಿಂದೂ ಕುಟುಂಬದ ನೆರೆಹೊರೆಯವರೊಂದಿಗೆ ಮಾತನಾಡಿದಾಗ ಉಂಟಾದ ಆಕ್ಷೇಪಣೆ, ವ್ಯತಿರಿಕ್ತ ಪರಿಣಾಮಕ್ಕೆ ಕಾರಣವಾಯಿತು. 15 ಸದಸ್ಯರ ಅವಿಭಕ್ತ ಕುಟುಂಬ ಈಗ ಚದುರಿ ಹೋಗಿದ್ದು, ನಗರದ ವಿವಿಧೆಡೆ ವಾಸಿಸುತ್ತಿದ್ದಾರೆ. (ಮೂಲ: ಶೆಬಾ ಪೊಸ್ಸಿಸಿಲೋವಾ ಅವರ ಇಂಡಿಯನ್ ಎಕ್ಸ್‌ಪ್ರೆಸ್ ಲೇಖನ, 13 ಫೆಬ್ರವರಿ 2025) ಇದಕ್ಕೂ ಮೊದಲು, 2018ರಲ್ಲಿ ವಡೋದರದ ಕೇಸರ್ಬಾಗ್ ಸೊಸೈಟಿಯ ನಿವಾಸಿಗಳ ವಹಿವಾಟಿಗೆ ಜಿಲ್ಲಾಧಿಕಾರಿಗಳು ಅನುಮತಿ ನೀಡಿದ್ದರೂ ಧರ್ಮದ ಆಧಾರದ ಮೇಲೆ ಹಿಂದೂ ಮಾರಾಟಗಾರರಿಂದ ಮುಸ್ಲಿಂ ಖರೀದಿದಾರರಿಗೆ ಬಂಗಲೆಯನ್ನು ವರ್ಗಾಯಿಸುವುದನ್ನು ವಿರೋಧಿಸಿದ್ದರು. ಆದರೆ 2023ರಲ್ಲಿ ಹೈಕೋರ್ಟ್ ಈ ಮಾರಾಟವನ್ನು ಎತ್ತಿಹಿಡಿದಿದೆ. ಇನ್ನೊಬ್ಬ ಮುಸ್ಲಿಂ ಮಹಿಳೆ 2018ರಲ್ಲಿ 'ಸಿಎಂ ಆವಾಸ್ ಯೋಜನೆ' ಅಡಿಯಲ್ಲಿ ತನಗೆ ಮಂಜೂರು ಮಾಡಿದ ಫ್ಲಾಟ್‌ಅನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ, ಏಕೆಂದರೆ ಸೊಸೈಟಿಯ 462 ನಿವಾಸಿಗಳಲ್ಲಿ 33 ಜನರು ಆಕೆ ಅಲ್ಲಿ ವಾಸಿಸುವುದನ್ನು ವಿರೋಧಿಸಿದ್ದರು, ನಿರಂತರವಾಗಿ ಬೆದರಿಕೆ ಹಾಕಿ ಕಿರುಕುಳ ನೀಡಿದ್ದರು. ಅದಕ್ಕೆ ಆಕೆ ಮುಸ್ಲಿಂ ಎಂಬುದೊಂದೇ ಕಾರಣ.

ಗುಜರಾತ್‌ನಲ್ಲಿ ಮುಸ್ಲಿಮರನ್ನು ಪ್ರಾದೇಶಿಕವಾಗಿ ಪ್ರತ್ಯೇಕಗೊಳಿಸಲು ಈ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ ಎಂದು ಈ ಘಟನೆಗಳು ಸಾಬೀತು ಮಾಡುತ್ತವೆ. ಮುಸ್ಲಿಂ ಪ್ರದೇಶಗಳು ಮತ್ತು ಅವುಗಳ ನೆರೆಯ ಹಿಂದೂ ಪ್ರದೇಶಗಳನ್ನು "ಪ್ರಕ್ಷುಬ್ಧ" ಎಂದು ಗೊತ್ತುಪಡಿಸಿ ಕಾಯ್ದೆಯನ್ನು ಹಿಂಬಾಗಿಲಿನಿಂದ ಜಾರಿಗೊಳಿಸುವುದು ಇಲ್ಲಿ ಸಾಮಾನ್ಯವಾಗಿದೆ.

ಪ್ರಾಚೀನ ಕಾಲದಿಂದಲೂ ಗುಜರಾತ್ ಸೌಹಾರ್ದ ಪರಂಪರೆಯ ತಾಣವಾಗಿತ್ತು ಎಂಬುದಕ್ಕೆ ಉಲ್ಲೇಖಗಳಿವೆ. ಇಲ್ಲಿ ಹಿಂದೂಗಳು, ಮುಸ್ಲಿಮರು ಮತ್ತು ಇತರ ಸಮುದಾಯಗಳು ಸೌಹಾರ್ದತೆ ಮತ್ತು ಭ್ರಾತೃತ್ವದಿಂದ ದೀರ್ಘಕಾಲದಿಂದ ಒಟ್ಟಿಗೆ ವಾಸಿಸುತ್ತಾ ಬಂದಿದ್ದಾರೆ. ವಸಂತರಾವ್ ಹೆಗೆಸ್ತೆ ಹಾಗೂ ರಾಜಾಬಲಿ ಲಖಾನಿ ಅವರು ಕೋಮು ಸೌಹಾರ್ದತೆಯನ್ನು ಕಾಪಾಡುವುದಕ್ಕಾಗಿ 1946ರ ಗಲಭೆಯಲ್ಲಿ ಹುತಾತ್ಮರಾದರು. ಆದರೆ ಸ್ವಾತಂತ್ರ್ಯಾನಂತರ, ಆಳುವ ಬೂರ್ಜ್ವಾ ನಾಯಕರು ಇಂತಹ ಕೋಮು ಸೌಹಾರ್ದತೆಯ ತಾಣವನ್ನು ಕೋಮು ಗಲಭೆಗಳ ಕೇಂದ್ರಬಿಂದುವನ್ನಾಗಿ ಬದಲಾಯಿಸಿದರು. ಅದರ ಹಿಂದೆ ಎರಡು ಉದ್ದೇಶಗಳಿದ್ದವು: 1. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧದ ಹೋರಾಟವನ್ನು ದಿಕ್ಕುತಪ್ಪಿಸುವುದು. 2.ಬಹುಸಂಖ್ಯಾತ ಹಿಂದೂ ಮತಗಳ ಕ್ರೋಢೀಕರಣ. ಅಧಿಕಾರ ಸ್ಥಾನಕ್ಕೆ ಏರುವುದಕ್ಕಾಗಿ ಹಿಂದಿನ ಆಡಳಿತಾರೂಢ ಕಾಂಗ್ರೆಸ್ ಅಥವಾ ಅದರ ನಂತರದ ಎಲ್ಲಾ ಬಣಗಳು ರಾಜ್ಯದಲ್ಲಿ ಕೋಮುಗಲಭೆಗಳು ನಿರಂತರವಾಗಿ ಹೊಗೆಯಾಡುವಂತೆ ನೋಡಿಕೊಂಡವು. ಒಮ್ಮೆ ಇಂತಹ ಕೋಮು ಘರ್ಷಣೆಗಳು ಭುಗಿಲೆದ್ದರೆ, ಹಿಂದೂ ಕೋಮುವಾದ-ಮೂಲಭೂತವಾದವನ್ನೇ ಏಕೈಕ ರಾಜಕೀಯ ಬಂಡವಾಳವಾಗಿಸಿಕೊಂಡಿರುವ ಆರ್‌ಎಸ್‌ಎಸ್-ಬಿಜೆಪಿ-ಸಂಘ ಪರಿವಾರ, ಅದರ ಗರಿಷ್ಠ ಲಾಭವನ್ನು ಪಡೆಯಲು ತಡ ಮಾಡುವುದಿಲ್ಲ. ಕಾಂಗ್ರೆಸ್ ಸಹ ಆರ್‌ಎಸ್‌ಎಸ್‌ನ ಬೆಂಬಲವನ್ನು ಪಡೆಯಲು ಕೋಮು ಗಲಭೆಗಳಿಗೆ ಅವಕಾಶ ಮಾಡಿಕೊಟ್ಟಿತು. ಇದಲ್ಲದೆ, ಕಾಂಗ್ರೆಸ್ ನಾಯಕರು ಕೋಮುವಾದಿ ಮನಸ್ಥಿತಿಯಿಂದ ಮುಕ್ತರಲ್ಲ.

ಆದ್ದರಿಂದ, ಕಾಂಗ್ರೆಸ್ ಮತ್ತು ಬಿಜೆಪಿ ಎರಡರ ಆಡಳಿತದ ಅವಧಿಯಲ್ಲೂ, ಅಹಮದಾಬಾದ್ ನಗರದ ಹಳೆಯ ಗೋಡೆಗಳ ಪುರಾತತ್ವ ಶಾಸ್ತ್ರದ ರಚನೆಯನ್ನು ಯಥಾಸ್ಥಿತಿಯಲ್ಲಿ ಇಡುವ ಸಲುವಾಗಿ ತರಲಾದ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಳ್ಳಲಾಯಿತು. ಆಸ್ತಿಗಳ ಮಾರಾಟಕ್ಕೆ ಮಾತ್ರವಲ್ಲ ಯಾವುದೇ ಕಟ್ಟಡದ ದುರಸ್ತಿ ಮಾಡಲೂ ಸಂಬಂಧಿಸಿದ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು ಎಂದು ಈ ಕಾಯ್ದೆಯನ್ನು ವ್ಯಾಖ್ಯಾನಿಸಲಾಯಿತು. ರಿಯಲ್ ಎಸ್ಟೇಟ್ ಬಿಲ್ಡರ್‌ಗಳು ಅತ್ಯಂತ ಅಗ್ಗದ ದರದಲ್ಲಿ ಹಿಂದೂ-ಮುಸ್ಲಿಂ ಎನ್ನದೇ ಎಲ್ಲರ ಮನೆಗಳು ಮತ್ತು ನಿವೇಶನಗಳನ್ನು ವಶಪಡಿಸಿಕೊಳ್ಳಲು ಈ ಕಾಯ್ದೆಯನ್ನು ಅನ್ವಯಿಸಲಾಯಿತು. ಈ ಎರಡೂ ಕೋಮಿನ ಶ್ರೀಮಂತ ಬಿಲ್ಡರ್‌ಗಳು ಇದರ ಲಾಭವನ್ನು ಪಡೆದಿದ್ದಾರೆ.

ಈಗ ಹಿಂದುತ್ವ ಬ್ರಿಗೇಡ್ ಈ ಕಾಯ್ದೆಯ ವ್ಯಾಪ್ತಿಯನ್ನು ಅಹಮದಾಬಾದ್‌ನ ಆಚೆಗೆ ವಿಸ್ತರಿಸಲು ಪ್ರಯತ್ನಿಸುತ್ತಿದೆ, ಇದರ ಉದ್ದೇಶ ಮೊದಲನೆಯದಾಗಿ ಕೋಮುಗಳ ನಡುವಿನ ಅಂತರವನ್ನು ಇನ್ನಷ್ಟು ಹೆಚ್ಚಿಸುವುದು ಮತ್ತು ಎರಡನೆಯದಾಗಿ ಜನ ತಮ್ಮ ಮನೆಗಳನ್ನು ರಿಯಲ್ ಎಸ್ಟೇಟ್ ಕುಳಗಳಿಗೆ ಅತ್ಯಂತ ಅಗ್ಗದ ದರದಲ್ಲಿ ಮಾರಾಟ ಮಾಡುವ ಪರಿಸ್ಥಿತಿ ನಿರ್ಮಾಣ ಮಾಡುವುದು.

ಎರಡನೆಯ ಮಹಾಯುದ್ಧಕ್ಕಿಂತ ಮೊದಲು ಯಹೂದಿಗಳನ್ನು ಹಣಿಯಲು ಜರ್ಮನಿಯ ನಾಜಿಗಳು ಹಾಗೂ ಇಟಲಿಯ ಫ್ಯಾಸಿಸ್ಟರು ಮಾಡಿದಂತೆ, ರಾಜ್ಯದ ಬಿಜೆಪಿ ಸರ್ಕಾರ ಕೆಲವು ಆಯ್ದ ಪ್ರದೇಶಗಳಲ್ಲಿ ಮುಸ್ಲಿಂ ಜನರನ್ನು ಬಂಧಿಸಲು ಗುಜರಾತ್ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ದುರ್ಬಳಕೆ ಮಾಡುತ್ತಿದೆ. ಆದ್ದರಿಂದ, ಎಲ್ಲಾ ಪ್ರಜಾಸತ್ತಾತ್ಮಕ ಮನಸ್ಸಿನ ಜನರು ಒಂದಾಗಿ ಇಂತಹ ಹೀನ ಮನಸ್ಥಿತಿಯ ಸರ್ಕಾರದ ವಿರುದ್ಧ ಹೋರಾಟಗಳನ್ನು ಕಟ್ಟಬೇಕು. ಗುಜರಾತ್ ಪ್ರಕ್ಷುಬ್ಧ ಪ್ರದೇಶಗಳ ಕಾಯ್ದೆಯನ್ನು ರದ್ದುಗೊಳಿಸಬೇಕು ಎಂದು ಒತ್ತಾಯಿಸಬೇಕು ಹಾಗೂ ಯಾವುದೇ ಜಾತಿ, ಮತ ಮತ್ತು ಧರ್ಮಗಳ ಆಧಾರದ ಮೇಲೆ ಭೂಮಿ, ಮನೆ, ಫ್ಲಾಟ್‌ಗಳು ಅಥವಾ ಅಪಾರ್ಟ್‌ಮೆಂಟುಗಳನ್ನು ಮಾರಲು ಹಾಗೂ ಕೊಳ್ಳಲು ಯಾವುದೇ ನಿರ್ಬಂಧ ಹೇರಬಾರದು ಎಂದು ಆಗ್ರಹಿಸಬೇಕು.

ಜತೆಗೆ, ಧರ್ಮ, ಜಾತಿ, ಪಂಥ ಅಥವಾ ಜನಾಂಗದ ಭೇದವಿಲ್ಲದೆ ಸರಿಯಾದ ಚಿಂತನೆಯುಳ್ಳ ಜನರು ತಮ್ಮಲ್ಲಿನ ಮೇಲುಕೀಳಿನ ಭಾವನೆಗಳನ್ನು ತೊಡೆದು ಹಾಕಬೇಕು. ಮತ್ತು ಆಳುವ ಬಂಡವಾಳಶಾಹಿ ವರ್ಗ ಮತ್ತು ಅದರ ರಾಜಕೀಯ ಪ್ರತಿನಿಧಿಗಳ ವಿರುದ್ಧ ಎಲ್ಲಾ ರೀತಿಯ ಧಾರ್ಮಿಕ-ಕೋಮು ಜಾತಿವಾದಿ ಮನಸ್ಥಿತಿಯಿಂದ ಮುಕ್ತವಾದ, ಉನ್ನತ ಸಂಸ್ಕೃತಿ ಮತ್ತು ನೈತಿಕತೆಯ ಆಧಾರದ ಮೇಲೆ ಪ್ರಬಲವಾದ ಒಗ್ಗಟ್ಟಿನ ನಿರಂತರ ಚಳುವಳಿಯನ್ನು ಮುನ್ನಡೆಸಲು ಪಣತೊಡಬೇಕಿದೆ.

## ಸಾಮ್ರಾಜ್ಯಶಾಹಿಗಳ ಕುತಂತ್ರದ ಹೊಸ ತಾಣ

08ನೇ ಪುಟದಿಂದ ಸೇನಾಪಡೆಗಳನ್ನು ಸಂಪೂರ್ಣವಾಗಿ ವಿಸರ್ಜಿಸುವುದು ದಶಕಗಳ ಪ್ರಕ್ಷುಬ್ಧತೆಯಿಂದ ಹೊರಬರುವ ಏಕೈಕ ಮಾರ್ಗವಾಗಿದೆ.

ಸರಿಯಾದ ಕ್ರಾಂತಿಕಾರಿ ಪಕ್ಷ ಮತ್ತು ನಾಯಕತ್ವವನ್ನು ಬೆಳೆಸುವ ಮೂಲಕ ಆಯಾ ಬೂರ್ಜ್ವಾ ಆಡಳಿತದ ವಿರುದ್ಧ ಕ್ರಾಂತಿಕಾರಿ ಕಾರ್ಮಿಕ ವರ್ಗದ ಹೋರಾಟವನ್ನು ಕಟ್ಟುವುದು ಅನಿವಾರ್ಯವಾಗಿದೆ. ದಮನಕಾರಿ ಸಾಮ್ರಾಜ್ಯಶಾಹಿ-ಬಂಡವಾಳಶಾಹಿ ಶಕ್ತಿಗಳ ಅಪವಿತ್ರ ನಂಟು ಮತ್ತು ಮೈತ್ರಿಯ ವಿರುದ್ಧವಾಗಿ, ಶ್ರಮಜೀವಿಗಳ ನಡುವೆ ಏಕತೆ ಮತ್ತು ಭ್ರಾತೃತ್ವ ಮತ್ತು ಜನಶಕ್ತಿಯ ಹೊರಹೊಮ್ಮುವಿಕೆ ಈ ಸಮಯದ ತುರ್ತು ಅಗತ್ಯವಾಗಿದೆ.

# ವಿದ್ಯುತ್ ಖಾಸಗೀಕರಣದ ವಿರುದ್ಧ ರಾಷ್ಟ್ರವ್ಯಾಪಿ ಹೋರಾಟ ರೂಪಿಸಿ!

## ಅಖಿಲ ಭಾರತ ವಿದ್ಯುತ್ ಬಳಕೆದಾರರ ಸಂಘ(AIECA)ದ ರಾಷ್ಟ್ರಮಟ್ಟದ ಪ್ರತಿಭಟನೆಯ ಕರೆ

ಇತ್ತೀಚೆಗೆ ದೆಹಲಿಯಲ್ಲಿ ನಡೆದ ವಿದ್ಯುತ್ ಬಳಕೆದಾರರ ಬೃಹತ್ ಪ್ರತಿಭಟನೆ ಮತ್ತು ರಾಷ್ಟ್ರೀಯ ಸಮಾವೇಶವು ವಿದ್ಯುತ್ ಕ್ಷೇತ್ರದ ಖಾಸಗೀಕರಣ ಮತ್ತು ದೇಶಾದ್ಯಂತ ಸ್ಮಾರ್ಟ್ ಪ್ರಿಪೇಯ್ಡ್ ಮೀಟರ್‌ಗಳ ಜಾರಿಗೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿತು. ಅಖಿಲ ಭಾರತ ವಿದ್ಯುತ್ ಬಳಕೆದಾರರ ಸಂಘ(AIECA)ದ ನೇತೃತ್ವದಲ್ಲಿ ಮಾರ್ಚ್ 4 ರಂದು ಜಂತರ್ ಮಂತರ್‌ನಲ್ಲಿ ಪ್ರತಿಭಟನಾ ಸಭೆ ಮತ್ತು ಮಾರ್ಚ್ 5 ರಂದು ಷಾ ಆಡಿಟೋರಿಯಂನಲ್ಲಿ ರಾಷ್ಟ್ರೀಯ ಸಮಾವೇಶ ನಡೆಯಿತು. ದೇಶದ 20 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಸಾವಿರಕ್ಕೂ ಹೆಚ್ಚು ವಿದ್ಯುತ್ ಬಳಕೆದಾರರು ಈ ಪ್ರತಿಭಟನೆಗಳಲ್ಲಿ ಪಾಲ್ಗೊಂಡಿದ್ದರು.



ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟದ ಅಧ್ಯಕ್ಷರಾದ ಶೈಲೇಂದ್ರ ದುಬೆ ಅವರು ಮಾತನಾಡುತ್ತಿರುವುದು

ಮಾರ್ಚ್ 4 ರಂದು ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನಾ ಸಭೆ ಜರುಗಿತು. ಪಾರ್ಲಿಮೆಂಟ್ ರ್‍ಯಾಲಿಯಲ್ಲಿ ವಿದ್ಯುತ್ ವಲಯದ ಖಾಸಗೀಕರಣ, ಸ್ಮಾರ್ಟ್ ಪ್ರಿಪೇಯ್ಡ್ ಮೀಟರ್‌ಗಳ ಹೇರಿಕೆ ಮತ್ತು ವಿವಾದಾತ್ಮಕ ವಿದ್ಯುತ್ ಮಸೂದೆ 2022 ಅನ್ನು ವಿರೋಧಿಸಲು AIECA ನೀಡಿದ ಕರೆಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಈ ಪ್ರತಿಭಟನಾ ಸಭೆಯ ಅಧ್ಯಕ್ಷತೆಯನ್ನು ಸಂಘದ ಅಖಿಲ ಭಾರತ ಅಧ್ಯಕ್ಷರಾದ ಸ್ವಪನ್ ಘೋಷ್ ಅವರು ವಹಿಸಿದ್ದರು.


ವಿವಿಧ ರಾಜ್ಯಗಳ ಪ್ರತಿನಿಧಿಗಳು

ಅಸ್ಸಾಂ ವಿದ್ಯುತ್ ವಿತರಣಾ ಕಂಪನಿಯ ಮಾಜಿ ಉಪ ಪ್ರಧಾನ ವ್ಯವಸ್ಥಾಪಕರಾದ ಬಿಮಲ್ ದಾಸ್ ಅವರು ಖಾಸಗೀಕರಣ ಮತ್ತು ಸ್ಮಾರ್ಟ್ ಮೀಟರ್‌ಗಳ ಅಳವಡಿಕೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಎಂಜಿನಿಯರ್‌ಗಳು, ನೌಕರರು ಮತ್ತು ಬಳಕೆದಾರರ ಒಗ್ಗಟ್ಟಿನ ನಿರ್ಣಾಯಕ ಹೋರಾಟದ ಅಗತ್ಯವನ್ನು ಒತ್ತಿ ಹೇಳಿದರು.

ನಂತರ ಅಖಿಲ ಭಾರತ ಉಪಾಧ್ಯಕ್ಷರಾದ ಕೆ. ಸೋಮಶೇಖರ್ ಅವರು ಮಾತನಾಡುತ್ತಾ, "ವಿದ್ಯುತ್ ಕ್ಷೇತ್ರವು ಒಂದು ಸೇವಾ ವಲಯವಾಗಿದೆ. ಆದರೆ ಇದನ್ನು ಇಂದು ಲಾಭಬಡುಕ ಖಾಸಗಿ ಕಾರ್ಪೊರೇಟ್ ತಿಮಿಂಗಿಲಗಳ ಕೈಗೆ ವರ್ಗಾಯಿಸಲಾಗುತ್ತಿದೆ. ಇದರಿಂದಾಗಿ ದೇಶದಾದ್ಯಂತ ವಿದ್ಯುತ್ ದರ ಏರಿಕೆಯು ಲಂಗುಲಗಾಮಿಲ್ಲದೆ ನಡೆಯುತ್ತಿದೆ. ವಿದ್ಯುತ್ ವಲಯವನ್ನು ಸೇವಾ ಕ್ಷೇತ್ರದಿಂದ ಹೊರತಂದು ಗರಿಷ್ಠ ಲಾಭಗಳಿಸುವ ಉದ್ಯಮವಾಗಿ ಪರಿವರ್ತಿಸಲಾಗುತ್ತಿದೆ. ಇವೆಲ್ಲವೂ ಲಾಭಬಡುಕ ಖಾಸಗಿ ಕಂಪೆನಿಗಳ ಹಿತಾಸಕ್ತಿಗಾಗಿ ನಡೆಯುತ್ತಿವೆ. ಅದಕ್ಕಾಗಿ ಪ್ರಬಲ ಹೋರಾಟ ಕಟ್ಟಲು ಎಲ್ಲಾ ಹಂತಗಳಲ್ಲಿ ವಿದ್ಯುತ್ ಬಳಕೆದಾರರ ಸಮಿತಿ ರಚಿಸಬೇಕು" ಎಂದು ಕರೆ ನೀಡಿದರು.

ಅಖಿಲ ಭಾರತ ಕಾರ್ಯಕಾರಿ ಅಧ್ಯಕ್ಷರಾದ ಸಮರ್ ಸಿನ್ಹಾ ಅವರು ಮಾತನಾಡುತ್ತಾ, "1990ರ ದಶಕದಲ್ಲಿ ಪ್ರಾರಂಭವಾದ ಉದಾರೀಕರಣ, ಜಾಗತೀಕರಣ ನೀತಿಗಳಿಂದಾಗಿ 2003ರ ವಿದ್ಯುತ್ ಕಾಯ್ದೆಯು 1948ರ ವಿದ್ಯುತ್ ಸರಬರಾಜು ಕಾಯ್ದೆಯನ್ನು ಬದಲಾಯಿಸಿತು. ಇದರಿಂದಾಗಿ ವಿವಿಧ ರಾಜ್ಯಗಳ ವಿದ್ಯುತ್ ಸರಬರಾಜು ಕಂಪನಿಗಳನ್ನು ಖಾಸಗಿ ವಲಯದ ಸಹಭಾಗಿತ್ವಕ್ಕೆ ಒಪ್ಪಿಸಲಾಗಿದೆ. ಟಾಟಾ, ಅದಾನಿ, ಅಂಬಾನಿಯಂತಹ ಕೈಗಾರಿಕಾಪತಿಗಳಿಗೆ ಮತ್ತಷ್ಟು ಲಾಭ ಮಾಡಲು ಕೇಂದ್ರ ಬಿಜೆಪಿ ಸರ್ಕಾರವು ವಿದ್ಯುತ್ ಕ್ಷೇತ್ರವನ್ನು ಸಂಪೂರ್ಣವಾಗಿ ಖಾಸಗೀಕರಣ ಮಾಡುತ್ತಿದೆ" ಎಂದು ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ವಿ.ಜ್ಞಾನಮೂರ್ತಿ ಅವರು ಮಾತನಾಡುತ್ತಾ, ಕರ್ನಾಟಕದಲ್ಲಿ ಸಹ ವಿದ್ಯುತ್ ಖಾಸಗೀಕಣದ ಪ್ರಕ್ರಿಯೆಗಳು ಆರಂಭವಾಗಿವೆ ಎಂದರು. ಬೆಂಗಳೂರಿನಲ್ಲಿ ಸ್ಮಾರ್ಟ್ ಮೀಟರ್ ಅಳವಡಿಸುವ ಕಾಂಗ್ರೆಸ್ ರಾಜ್ಯ ಸರ್ಕಾರದ ನಿರ್ಧಾರವನ್ನು ಉಗ್ರವಾಗಿ ಖಂಡಿಸುತ್ತಾ ವಿದ್ಯುತ್ ದರ ಏರಿಕೆಯ ಪ್ರಸ್ತಾಪವನ್ನು ಕೈಬಿಡಬೇಕು ಎಂದು ಆಗ್ರಹಿಸಿದರು.

ವಿವಿಧ ರಾಜ್ಯಗಳ ವಿದ್ಯುತ್ ಬಳಕೆದಾರರ ಸಂಘಗಳ ನಾಯಕರುಗಳು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಮಾರ್ಚ್ 5ರಂದು ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ವೇಣುಗೋಪಾಲ್ ಭಟ್ ಅವರು ಮುಖ್ಯ ಗೊತ್ತುವಳಿಯನ್ನು ಮಂಡಿಸಿದರು.

ಉತ್ತರ ಪ್ರದೇಶ ವಿದ್ಯುತ್ ನಿಗಮದ ಮಾಜಿ ಮುಖ್ಯ ಎಂಜಿನಿಯರ್ ಮತ್ತು ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟದ ಅಧ್ಯಕ್ಷರಾದ ಶೈಲೇಂದ್ರ ದುಬೆ ಅವರು ರಾಷ್ಟ್ರೀಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ವಿದ್ಯುತ್ ಕಾಯ್ದೆ ತಿದ್ದುಪಡಿ ಮಸೂದೆಯ ವಿರುದ್ಧ ಕೇಂದ್ರ ಸರ್ಕಾರವು ಹಿಂದೆಂದೂ ಕಂಡರಿಯದ ಹೋರಾಟವನ್ನು ಎದುರಿಸುತ್ತಿದೆ. ಈ ಮಸೂದೆಯನ್ನು ಎರಡು ಲೋಕಸಭಾ ಅಧಿವೇಶನಗಳಲ್ಲಿ ಐದು ಬಾರಿ ಮಂಡಿಸಿದ್ದರೂ, ಅದನ್ನು ಅಂಗೀಕರಿಸಲು ಸಾಧ್ಯವಾಗಲಿಲ್ಲ. ಇದು ಈ ಕರಾಳ ಮಸೂದೆಗೆ ಎದುರಾಗಿರುವ ಗಣನೀಯ ಪ್ರತಿರೋಧವನ್ನು ಎತ್ತಿ ತೋರಿಸುತ್ತದೆ. ಮುಂಬರುವ ದಿನಗಳಲ್ಲಿ ರೈತರು, ವಿದ್ಯುತ್ ನೌಕರರು ಮತ್ತು ನೀವು ಗ್ರಾಹಕರು ಒಟ್ಟಾಗಿ ದೆಹಲಿಯ ರಾಮಲೀಲಾ ಮೈದಾನದಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಂಘಟಿತರಾಗಿ ಪ್ರತಿರೋಧಿಸಬೇಕು ಎಂದು ಕರೆ ನೀಡಿದರು.

ಅಖಿಲ ಭಾರತ ವಿದ್ಯುತ್ ಎಂಜಿನಿಯರ್‌ಗಳ ಒಕ್ಕೂಟದ ಅಧ್ಯಕ್ಷರಾದ ಕೆ. ಅಶೋಕ್ ರಾವ್ ಅವರು ಮಾತನಾಡುತ್ತಾ, ವಿದ್ಯುತ್ ಕೈಗೆಟುಕುವಿಕೆಯ ವಿಷಯದಲ್ಲಿ 'ಎರಡು ಭಾರತ'ಗಳು ಉದಯಿಸುತ್ತಿರುವುದನ್ನು ಎತ್ತಿ ತೋರಿಸಿದರು. ವಿತರಣಾ ವಲಯದ ಖಾಸಗೀಕರಣವು ಸಾಮಾನ್ಯ ಕುಟುಂಬಗಳ ಬಿಕ್ಕಟ್ಟನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ ಎಂದು ಎಚ್ಚರಿಸಿದರು. ವಿದ್ಯುತ್ ವಿತರಣಾ ವಲಯದಲ್ಲಿನ ಪೈಪೋಟಿಯಿಂದ ಬಳಕೆದಾರರಿಗೆ ಯಾವುದೇ ಪ್ರಯೋಜನವಿಲ್ಲ ಎಂದು ಅವರು ಒತ್ತಿ ಹೇಳಿದರು. ನಂತರ ವಿದ್ಯುತ್ ವಲಯದ ಖಾಸಗೀಕರಣದ ಸಂಭಾವ್ಯ ಋಣಾತ್ಮಕ ಪರಿಣಾಮಗಳು ಮತ್ತು ಸ್ಮಾರ್ಟ್ ಮೀಟರ್‌ಗಳ ದುಷ್ಪರಿಣಾಮಗಳನ್ನು ಮುಂದಿಡುತ್ತಾ, ಅಂತರರಾಷ್ಟ್ರೀಯ ಉದಾಹರಣೆಗಳು ಮತ್ತು ವಿಶ್ವ ಬ್ಯಾಂಕ್ ದತ್ತಾಂಶಗಳನ್ನು ಉಲ್ಲೇಖಿಸಿದರು. ಅವರು ಸೌರ ವಿದ್ಯುತ್ ಬಳಕೆಯನ್ನು ಹೆಚ್ಚಿಸುವ ಅಗತ್ಯವನ್ನು ಪ್ರತಿಪಾದಿಸಿದರು.

ತಮಿಳುನಾಡು ವಿದ್ಯುತ್ ಮಂಡಳಿಯ ಮಾಜಿ ಎಂಜಿನಿಯರ್ ಎಸ್. ಗಾಂಧಿ ಅವರು ಸ್ಮಾರ್ಟ್ ಮೀಟರ್‌ಗಳ ತಾಂತ್ರಿಕ ಅಂಶಗಳ ಬಗ್ಗೆ ವಿವರಿಸಿದರು. ಅವುಗಳ ದತ್ತಾಂಶ ಸಂಗ್ರಹಣಾ ಸಾಮರ್ಥ್ಯ ಮತ್ತು ಉದ್ಯೋಗ ನಷ್ಟದ ಸಂಭವನೀಯತೆಯನ್ನು ಒತ್ತಿ ಹೇಳಿದರು. ಪ್ರಸ್ತುತ ವಿದ್ಯುತ್ ನೀತಿಗಳು ಸಾಮಾನ್ಯ ಜನರ ಹಿತಾಸಕ್ತಿಗಿಂತ ಖಾಸಗಿ ಸಂಸ್ಥೆಗಳ ಲಾಭಕ್ಕೆ ಆದ್ಯತೆ ನೀಡುತ್ತಿವೆ ಎಂದು ಅವರು ತಿಳಿಸಿದರು. ಮತ್ತು ಸ್ಮಾರ್ಟ್ ಮೀಟರ್‌ಗಳ ದೂರ ನಿಯಂತ್ರಣದ ಅಂಶದ ಬಗ್ಗೆ ಎಚ್ಚರಿಕೆ ನೀಡಿದರು.

ದಾಮೋದರ್ ವ್ಯಾಲಿ ಕಾರ್ಪೋರೇಶನ್ನಿನ ಮಾಜಿ ಮುಖ್ಯ ಎಂಜಿನಿಯರ್ ಎ.ಕೆ. ಜೈನ್ ಅವರು ತಮ್ಮ ಅನುಭವವನ್ನು ಹಂಚಿಕೊಂಡರು ಮತ್ತು ಕೇಂದ್ರ ಸರ್ಕಾರದ ಖಾಸಗೀಕರಣ ಕಾರ್ಯಸೂಚಿಯನ್ನು ವಿರೋಧಿಸಲು ಬಳಕೆದಾರರು ಹಾಗೂ ನೌಕರರ ಒಗ್ಗಟ್ಟಿನ ಹೋರಾಟ ಮತ್ತು ತಳಮಟ್ಟದ ಚಳವಳಿಯ ಅಗತ್ಯವನ್ನು ಒತ್ತಿ ಹೇಳಿದರು.

ರಾಷ್ಟ್ರೀಯ ಸಮಾವೇಶದ ಪ್ರಮುಖ ನಿರ್ಣಯಗಳಲ್ಲಿ ಏಪ್ರಿಲ್ 1ರಿಂದ 7ರವರೆಗೆ ವಿದ್ಯುತ್ ಕಚೇರಿಗಳ ಮುಂದೆ ಅಖಿಲ ಭಾರತ ಪ್ರತಿಭಟನಾ ಸಪ್ತಾಹವನ್ನು ನಡೆಸುವಂತೆ ಘೋಷಿಸಲಾಯಿತು. ಇದಲ್ಲದೆ, ಏಪ್ರಿಲ್ 1ರಿಂದ ಜೂನ್ 14ರವರೆಗೆ ಸಾರ್ವಜನಿಕರಿಂದ ರಾಷ್ಟ್ರವ್ಯಾಪಿ ಸಹಿ ಸಂಗ್ರಹ ಅಭಿಯಾನವನ್ನು ನಡೆಸುವುದು ಮತ್ತು ಕೊನೆಯದಾಗಿ ಕೇಂದ್ರ ಮತ್ತು ರಾಜ್ಯಗಳ ಇಂಧನ ಸಚಿವರಿಗೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮನವಿ ಸಲ್ಲಿಸುವ ನಿರ್ಧಾರವನ್ನು ಸಹ ಕೈಗೊಳ್ಳಲಾಯಿತು. ಖಾಸಗೀಕರಣ ಮತ್ತು ಸ್ಮಾರ್ಟ್ ಪ್ರಿಪೇಯ್ಡ್ ಮೀಟರ್‌ಗಳನ್ನು ವಿರೋಧಿಸಿ, ರಾಷ್ಟ್ರೀಯ ವಿದ್ಯುತ್ ನೌಕರರು ಮತ್ತು ಎಂಜಿನಿಯರ್‌ಗಳ ಸಮನ್ವಯ ಸಮಿತಿಯು, ಜೂನ್ 26, 2025 ರಂದು ಕರೆ ನೀಡಿದ ರಾಷ್ಟ್ರವ್ಯಾಪಿ ಮುಷ್ಕರಕ್ಕೆ ಸಭೆಯು ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು.



ಅಖಿಲ ಭಾರತ ಅಧ್ಯಕ್ಷರಾದ ಸ್ವಪನ್ ಘೋಷ್ ಅವರು ಮಾತನಾಡುತ್ತಿರುವುದು

ಪಶ್ಚಿಮ ಬಂಗಾಳ, ಒಡಿಶಾ, ಬಿಹಾರ, ದೆಹಲಿ, ಹರಿಯಾಣ, ಕರ್ನಾಟಕ, ತಮಿಳುನಾಡು, ಪುದುಚೇರಿ, ಜಾರ್ಖಂಡ್, ಉತ್ತರ ಪ್ರದೇಶ, ಅಸ್ಸಾಂ, ಗುಜರಾತ್, ಮಧ್ಯಪ್ರದೇಶ, ತ್ರಿಪುರಾ ಹಾಗೂ ವಿವಿಧ ರಾಜ್ಯಗಳ ಪ್ರತಿನಿಧಿಗಳು ತಮ್ಮ ರಾಜ್ಯಗಳಲ್ಲಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ವಿವರಿಸಿದರು.

ಸಮಾವೇಶದ ಕೊನೆಯಲ್ಲಿ ಅಧ್ಯಕ್ಷರಾದ ಸ್ವಪನ್ ಘೋಷ್ ಅವರು ಭಾಗವಹಿಸಿದ ಎಲ್ಲರಿಗೂ ಧನ್ಯವಾದ ಹೇಳುತ್ತಾ, ರಾಜ್ಯಗಳಿಗೆ ಹಿಂತಿರುಗಿದ ತಕ್ಷಣ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಕುರಿತ ಮಾಹಿತಿಯನ್ನು ಜನಸಾಮಾನ್ಯರ ನಡುವೆ ಹರಡುವಂತೆ ಹಾಗೂ ಪ್ರಬಲವಾದ ಬಳಕೆದಾರರ ಚಳುವಳಿ ಕಟ್ಟುವಂತೆ ಕರೆ ನೀಡಿದರು.

## ಬಳ್ಳಾರಿ ನಾಗರಿಕ ಹೋರಾಟ ಸಮಿತಿಯಿಂದ ಪ್ರತಿಭಟನೆ

ಬಳ್ಳಾರಿ ನಾಗರಿಕ ಹೋರಾಟ ಸಮಿತಿಯಿಂದ ಮಹಾನಗರಪಾಲಿಕೆಯ ಆವರಣದಲ್ಲಿ ನಗರದ ಜ್ವಲಂತ ಸಮಸ್ಯೆಗಳ ವಿರುದ್ಧ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಶುದ್ಧ ಕುಡಿಯುವ ನೀರು ಒದಗಿಸಬೇಕು, ವಡ್ಡರಬಂಡೆಯ ರಾಜಕಾಲುವೆ ತುರ್ತಾಗಿ ದುರಸ್ತಿಗೊಳಿಸಬೇಕು, ಬೀದಿ ನಾಯಿ ಬಿಡಾಡಿ ದನಗಳ ಹಾವಳಿ ನಿಯಂತ್ರಿಸಬೇಕು, ಹಾಳಾಗಿರುವ ರಸ್ತೆಗಳನ್ನು ದುರಸ್ತಿಗೊಳಿಸಬೇಕು, ಮುಂತಾದ ಬೇಡಿಕೆಗಳಿಗಾಗಿ ಪ್ರತಿಭಟಿಸಲಾಯಿತು.




## ಇತ್ತೀಚಿನ ಪೋಕ್ಸೊ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿಗೆ ಪ್ರತಿಕ್ರಿಯೆ

ಎಐಎಂಎಸ್‌ಎಸ್ ನ ಅಖಿಲ ಭಾರತ ಸಮಿತಿಯ ರಾಷ್ಟ್ರ ಕಾರ್ಯದರ್ಶಿ ಕಾಮ್ರೇಡ್ ಛಭಿ ಮೊಹಂತಿ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ: ಇತ್ತೀಚಿನ ಪೋಕ್ಸೊ ಪ್ರಕರಣದಲ್ಲಿ ಅಲಹಾಬಾದ್ ಹೈಕೋರ್ಟ್ ನೀಡಿದ ತೀರ್ಪಿಗೆ ಪ್ರತಿಕ್ರಿಯಿಸಿದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಈ ತೀರ್ಪನ್ನು ಸ್ತ್ರೀ ದ್ವೇಷಿ, ಮಹಿಳಾ ವಿರೋಧಿ ಮತ್ತು ಪುರುಷಪ್ರಧಾನ ಎಂದು ಬಲವಾಗಿ ಖಂಡಿಸಿದೆ. ಈ ಪ್ರಕರಣವು ಉತ್ತರ ಪ್ರದೇಶದಲ್ಲಿ ಅಪ್ರಾಪ್ತ ಬಾಲಕಿಯ ಮೇಲಿನ ದಾಳಿಯನ್ನು ಒಳಗೊಂಡಿದೆ. ಅಲ್ಲಿ ನ್ಯಾಯಾಲಯವು ಸ್ತನಗಳನ್ನು ಹಿಡಿಯುವುದು ಅಥವಾ ಪೈಜಾಮಾ ದಾರವನ್ನು ಕತ್ತರಿಸುವಂತಹ ಕ್ರಮಗಳು ಅತ್ಯಾಚಾರ ಅಥವಾ ಅತ್ಯಾಚಾರದ ಪ್ರಯತ್ನವಲ್ಲ. ಆದರೆ, ತೀವ್ರಗೊಂಡ ಲೈಂಗಿಕ ದೌರ್ಜನ್ಯ ಎಂದು ಪರಿಗಣಿಸಬಹುದು ಎಂದು ತೀರ್ಪು ನೀಡಿದೆ. ಈ ತೀರ್ಪು ಮಹಿಳೆಯರ ಮತ್ತು ಬಾಲಕಿಯರ ಮೇಲೆ ಅಪರಾಧ ಎಸಗುವ ಅಪರಾಧಿಗಳಿಗೆ ಧೈರ್ಯ ತುಂಬುತ್ತದೆ ಮತ್ತು ಅವರ ದುಷ್ಟ ಮನಸ್ಥಿತಿಯನ್ನು ಹೆಚ್ಚಿಸುತ್ತದೆ. ಈ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಸ್ವಯಂಪ್ರೇರಿತ ಮಧ್ಯಪ್ರವೇಶದ ಮೂಲಕ ತೀರ್ಪನ್ನು ತಕ್ಷಣ ಮರುಪರಿಶೀಲಿಸಬೇಕೆಂದು ಎಐಎಂಎಸ್‌ಎಸ್ ಒತ್ತಾಯಿಸುತ್ತದೆ.

ಪಶ್ಚಿಮ ಬಂಗಾಳ:

# ಪೋಲೀಸ್ ಕಸ್ಟಡಿಯಲ್ಲಿ ಎಐಡಿಎಸ್‌ಓ ಕಾರ್ಯಕರ್ತೆಯರ ಮೇಲೆ ಅಮಾನವೀಯ ಚಿತ್ರಹಿಂಸೆ

(ಮಾರ್ಚ್ 1 ರಂದು ಪಶ್ಚಿಮ ಬಂಗಾಳದ ಜಾಧವ್‌ಪುರ ವಿಶ್ವವಿದ್ಯಾಲಯಕ್ಕೆ ಆಡಳಿತಾರೂಢ ಟಿ.ಎಂ.ಸಿ ಸರ್ಕಾರದ ಶಿಕ್ಷಣ ಮಂತ್ರಿಗಳು ಭೇಟಿ ನೀಡಿದ ಸಂದರ್ಭದಲ್ಲಿ, ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ಶೀಘ್ರವಾಗಿ ನಡೆಸಬೇಕೆಂದು ವಿದ್ಯಾರ್ಥಿಗಳು ಅವರನ್ನು ಘೇರಾವ್ ಮಾಡಿದರು. ಆ ವಿದ್ಯಾರ್ಥಿಗಳ ಗುಂಪಿನ ಮೇಲೆ ಶಿಕ್ಷಣ ಸಚಿವರ ಕಾರು ಹರಿದ ಪರಿಣಾಮವಾಗಿ ಇಬ್ಬರು ವಿದ್ಯಾರ್ಥಿಗಳು ಗಂಭೀರವಾಗಿ ಗಾಯಗೊಂಡು, ಅತಿಯಾದ ರಕ್ತಸ್ರಾವದಿಂದಾಗಿ ಆಸ್ಪತ್ರೆಗೆ ದಾಖಲಾಗಬೇಕಾಯಿತು. ಈ ಘಟನೆಯನ್ನು ಖಂಡಿಸಿ ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ ನೀಡಿತ್ತು. ಈ ಸಂದರ್ಭದಲ್ಲಿ ಪ್ರತಿಭಟನಾ ನಿರತ ಕಾರ್ಯಕರ್ತೆಯರನ್ನು ಬಂಧಿಸಿ ಪೋಲೀಸರು ನಡೆಸಿದ ದೌರ್ಜನ್ಯದ ಕುರಿತು ಈ ವರದಿ)

ಆ ಜೈಲೇನೂ ಗ್ವಾಟೆನಾಮೊದಂತಹ ಕುಖ್ಯಾತ



ಮಹಿಳಾ ಪ್ರತಿಭಟನಾಕಾರರ ಮೇಲೆ ಪುರುಷ ಗೂಂಡಾಗಳ ದಾಳಿ

ಜೈಲೂ ಅಲ್ಲ, ಅಥವಾ ನಾಜಿಗಳು ಕಟ್ಟಿದ ಯಹೂದಿಗಳ ಬಂಧನದ ಯಾತನಾ ಶಿಬಿರವೂ ಅಲ್ಲ. ಆದರೂ ಸಹ ಅಲ್ಲಿ ಮಹಿಳೆಯರ ಮೇಲೆ ಕ್ರೂರವಾಗಿ ದೌರ್ಜನ್ಯ ನಡೆಯಿತು. ಅಲ್ಲಿ ಮಾನವ ಹಕ್ಕುಗಳನ್ನು ಧ್ವಂಸ ಮಾಡಿ, ಮಹಿಳೆಯರನ್ನು ಅತ್ಯಂತ ನಿರ್ದಯ ರೀತಿಯಲ್ಲಿ ಅಪಮಾನಿಸಲಾಯಿತು. ಇದೇ ಮಾರ್ಚ್ 3 ನೇ ತಾರೀಖು ನಡೆದ ಈ ಕರಾಳ ಘಟನೆಗೆ ಸಾಕ್ಷಿಯಾದದ್ದು ಪಶ್ಚಿಮ ಬಂಗಾಳದ ಮಿಡ್ನಾಪುರ ಕೋತ್ವಾಲಿ ಪೊಲೀಸ್ ಠಾಣೆ. ಅನ್ಯಾಯದ ವಿರುದ್ಧ ಹೋರಾಡುವ ಕೆಲವು ಧೀರ ಯುವತಿಯರ ಮೇಲೆ, ಬಂಡವಾಳಶಾಹಿ ವ್ಯವಸ್ಥೆಯ ಸರ್ಕಾರಿ ಕಾವಲುಭಟರು ದಟ್ಟಡವಿಯ ತೋಳಗಳಂತೆ ಮುಗಿಬಿದ್ದು, ದೌರ್ಜನ್ಯವನ್ನು ನಡೆಸಿ ನಾಚಿಕೆಗೇಡಿನ ಕ್ರೌರ್ಯವನ್ನು ಮೆರೆದರು.

ಕಾನೂನು ಮತ್ತು ಸುವ್ಯವಸ್ಥೆಯ ರಕ್ಷಕರು ಎಂದೆನಿಸಿಕೊಂಡವರು ಸಹ ಹೇಗೆ ಅತ್ಯಂತ ಅಸಭ್ಯವಾಗಿ ವರ್ತಿಸಬಲ್ಲರೆಂಬುದಕ್ಕೆ, ಎಐಡಿಎಸ್‌ಓ ಸಂಘಟನೆಯ ಸಂಗಾತಿಗಳಾದ ತನುಶ್ರೀ ಬೇಜ್, ಸುಶ್ರೀತಾ ಸೊರೇನ್, ರಾನುಶ್ರೀ ಬೇಜ್ ಮತ್ತು ಬರ್ನಾಲಿ ನಾಯಕ್ ಎಂಬ ಯುವ ಕಾರ್ಯಕರ್ತೆಯರು ಅಂದು ಪ್ರತ್ಯಕ್ಷವಾಗಿ ಸಾಕ್ಷಿಯಾದರು. ಅವರುಗಳ ಮೇಲೆ ಪೊಲೀಸರಿಂದ ನಡೆದ ಮೃಗೀಯ ವರ್ತನೆಯ ವಿವರಗಳನ್ನು ಪದಗಳಲ್ಲಿ ವ್ಯಕ್ತಪಡಿಸುವುದು ಅಸಾಧ್ಯವಾದ ಕೆಲಸವೇ ಸರಿ.

ಅಷ್ಟಕ್ಕೂ ಅವರು ಮಾಡಿದ ತಪ್ಪೇನು? ಅವರೇನೂ ಪೊಲೀಸ್ ಪಡೆಗಳ ಮೇಲೆ ಕಲ್ಲೆಸೆದಿರಲಿಲ್ಲ ಅಥವಾ ಯಾವುದೇ ಕಾನೂನುಬಾಹಿರವಾದ ಚಟುವಟಿಕೆಗಳಲ್ಲಿ ತೊಡಗಿರಲಿಲ್ಲ. ಬದಲಿಗೆ ಆಡಳಿತ ಪಕ್ಷದ ನಾಯಕರ ಮನಸ್ಥಿತಿಗೆ ಕನ್ನಡಿಯಂತಿದ್ದ ಜಾಧವ್‌ಪುರ ಘಟನೆಯನ್ನು ಖಂಡಿಸಿ, ಎಐಡಿಎಸ್‌ಓ ಮಾರ್ಚ್ 3ರಂದು ರಾಜ್ಯದ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಬೇಕೆಂದು ಕರೆ ನೀಡಿತ್ತು. ಈ ಪ್ರತಿಭಟನೆಯನ್ನು ಬೆಂಬಲಿಸುವಂತೆ ಎಐಡಿಎಸ್‌ಓ ಕಾರ್ಯಕರ್ತರು ವಿವಿಧ ಕಾಲೇಜುಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಪ್ರಚಾರವನ್ನು ನಡೆಸುತ್ತಿದ್ದರು. ಹಾಗೆಯೇ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಅವಿರತವಾಗಿ ಹೋರಾಟ ನಡೆಸಿ, ಅದರಲ್ಲಿ ಯಶಸ್ವಿಯಾದ ಭಾರತದ ನವೋದಯದ ಹರಿಕಾರರಾದ ಈಶ್ವರಚಂದ್ರ ವಿದ್ಯಾಸಾಗರರ ಹೆಸರಿನಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾಲಯದ ಮುಂದೆಯೂ ಈ ವಿದ್ಯಾರ್ಥಿನಿಯರು ಪ್ರಚಾರವನ್ನು ನಡೆಸುತ್ತಿದ್ದರು.

ಈ ಸಂದರ್ಭದಲ್ಲಿ ಆಡಳಿತಾರೂಢ ಟಿಎಂಸಿಯ ವಿದ್ಯಾರ್ಥಿ ಘಟಕವಾದ ತೃಣಮೂಲ ಛಾತ್ರ ಪರಿಷತ್‌ನ ಬಾಡಿಗೆ ಗೂಂಡಾಗಳು, ಪೊಲೀಸರೊಂದಿಗೆ ಸೇರಿ ಎಐಡಿಎಸ್‌ಓ ಕಾರ್ಯಕರ್ತರ ಮೇಲೆ ದಾಳಿ ಮಾಡಿದರು. ಹಾಗೆಯೇ ಕಾರ್ಯಕರ್ತರ ಬಳಿಯಿದ್ದ ಬ್ಯಾನರ್‌ಗಳು ಮತ್ತು ಫೆಸ್ಟೂನ್‌ಗಳನ್ನು ಕಸಿದುಕೊಂಡು, ತೀವ್ರವಾಗಿ ಥಳಿಸಿದರು. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಮಹಿಳಾ ಪ್ರತಿಭಟನಾಕಾರರ ಮೇಲೆ ಪುರುಷ ಗೂಂಡಾಗಳು ದಾಳಿ ಮಾಡುತ್ತಿದ್ದರೂ ಸಹ, ಪೊಲೀಸರು ನಾಚಿಕೆಗೆಟ್ಟವರಂತೆ ಈ ಗೂಂಡಾಗಳ ಪರವಾಗಿ ನಿಂತರು. ಯಾವುದೇ ಪ್ರಚೋದನೆಯಿಲ್ಲದೇ ಇದ್ದರೂ ಸಹ ಪೊಲೀಸರು ಉದ್ದೇಶಪೂರ್ವಕವಾಗಿ ಎಐಡಿಎಸ್‌ಓನ ಕಾರ್ಯಕರ್ತರನ್ನು ಬಂಧಿಸಿದರು. ಬಂಧನದ ವೇಳೆಯಲ್ಲಿ, ಪುರುಷ ಪೊಲೀಸ್ ಅಧಿಕಾರಿಗಳು ಮಹಿಳಾ ಕಾರ್ಯಕರ್ತೆಯರೊಂದಿಗೆ ಅನುಚಿತವಾಗಿ ವರ್ತಿಸಿದರು. ಅಲ್ಲದೇ ಒಬ್ಬ ಕಾರ್ಯಕರ್ತೆಯ ಎದೆ ಮತ್ತು ಬೆನ್ನಿಗೆ ಥಳಿಸಿದರು. ಇದರಿಂದಾಗಿ ಆಕೆ ಪ್ರಜ್ಞೆ ತಪ್ಪುವಂತಾಯಿತು. ಈ ಘಟನೆಯಲ್ಲಿ ಗಾಯಗೊಂಡ ಕಾರ್ಯಕರ್ತೆಯರಿಗೆ ಯಾವುದೇ ವೈದ್ಯಕೀಯ ಚಿಕಿತ್ಸೆಯನ್ನು ಕೊಡಿಸದೆಯೇ ನೇರವಾಗಿ ಪೊಲೀಸ್ ಕಸ್ಟಡಿಯಲ್ಲಿ ಇರಿಸಲಾಯಿತು. ನಂತರ ಅವರನ್ನು ಮೇದಿನಿಪುರದ ಮಹಿಳಾ ಕೋತ್ವಾಲಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು.

ಅಲ್ಲಿ ನಾಲ್ಕು ಬಂಧಿತ ಮಹಿಳಾ ಕಾರ್ಯಕರ್ತೆಯರನ್ನು ನಡೆಸಿಕೊಂಡ ರೀತಿ ಮತ್ತು ನೀಡಿದ ಹಿಂಸೆಯು, ಅತ್ಯಂತ ಕ್ರೂರ ಮತ್ತು ಅಮಾನವೀಯವಾಗಿತ್ತು. ಇದು ನಾಗರಿಕ ಸಮಾಜದಲ್ಲಿ ಅಕ್ಷರಗಳಲ್ಲಿ ಬರೆದು ವ್ಯಕ್ತಪಡಿಸಲು ಸಾಧ್ಯವಾಗದಂತಹ ಮಟ್ಟದ್ದು. ಬಂಧನದ ಮೆಮೋಗೆ ಸಹಿಯನ್ನು ಪಡೆಯುವ ಸಂದರ್ಭದಲ್ಲಿ, ಪೊಲೀಸ್ ಅಧಿಕಾರಿಗಳು ಉರಿಯುವ ಮೇಣದ ಬತ್ತಿಗಳಿಂದ ಕರಗುತ್ತಿರುವ ಮೇಣವನ್ನು ಅವರ ಕೈ ಮತ್ತು ಕಾಲುಗಳ ಮೇಲೆ ಹನಿಹನಿಯಾಗಿ ಸುರಿಸಿದರು. ಒಬ್ಬ ಮಹಿಳಾ ಕಾರ್ಯಕರ್ತೆಯ ದೇಹದ ಮೇಲೆ ನಾಲ್ಕು ಪೊಲೀಸ್ ಅಧಿಕಾರಿಗಳು ನಿಂತು ಬೆಲ್ಟ್‌ಗಳಿಂದ ಆಕೆಯ ಮೇಲೆ ಕ್ರೂರವಾಗಿ ಪ್ರಹಾರ ನಡೆಸಿದರು!! ಅಲ್ಲದೇ ಭಾರೀ ತೂಕದ ಬೂಟುಗಳಿಂದ ಆಕೆಯ ಮುಖಕ್ಕೆ ಹೊಡೆದರು. ಇದಲ್ಲದೇ ಆಕೆಯ ತಲೆಕೂದಲನ್ನು ಹಿಡಿದೆಳೆದು ಆದರ ಮೂಲಕ ಇಡೀ ದೇಹವನ್ನು ನೆಲದಿಂದ ಮೇಲಕ್ಕೆ ಎತ್ತಿ ಹಿಡಿದು ಅಂಗಾಲುಗಳಿಗೆ ಥಳಿಸಿದರು. ಇದು ಇಷ್ಟಕ್ಕೆ ನಿಲ್ಲದೇ ಪೊಲೀಸ್ ಅಧಿಕಾರಿಗಳು ಈ ಕಾರ್ಯಕರ್ತೆಯರನ್ನು ಥಳಿಸುವಾಗ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡವರಂತೆ, ಅಶ್ಲೀಲ ಬಾಲಿವುಡ್ ಹಾಡುಗಳನ್ನು ಕೇಳುತ್ತಾ ವಿಕೃತ ಆನಂದವನ್ನು ಪಡೆದರು. ಜೊತೆಗೆ ಸುಶ್ರೀತಾ ಸೊರೇನ್‌ರನ್ನು ಅವಳ ಬುಡಕಟ್ಟು ಸಮುದಾಯದ ಕುರಿತು ಕೀಳುಮಟ್ಟದ ಮತ್ತು ಅಶ್ಲೀಲ ಟೀಕೆಗಳ ಮೂಲಕ ಗೇಲಿ ಮಾಡಲಾಯಿತು. ಇವರೆಲ್ಲರಿಂದಲೂ ಬಲವಂತವಾಗಿ ಸುಳ್ಳು ಲಿಖಿತ ಹೇಳಿಕೆಗಳನ್ನು ಪಡೆಯಲು ಪ್ರಯತ್ನಪಟ್ಟರು. ಜೊತೆಗೆ ಮುಂಬರುವ ದಿನಗಳಲ್ಲಿಯೂ ಸಹ ಇತರೆ ಕಾರ್ಯಕರ್ತರಿಗೆ ಇದೇ ರೀತಿಯಲ್ಲಿ ಹಿಂಸೆಯನ್ನು ನೀಡುವುದಾಗಿ ಬಹಿರಂಗವಾಗಿ ಬೆದರಿಸಿದರು, ಅಲ್ಲದೇ ಅವರನ್ನು ಕಸ್ಟಡಿಯಲ್ಲಿಯೇ ಕೊಲೆ ಅಥವಾ ನಾಪತ್ತೆ ಮಾಡುವುದಾಗಿ ಧಮಕಿ ಹಾಕಿದ್ದಾರೆ. ಈ ನಾಲ್ವರ ಮೇಲೆ ನಡೆಸಿದ ಹಿಂಸಾಕೃತ್ಯದ ಎಲ್ಲಾ ಸಾಕ್ಷ್ಯಗಳನ್ನು ಅಳಿಸುವ ಸಲುವಾಗಿ ಅವರ ಇಚ್ಛೆಗೆ ವಿರುದ್ಧವಾಗಿ, ತೀವ್ರ ವಿರೋಧದ ನಡುವೆಯೂ ಬಲವಂತವಾಗಿ ಸ್ನಾನ ಮಾಡಿಸಲಾಯಿತು. ಆರಂಭದಲ್ಲಿ, ಬಂಧಿತ ವಿದ್ಯಾರ್ಥಿಗಳನ್ನು ರಾತ್ರಿಯಲ್ಲಿ ಬಿಡುಗಡೆ ಮಾಡುವುದಿಲ್ಲ ಎಂದು ಪೊಲೀಸರು ಹೇಳಿದ್ದರು. ಆದಾಗ್ಯೂ, ಸಂಪೂರ್ಣವಾಗಿ ಪೂರ್ವಯೋಜಿತ ರೀತಿಯಲ್ಲಿ ಈ ನಾಲ್ವರು ಮಹಿಳಾ ಕಾರ್ಯಕರ್ತರನ್ನು ಮಧ್ಯರಾತ್ರಿ 2 ಗಂಟೆಗೆ, ಕತ್ತಲೆಯಿಂದ ಆವೃತವಾದ ನಿರ್ಜನವಾದ ರಸ್ತೆಯಲ್ಲಿ ಬಿಡುಗಡೆ ಮಾಡಲಾಯಿತು. ಇಂತಹ ಕೃತ್ಯ ಎಸಗಲು ಬೇಕಾದ ವಿಕೃತ ಮನಸ್ಥಿತಿಯನ್ನು ನಾವು ಊಹಿಸಲಾದರೂ ಸಾಧ್ಯವೇ?

ಈ ಘಟನೆಯ ಕುರಿತು ಎಐಡಿಎಸ್‌ಓ ತಕ್ಷಣವೇ ಪತ್ರಿಕಾಗೋಷ್ಠಿಯನ್ನು ಕರೆಯಿತು. ಅಲ್ಲಿ ಘಟನೆಯಲ್ಲಿ ದೌರ್ಜನ್ಯಕ್ಕೊಳಗಾದ ಯುವತಿಯರು ತಮ್ಮ ಭೀಕರ ಅನುಭವವನ್ನು ಮಾಧ್ಯಮಗಳ ಮುಂದೆ ವಿವರಿಸಿದರು. ಈ ರೀತಿಯ ಕ್ರೂರ ಘಟನೆಯ ವಿವರವನ್ನು ಕೇಳಿದ ನಂತರ ಮಾಧ್ಯಮದವರೂ ಸಹ ಸಂಪೂರ್ಣವಾಗಿ ಆಘಾತಕ್ಕೊಳಗಾದರು, ಅಕ್ಷರಶ: ಮೂಕರಾದರೆಂದರೂ ಅತಿಶಯೋಕ್ತಿಯಲ್ಲ!

ಈ ಘಟನೆಯಿಂದ ಆಳುವ ಬಂಡವಾಳಶಾಹಿ ವರ್ಗದ ಪಾದಸೇವೆ ಮಾಡುವಲ್ಲಿ ನಿರತವಾಗಿರುವ, ಯಾವುದೇ ಪಕ್ಷವಾದರೂ ಸಹ ತಾನು ಅಧಿಕಾರದಲ್ಲಿ ಉಳಿಯುವ ಸಲುವಾಗಿ ನ್ಯಾಯಸಮ್ಮತವಾದ ಪ್ರತಿಭಟನೆಗಳನ್ನು, ದೌರ್ಜನ್ಯ ಮತ್ತು ದಮನಕಾರಿ ಮಾರ್ಗಗಳ ಮೂಲಕ ಹತ್ತಿಕ್ಕಲು ಹಿಂಜರಿಯುವುದಿಲ್ಲ ಎಂಬುದು ಮತ್ತೊಮ್ಮೆ ಸ್ಪಷ್ಟವಾಯಿತು.

ಈ ದಾಳಿಯು ಕೇವಲ ನಮ್ಮ ಸಂಘಟನೆಯ ಕಾರ್ಯಕರ್ತರ ಮೇಲೆ ಮಾತ್ರವಲ್ಲ, ಬದುಕುವ ಮೂಲಭೂತ ಹಕ್ಕಿನ ಮೇಲೆ ಹಾಗೂ ಅದರ ಪರವಾಗಿ ಮಾತನಾಡುವ ಎಲ್ಲರ ಮೇಲೂ ನಡೆದ ದಾಳಿಯಾಗಿದೆ ಎಂದು ಎಐಡಿಎಸ್‌ಓ ಬಲವಾಗಿ ಟೀಕಿಸಿದೆ. ಹಾಗೆಯೇ ಈ ಘಟನೆಯನ್ನು ತೀವ್ರವಾಗಿ ಖಂಡಿಸುವಂತೆ ಇಡೀ ವಿದ್ಯಾರ್ಥಿ ಸಮುದಾಯ ಮತ್ತು ಎಲ್ಲಾ ಪ್ರಜಾಸತ್ತಾತ್ಮಕ ಮನೋಭಾವವುಳ್ಳ



ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡವರಂತೆ ಥಳಿಸುತ್ತಿರುವ ಪೊಲೀಸ್ ಅಧಿಕಾರಿಗಳು

ಜನತೆಗೆ ಕರೆ ನೀಡಿದೆ. ಹಾಗೆಯೇ ಈ ವಿಷಯದಲ್ಲಿ ಉನ್ನತ ಅಧಿಕಾರಿಗಳು ತಕ್ಷಣವೇ ಮಧ್ಯ ಪ್ರವೇಶಿಸಿ ದೌರ್ಜನ್ಯ ಎಸಗಿದ ಪೊಲೀಸರಿಗೆ ನಿದರ್ಶನೀಯ ಶಿಕ್ಷೆಯಾಗುವುದನ್ನು ಖಾತ್ರಿಪಡಿಸಬೇಕೆಂದು ಒತ್ತಾಯಿಸಿದೆ.

# ರಾಜ್ಯ ಸರ್ಕಾರದ ಹಾಲು, ವಿದ್ಯುತ್ ದರ ಏರಿಕೆ ಖಂಡಿಸಿ ಪ್ರತಿಭಟನೆ

ರಾಜ್ಯದಲ್ಲಿ ಮತ್ತೆ ಹಾಲಿನ ದರ ಲೀಟರಿಗೆ ರೂ. 4 ಏರಿಕೆ ಮತ್ತು ವಿದ್ಯುತ್ ದರವನ್ನು ಮತ್ತೆ ಏರಿಕೆ ಮಾಡಿರುವುದನ್ನು ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸುತ್ತದೆ.

ಹೈನುಗಾರರ ಉತ್ಪಾದನಾ ವೆಚ್ಚ ಹೆಚ್ಚಾಗಿದೆ ಎಂಬುದು ನಿಜವೇ. ಇದನ್ನು ಕಡಿಮೆ ಮಾಡಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಪಶು ಆಹಾರ, ಮೇವು, ಪಶು ವೈದ್ಯಕೀಯ ವೆಚ್ಚ ಮೊದಲಾದ ಹೈನುಗಾರಿಕೆಯ ಒಳಸುಳಿಗಳ ವೆಚ್ಚವನ್ನು ಸರ್ಕಾರ ಕಡಿತ ಮಾಡಬೇಕಿತ್ತು. ಬದಲಿಗೆ ಪ್ರತಿಬಾರಿಯೂ ವೆಚ್ಚದ ಹೊರೆಯನ್ನು ಸಾಮಾನ್ಯ ಗ್ರಾಹಕರ ಮೇಲೆ ವರ್ಗಾಯಿಸುವುದು ಜನ ವಿರೋಧಿ ನೀತಿಯಾಗಿದೆ.

ಇನ್ನೊಂದೆಡೆ ವಿದ್ಯುತ್ ದರವನ್ನು ಮತ್ತೆ ಪರಿಷ್ಕರಣೆ ಮಾಡಲಾಗಿದೆ. ಸದ್ಯಕ್ಕೆ ಗೃಹಜ್ಯೋತಿ ಯೋಜನೆಯ ಕಾರಣಕ್ಕೆ ಇದರಿಂದ ಬಹುಪಾಲು ಗ್ರಾಹಕರಿಗೆ ಸಮಸ್ಯೆ ಆಗದೇ ಇರಬಹುದು. ಆದರೆ ವಾಣಿಜ್ಯ ಮತ್ತು ಸಣ್ಣ ಕೈಗಾರಿಕೆಗಳಿಗೆ ಇದು ಹೊರೆಯಾಗಲಿದೆ.




ಕೆಎಂಎಫ್ ಮತ್ತು ವಿದ್ಯುತ್ ಕಂಪನಿಗಳ ದಕ್ಷತೆಯನ್ನು ಹೆಚ್ಚಿಸಿ, ಸೋರಿಕೆ, ಭ್ರಷ್ಟಾಚಾರ, ದುಂದುವೆಚ್ಚ ನಿಯಂತ್ರಣ ಮಾಡುವ ಕಡೆಗೆ ಸರ್ಕಾರ ಗಮನ ಹರಿಸದೇ ಇರುವುದು ಖಂಡನೀಯ. ಹಾಲು ಮತ್ತು ವಿದ್ಯುತ್ ದರ ಏರಿಕೆಗಳು ಇನ್ನಿತರ ಉತ್ಪನ್ನಗಳ ಮೇಲೆ ಪರಿಣಾಮ ಬೀರಿ ಬೆಲೆ ಏರಿಕೆಯ ವಿಷಚಕ್ರಕ್ಕೆ ಕಾರಣವಾಗಲಿದೆ.




ಕಳೆದ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿ ವಿರುದ್ಧದ ಹೋರಾಟದಲ್ಲಿ ಬೆಲೆ ಏರಿಕೆ ಒಂದು ಪ್ರಮುಖ ಅಸ್ತ್ರವಾಗಿತ್ತು ಎಂಬುದನ್ನು ಅದು ಮರೆತಂತಿದೆ. ಜನತೆ ಇದನ್ನು ಒಪ್ಪುವುದಿಲ್ಲ ಎಂದು ಒತ್ತಿಹೇಳಲು ಬಯಸುತ್ತೇವೆ ಮತ್ತು ಈ ದರ ಏರಿಕೆಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಆಗ್ರಹಿಸುತ್ತೇವೆ.

ಕಾರ್ಮಿಕ ದೃಷ್ಟಿಕೋನ
Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

# ಪ್ರತಿಭಟನೆಯ ಧ್ವನಿ ಎತ್ತುವ ಹಕ್ಕು ಪ್ರಜಾಪ್ರಭುತ್ವದ ಜೀವಾಳ

**– ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ**


ಪ್ರಜಾಸತ್ತಾತ್ಮಕ ಹಕ್ಕುಗಳು, ನಾಗರಿಕ ಹಕ್ಕುಗಳು ಮತ್ತು ಮಾನವ ಹಕ್ಕುಗಳ ಕುರಿತ ರಾಷ್ಟ್ರೀಯ ಮಟ್ಟದ ನಾಗರಿಕರ ಸಮಾವೇಶವು ದಿನಾಂಕ 30.03.2025ರಂದು ನವದೆಹಲಿಯ ಘಾಲಿಬ್ ಇನ್‌ಸ್ಟಿಟ್ಯೂಟ್ ಸಭಾಂಗಣದಲ್ಲಿ ಯಶಸ್ವಿಯಾಗಿ ನೆರವೇರಿತು. ಸಿಪಿಡಿಆರ್‌ಎಸ್ (ಪ್ರಜಾತಾಂತ್ರಿಕ ಹಕ್ಕುಗಳು ಮತ್ತು ಧರ್ಮ ನಿರಪೇಕ್ಷತೆ ರಕ್ಷಣಾ ಸಮಿತಿ) ಈ ಸಮಾವೇಶವನ್ನು ಸಂಘಟಿಸಿತ್ತು.

ಭಾರತದಲ್ಲಿ ಮಾನವ ಹಕ್ಕುಗಳ ಅವನತಿಯು ಜಾಗತಿಕ ಶ್ರೇಯಾಂಕಗಳಲ್ಲಿ ಪ್ರತಿಫಲಿಸುತ್ತದೆ. ವಿಶ್ವಸಂಸ್ಥೆಯ ಮಾನವ ಸ್ವಾತಂತ್ರ್ಯ ಸೂಚ್ಯಂಕ 2023 ರಲ್ಲಿ, 165 ದೇಶಗಳಲ್ಲಿ ಭಾರತವು 109ನೇ ಸ್ಥಾನದಲ್ಲಿದೆ, 2015 ಮತ್ತು 2023 ರ ನಡುವೆ ಅದರ ಒಟ್ಟಾರೆ ಅಂಕವು 9% ರಷ್ಟು ಕಡಿಮೆಯಾಗಿದೆ. ಅಂಕಿ ಅಂಶಗಳು ಭೀಕರ ಚಿತ್ರಣವನ್ನು ನೀಡುತ್ತವೆ: 2021 ರ ಒಂದೇ ವರ್ಷದಲ್ಲಿ 31,677 ಅತ್ಯಾಚಾರ ಪ್ರಕರಣಗಳು ದಾಖಲಾಗಿವೆ ಮತ್ತು 2022 ರಲ್ಲಿ ಮಹಿಳೆಯರ ವಿರುದ್ಧ 4.45 ಲಕ್ಷ ಅಪರಾಧಗಳು ವರದಿಯಾಗಿವೆ. ಕಸ್ಟಡಿ ಹಿಂಸೆ ವ್ಯಾಪಕವಾಗಿ ಮುಂದುವರೆದಿದೆ, ರಾಷ್ಟ್ರೀಯ ಮಾನವ ಹಕ್ಕು ಆಯೋಗ ಕೇವಲ 2022 ರ ಮೊದಲ ಒಂಬತ್ತು ತಿಂಗಳಲ್ಲಿ ಪೊಲೀಸ್ ಕಸ್ಟಡಿಯಲ್ಲಿ 147 ಸಾವುಗಳು, ನ್ಯಾಯಾಂಗ ಬಂಧನದಲ್ಲಿ 1,882 ಸಾವುಗಳು ಮತ್ತು 119 ನ್ಯಾಯಾಂಗೇತರ ಹತ್ಯೆಗಳನ್ನು ದಾಖಲಿಸಿದೆ. ಆಘಾತಕಾರಿ ಸಂಗತಿಯೆಂದರೆ, ಭಾರತದ 5.5 ಲಕ್ಷ ಜೈಲು ಕೈದಿಗಳಲ್ಲಿ 77% ರಷ್ಟು ಮಂದಿ ಜಾಮೀನು ಪಡೆದಿದ್ದರೂ ಇನ್ನೂ ಜೈಲುಗಳಲ್ಲಿ ನರಳುತ್ತಿದ್ದಾರೆ.


ವಿವಿಧ ರಾಜ್ಯಗಳ ಪ್ರತಿನಿಧಿಗಳು

ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯಿದೆ (ಯುಎಪಿಎ), ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಮತ್ತು ಸಾರ್ವಜನಿಕ ಭದ್ರತಾ ಕಾಯ್ದೆ (ಪಿಎಸ್‌ಎ) ಯಂತಹ ದಮನಕಾರಿ ಕಾನೂನುಗಳು, ಸಿಬಿಐ ಮತ್ತು ಇಡಿ ಯಂತಹ ತನಿಖಾ ಸಂಸ್ಥೆಗಳ ದುರುಪಯೋಗ ಜನರಲ್ಲಿ ಭಯವನ್ನು ಹುಟ್ಟಿಸಿವೆ. ಮಣಿಪುರದಲ್ಲಿ 175 ಜನರು ಕೊಲ್ಲಲ್ಪಟ್ಟಿದ್ದಾರೆ ಮತ್ತು 60,000ಕ್ಕೂ ಹೆಚ್ಚು ಜನರು ಸ್ಥಳಾಂತರಗೊಂಡಿದ್ದಾರೆ. ತಿಂಗಳುಗಳೇ ಕಳೆದರೂ ಮಣಿಪುರ ಜನಾಂಗೀಯ ಕಲಹಕ್ಕೆ ಪರಿಹಾರ ಲಭಿಸಿಲ್ಲ. ಇಂತಹ ಹಿನ್ನೆಲೆಯಲ್ಲಿ ಸಿಪಿಡಿಆರ್‌ಎಸ್ ನವದೆಹಲಿಯಲ್ಲಿ ಈ ಸಮಾವೇಶವನ್ನು ಹಮ್ಮಿಕೊಂಡಿತ್ತು.

ಸಮಾವೇಶದಲ್ಲಿ ಮಾತನಾಡಿದ ಗಣ್ಯರು ದೇಶದಲ್ಲಿ ಮಾನವ ಹಕ್ಕುಗಳು ಮತ್ತು ಧರ್ಮ ನಿರಪೇಕ್ಷತೆಯ ಉಲ್ಲಂಘನೆಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಾಧೀಶರಾದ ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು, ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಾಧೀಶರಾದ ನ್ಯಾಯಮೂರ್ತಿ ಎ. ಕೆ. ಪಟ್ನಾಯಕ್ ಮುಖ್ಯ ಭಾಷಣಕಾರರಾಗಿದ್ದರು. ಅತಿಥಿಗಳಾಗಿ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಶ್ರೀ ಪ್ರಶಾಂತ್ ಭೂಷಣ್, ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಡಾ. ಆದಿತ್ಯ ಸೋಂಧಿ, ಹಿರಿಯ ಪತ್ರಕರ್ತ ಶ್ರೀ ಪರಂಜೋಯ್ ಗುಹಾ ಠಾಕುರ್ತಾ, ಸಾಮಾಜಿಕ ಕಾರ್ಯಕರ್ತ ಶ್ರೀ ಕುಮಾರ್ ಪ್ರಶಾಂತ್, ವಿಜ್ಞಾನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತ ಶ್ರೀ ಗೌಹರ್ ರಜಾ, ಸಾಮಾಜಿಕ ಕಾರ್ಯಕರ್ತ ಶ್ರೀ ಜೋಸೆಫ್ ಮ್ಯಾಥ್ಯೂ, ಸುಪ್ರೀಂ ಕೋರ್ಟ್‌ನ ವಕೀಲ, ಬರಹಗಾರ ಮತ್ತು ಸಾಮಾಜಿಕ ಕಾರ್ಯಕರ್ತ ಶ್ರೀ ಅನಿಲ್ ನೌರ್ಯ, ಸಿಪಿಡಿಆರ್‌ಎಸ್‌ನ ರಾಷ್ಟ್ರೀಯ ಸಂಚಾಲಕ ಶ್ರೀ ದ್ವಾರಿಕಾನಾಥ್ ರಥ್ ಇದ್ದರು.



ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಾಧೀಶರಾದ ನ್ಯಾಯಮೂರ್ತಿ ಬಿ. ಎನ್. ಶ್ರೀಕೃಷ್ಣ ಅವರು ಮಾತನಾಡುತ್ತಿರುವುದು

ಜಸ್ಟಿಸ್ ಶ್ರೀಕೃಷ್ಣ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರಸ್ತುತ ಪರಿಸ್ಥಿತಿಯು ತೀವ್ರ ಬಿಕ್ಕಟ್ಟಿನಲ್ಲಿದೆ ಎಂದು ವಿವರಿಸಿದರು ಮತ್ತು ಸುಪ್ರೀಂ ಕೋರ್ಟ್‌ನಿಂದ ಸೆಷನ್ಸ್ ಕೋರ್ಟ್‌ವರೆಗೆ 5 ಕೋಟಿಗೂ ಹೆಚ್ಚು ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾರದೆ ಬಾಕಿ ಉಳಿದಿವೆ ಎಂದು ಹೇಳಿದರು. ನ್ಯಾಯ ವಿಳಂಬ ಎಂದರೆ ನ್ಯಾಯ ನಿರಾಕರಣೆ ಎಂದು ಹೇಳಿದ ಅವರು, "ಜನರ ಭಿನ್ನಾಭಿಪ್ರಾಯದ ಮತ್ತು ಪ್ರತಿಭಟನೆಯ ಧ್ವನಿ ಎತ್ತುವ ಹಕ್ಕು ಪ್ರಜಾಪ್ರಭುತ್ವದ ಜೀವಾಳ. ನಿಜವಾದ ಪ್ರಜಾಪ್ರಭುತ್ವದಲ್ಲಿ ಎಲ್ಲಾ ನಾಗರಿಕರನ್ನು ಸಮಾನವಾಗಿ ನಡೆಸಲಾಗುವುದು ಮತ್ತು ಕಾನೂನಿನ ಆಳ್ವಿಕೆ ಇರುತ್ತದೆ ಮತ್ತು ಧರ್ಮ ನಿರಪೇಕ್ಷತೆ ಎಂದರೆ ಇತರರ ಧಾರ್ಮಿಕ ನಂಬಿಕೆಗಳನ್ನು ಸಹಿಸಿಕೊಳ್ಳುವ ಸಾಮರ್ಥ್ಯ ಎಂದರ್ಥ" ಎಂದು ವಿಶ್ಲೇಷಿಸಿದರು. ಆದರೆ ಈ ಎಲ್ಲಾ ಮೂಲಭೂತ ಮೌಲ್ಯಗಳು ಈಗ ಭಾರತದಲ್ಲಿ ಅಪಾಯದಲ್ಲಿವೆ ಎಂದು ಅವರು ವಿಷಾದಿಸಿದರು. ನಾಗರಿಕ ಸಮಾಜವು ಕಷ್ಟಪಟ್ಟು ಗಳಿಸಿದ ಜನರ ಹಕ್ಕುಗಳ ಮೇಲಿನ ಈ ಎಲ್ಲಾ ದಾಳಿಗಳ ವಿರುದ್ಧ ಹೋರಾಡಲು ಮುಂದಾಗಬೇಕು ಎಂದು ಅವರು ಕೊನೆಯಲ್ಲಿ ಘೋಷಿಸಿದರು.

ನ್ಯಾಯಮೂರ್ತಿ ಎ. ಕೆ. ಪಟ್ನಾಯಕ್ ತಮ್ಮ ಭಾಷಣದಲ್ಲಿ, "ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗೆ ಜವಾಬ್ದಾರರಾಗಿರುವ ಸಂಸ್ಥೆಗಳೇ ಅವುಗಳನ್ನು ಅತಿ ಹೆಚ್ಚು ಉಲ್ಲಂಘಿಸುತ್ತಿವೆ......ಕಸ್ಟಡಿ ಸಾವು, ನಕಲಿ ಎನ್‌ಕೌಂಟರ್‌ಗಳು ಮತ್ತು ಜೈಲು ಹಿಂಸೆ, ಇವುಗಳು ಮೇಲ್ಗೈ ಪಡೆದಿವೆ. ಆದಿವಾಸಿಗಳು, ದಲಿತರು, ಮಹಿಳೆಯರು, ಮಕ್ಕಳು ಅಥವಾ ಇತರ ಯಾರೇ ತುಳಿತಕ್ಕೊಳಗಾದ ವ್ಯಕ್ತಿಗಳಾಗಿರಲಿ, ಅವರು ಅತ್ಯಂತ ಕೆಟ್ಟ ರೀತಿಯ ಶೋಷಣೆ ಮತ್ತು ಮಾನವ ಹಕ್ಕುಗಳ ಉಲ್ಲಂಘನೆಗೆ ಗುರಿಯಾಗಿದ್ದಾರೆ" ಎಂದು ಹೇಳಿದರು.

ನ್ಯಾಯವಾದಿ ಪ್ರಶಾಂತ್ ಭೂಷಣ್ ಅವರು ತೀವ್ರ ಬಿಕ್ಕಟ್ಟಿನಲ್ಲಿರುವ ಪ್ರಜಾಪ್ರಭುತ್ವ, ಧರ್ಮ ನಿರಪೇಕ್ಷತೆ ಮತ್ತು ಸೌಜನ್ಯತೆ ಎಂಬ ವಿಷಯದ ಕುರಿತು ಸಭೆಯನ್ನುದ್ದೇಶಿಸಿ ಮಾತನಾಡಿದರು. "ಭಾರತವು ಈಗ ಮೂಲಭೂತ ಹಕ್ಕುಗಳ ಮೇಲೆ ವ್ಯಾಪಕವಾದ ಬುಲ್ಡೋಜರ್ ಕಾರ್ಯಾಚರಣೆಯನ್ನು ನೋಡುತ್ತಿದೆ. ಸಾಂವಿಧಾನಿಕ ಸಂಸ್ಥೆಗಳನ್ನು ನಾಶಪಡಿಸಲಾಗಿದೆ ಮತ್ತು ಕರಾಳ ಕಾನೂನುಗಳನ್ನು ಹೇರಲಾಗಿದೆ... ಚುನಾವಣಾ ಆಯೋಗ ಮತ್ತು ಮಹಾ ಲೆಕ್ಕಪರಿಶೋಧಕರ ಕಚೇರಿಯ ಪ್ರಸ್ತುತ ಸ್ಥಿತಿಯು, ಅವು ಆಡಳಿತಾಂಗದ ಕೈಗೊಂಬೆಗಳಾಗುತ್ತಿರುವ ಜೀವಂತ ಉದಾಹರಣೆಗಳಾಗಿವೆ. ಅವುಗಳು ಬಿಜೆಪಿಯ ಹಣಕಾಸು ಮೂಲದ ಲೆಕ್ಕಪರಿಶೋಧನೆಯನ್ನು ನಿಲ್ಲಿಸಿವೆ; ಆದರೆ ವಿರೋಧ ಪಕ್ಷಗಳ ಖಾತೆಗಳನ್ನು ಮಾತ್ರ ಲೆಕ್ಕಪರಿಶೋಧನೆ ಮಾಡುತ್ತಿವೆ. ಸರ್ಕಾರದ ವಿರುದ್ಧ ಪ್ರತಿಭಟಿಸುವವರನ್ನು ಬಂಧಿಸಿ ವರ್ಷಗಟ್ಟಲೆ ವಿಚಾರಣೆಯಿಲ್ಲದೆ ಜೈಲಿನಲ್ಲಿ ನರಳುವಂತೆ ಮಾಡಲಾಗುತ್ತಿದೆ. ಸಮಯಕ್ಕೆ ಸರಿಯಾಗಿ ನ್ಯಾಯ ಮತ್ತು ಕಾನೂನು ವಿಚಾರಣೆಗಳು ಆಗುತ್ತಿಲ್ಲ. ಜನರು ತಮ್ಮ ಭಯವನ್ನು ತೊರೆದು ದಮನಕಾರಿ ಆಡಳಿತದ ವಿರುದ್ಧ ಹೋರಾಡಲು ಹೊರಬರಬೇಕು" ಎಂದು ಅವರು ಮನವಿ ಮಾಡಿದರು.

ದೇಶದ ಬಹುತೇಕ ಎಲ್ಲಾ ರಾಜ್ಯಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ಸಮಾವೇಶವು ಮುಖ್ಯ ಗೊತ್ತುವಳಿ ಮತ್ತು ಪ್ಯಾಲೆಸ್ಟೀನ್ ಕುರಿತು ಮತ್ತೊಂದು ಗೊತ್ತುವಳಿಯನ್ನು ಅಂಗೀಕರಿಸಿತು. ಬಲಿಷ್ಠ ಮಾನವ ಹಕ್ಕುಗಳ ಚಳುವಳಿಯನ್ನು ನಿರ್ಮಿಸಲು ದೇಶದ ಬುದ್ಧಿಜೀವಿಗಳು ಮತ್ತು ಸಾಮಾನ್ಯ ಜನರನ್ನು ಒಗ್ಗೂಡಿಸಲು ಅದು ನಿರ್ಧರಿಸಿತು.

# ಸಂಘ ಪರಿವಾರ ಹಾಗೂ ಅದರ ಮಿತ್ರಕೂಟದ ತೆಕ್ಕೆಗೆ ದೇಶದ ಸೈನಿಕ್ ಶಾಲೆಗಳು

ಸಂಘ ಪರಿವಾರ, ಬಿಜೆಪಿ ರಾಜಕಾರಣಿಗಳು ಮತ್ತು ಅವರ ಮಿತ್ರಕೂಟಕ್ಕೆ ಶೇಕಡಾ 62 ಸೈನಿಕ್ ಶಾಲೆಗಳನ್ನು ಕೇಂದ್ರ ಸರ್ಕಾರ ಹಸ್ತಾಂತರಗೊಳಿಸಿದೆ.

ದೇಶದ ಧಾರ್ಮಿಕ ಕ್ಷೇತ್ರಗಳಲ್ಲಿ ಒಂದಾದ ಬೃಂದಾವನದಲ್ಲಿ ಹಿಂದೂ ರಾಷ್ಟ್ರೀಯತೆಯ ಪ್ರತಿಪಾದಕಿ ಸಾಧ್ವಿ ರಿತಾಂಭರಾ ವಿದ್ಯಾರ್ಥಿನಿಯರಿಗಾಗಿ ಸಮ್ವಿದ ಗುರುಕುಲಮ್ ಬಾಲಿಕಾ ಸೈನಿಕ್ ಶಾಲೆಯನ್ನು ನಡೆಸುತ್ತಿದ್ದಾರೆ. ವಿಶ್ವ ಹಿಂದೂ ಪರಿಷತ್ತಿನ ಮಹಿಳಾ ವಿಭಾಗವಾದ ದುರ್ಗಾ ವಾಹಿನಿಯ ಸ್ಥಾಪಕಿಯಾದ ಅವರು ರಾಮ ಮಂದಿರ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಇತ್ತೀಚೆಗಷ್ಟೇ ಬೃಂದಾವನ, ಸೋಲನ್ ಮತ್ತು ಇತರೆ ಪ್ರದೇಶಗಳಲ್ಲಿರುವ ಅವರ 40 ಶಾಲೆಗಳು ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವ (ಪಿಪಿಪಿ – ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್)ದ ಅಡಿಯಲ್ಲಿ ಸೈನಿಕ್ ಶಾಲೆಗಳನ್ನು ನಡೆಸುವ ಒಪ್ಪಂದ ಪತ್ರಕ್ಕೆ ಸಹಿ ಹಾಕಿವೆ. 2021ರಲ್ಲಿ ಸೈನಿಕ್ ಶಾಲೆಗಳನ್ನು ನಡೆಸಲು ಖಾಸಗಿಯವರಿಗೆ ಕೇಂದ್ರ ಸರ್ಕಾರವು ಬಾಗಿಲುಗಳನ್ನು ತೆರೆಯಿತು. ಆ ವರ್ಷದ ವಾರ್ಷಿಕ ಬಜೆಟ್‌ನಲ್ಲಿ ದೇಶವ್ಯಾಪಿ 100 ಸೈನಿಕ್ ಶಾಲೆಗಳನ್ನು ಆರಂಭಿಸುವುದಾಗಿ ಸರ್ಕಾರವು ಘೋಷಿಸಿತು. ಸೈನಿಕ್ ಶಾಲಾ ಸಮಿತಿಯು ಸೂಚಿಸಿರುವ ಮಾನದಂಡಗಳ ಪ್ರಕಾರ ಭೂಮಿ, ಭೌತಿಕ ಮತ್ತು ವಿದ್ಯುನ್ಮಾನ ಸೌಕರ್ಯಗಳು, ಆರ್ಥಿಕ ಸಂಪನ್ಮೂಲಗಳು, ಸಿಬ್ಬಂದಿ ಇತ್ಯಾದಿ ಮೂಲಭೂತ ಸೌಲಭ್ಯ–ಸಂಪನ್ಮೂಲಗಳನ್ನು ಹೊಂದಿರುವ ಯಾವುದೇ ಶಾಲೆಗೆ ಸೈನಿಕ್ ಶಾಲೆಯೆಂದು ಮಾನ್ಯತೆ ನೀಡಬಹುದು. ಈ ಯೋಜನಾ ಪತ್ರದ ಪ್ರಕಾರ, ಶಾಲೆಯೊಂದಕ್ಕೆ ಮಾನ್ಯತೆ ನೀಡಲು ಕೇವಲ ಮೂಲಭೂತ ಸೌಕರ್ಯವೊಂದೇ ಮಾನದಂಡವಾಗಿದೆ. ಇದರಿಂದಾಗಿ, ಸಂಘ ಪರಿವಾರ ಮತ್ತು ಅದೇ ವಿಚಾರಧಾರೆಗಳನ್ನು ಹೊಂದಿರುವ ಸಂಸ್ಥೆಗಳಿಗೆ ಸಂಬಂಧಪಟ್ಟ ಶಾಲೆಗಳು ಕೂಡ ಮಾನ್ಯತೆಗೆ ಅವಕಾಶ ಕೋರಬಹುದು. ಕೇಂದ್ರ ಸರ್ಕಾರದ ಪತ್ರಿಕಾ ಮಾಹಿತಿ ಮತ್ತು ಮಾಹಿತಿ ಹಕ್ಕು ಕಾಯ್ದೆಯ ಮೂಲಕ ದೊರೆತಿರುವ ಪ್ರತಿಕ್ರಿಯೆಗಳು ಆಘಾತಕಾರಿ ಬೆಳವಣಿಗೆಗಳನ್ನು ತೆರೆದಿಡುತ್ತಿವೆ. ಇಲ್ಲಿಯವರೆಗೂ ಒಪ್ಪಂದಕ್ಕೆ ಒಳಪಟ್ಟ 40 ಸೈನಿಕ್ ಶಾಲೆಗಳಲ್ಲಿ, ಶೇಕಡ 62 ರಷ್ಟು ಶಾಲೆಗಳನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ಅದಕ್ಕೆ ಸಂಬಂಧಪಟ್ಟ ಸಂಘಟನೆಗಳು, ಭಾರತೀಯ ಜನತಾ ಪಕ್ಷಕ್ಕೆ ಸೇರಿದ ರಾಜಕಾರಣಿಗಳು ಮತ್ತು ಅದರ ರಾಜಕೀಯ ಮಿತ್ರಕೂಟ, ಹಿಂದುತ್ವವಾದಿ ಸಂಘಟನೆಗಳು, ವ್ಯಕ್ತಿಗಳು ಮತ್ತು ಇತರೆ ಹಿಂದೂ ಧಾರ್ಮಿಕ ಸಂಘಟನೆಗಳಿಗೆ ನೀಡಲಾಗಿದೆ.

ಈ ಶಾಲೆಗಳನ್ನು ಈಗ ಅಸ್ತಿತ್ವದಲ್ಲಿರುವ ಸೈನಿಕ್ ಶಾಲೆಗಳಿಗಿಂತ ವಿಭಿನ್ನವಾಗಿ ನಡೆಸಬೇಕೆಂಬ ನಿರ್ಧಾರವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ 12 ಅಕ್ಟೋಬರ್ 2021ರಂದು ನಡೆದ ಕ್ಯಾಬಿನೆಟ್ ಸಭೆಯು ಅಂಗೀಕರಿಸಿತ್ತು. ಈ ಯೋಜನಾ ಪತ್ರದ ಪ್ರಕಾರ ಸೈನಿಕ್ ಶಾಲಾ ಸಮಿತಿಯ ಮೂಲಕ, ವಾರ್ಷಿಕ ಶುಲ್ಕದ ಶೇಕಡ 50ರಷ್ಟನ್ನು (ಗರಿಷ್ಠ 50 ವಿದ್ಯಾರ್ಥಿಗಳ, ತರಗತಿಯ ಶೇಕಡ 50 ವಿದ್ಯಾರ್ಥಿಗಳ) ಸರ್ಕಾರವೇ ಭರಿಸುತ್ತದೆ. ಅಂದರೆ 12ನೇ ತರಗತಿಯವರೆಗೂ ವಿದ್ಯಾರ್ಥಿಗಳನ್ನು ಹೊಂದಿರುವ ಒಂದು ಶಾಲೆಗೆ ಸೈನಿಕ್ ಶಾಲಾ ಸಮಿತಿಯು ಗರಿಷ್ಠ 1.2 ಕೋಟಿ ವಾರ್ಷಿಕ ಸಹಾಯಧನ ನೀಡುತ್ತದೆ. ಇದನ್ನು ವಿದ್ಯಾರ್ಥಿಗಳಿಗೆ ಅರೆ ಆರ್ಥಿಕ ಸಹಾಯದ ರೂಪದಲ್ಲಿ ನೀಡಲಾಗುತ್ತದೆ. 12ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಕ್ಷಮತೆಯ ಆಧಾರದ ಮೇಲೆ ತರಬೇತಿ ಸಹಾಯಧನದ ರೂಪದಲ್ಲಿ ವಾರ್ಷಿಕವಾಗಿ ರೂ. 10 ಲಕ್ಷಗಳವರೆಗೆ ಪ್ರತಿ ಶಾಲೆಗೆ ನೀಡಲಾಗುತ್ತದೆ.

ರಿಪೋರ್ಟರ್ಸ್ ಕಲೆಕ್ಟಿವ್‌ನ ವರದಿಯು (3 ಏಪ್ರಿಲ್ 2025) ಬಹಿರಂಗಪಡಿಸಿರುವಂತೆ, ಸರ್ಕಾರದ ಈ ಎಲ್ಲಾ ಸಹಾಯದ ಹೊರತಾಗಿಯೂ, ಹಿರಿಯ ಪ್ರೌಢಶಾಲಾ ತರಗತಿ ವಿದ್ಯಾರ್ಥಿಗಳ ವಾರ್ಷಿಕ ಶುಲ್ಕವು ಕನಿಷ್ಠ 13,800ರೂ. ಇಂದ 2,47,900ರೂ. ವರೆಗೂ ಇದೆ. ಹೊಸ ಸೈನಿಕ್ ಶಾಲೆಗಳ ಶುಲ್ಕದಲ್ಲಿರುವ ಗಣನೀಯ ತಾರತಮ್ಯವನ್ನು ಇದು ತೋರಿಸುತ್ತದೆ. (ರಿಪೋರ್ಟರ್ಸ್ ಕಲೆಕ್ಟಿವ್ 03/04/2024)

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120. Website: www.sucicommunist.org EDITOR: K.RADHAKRISHNA